# ನೀನಾಸಮ್:
# ಒಂದು ಅವಲೋಕನ

*ಕಳೆದ ಹಲವು ದಶಕಗಳಿಂದ ನೀನಾಸಮ್ ಸಂಸ್ಥೆಯು ರಂಗಶಿಕ್ಷಣ ಕೇಂದ್ರ, ತಿರುಗಾಟ, ಸಂಸ್ಕೃತಿ ಶಿಬಿರ ಮೊದಲಾಗಿ ತನ್ನ ಹಲವು ಕಾರ್ಯಕ್ರಮಗಳ ಮೂಲಕ ಬೇರೆಬೇರೆ ಬಗೆಯ ಕೆಲಸವನ್ನು ನಡೆಸುತ್ತ ಬಂದಿದೆ. ಮತ್ತು, ನೀನಾಸಮ್ ಸಂಸ್ಥೆಯು ಸುಮಾರು 110 ಸದಸ್ಯರನ್ನೊಳಗೊಂಡು ಒಂದು ರೆಜಿಸ್ಟರ್ಡ್ ಸೊಸೈಟಿ ಆಗಿ 15 ಜನರ ಆಡಳಿತ ಮಂಡಳಿಯ ಮೂಲಕ ತನ್ನ ಕೆಲಸಗಳನ್ನು ನಿರ್ವಹಿಸಿಕೊಳ್ಳುತ್ತಿದೆ. ಕಳೆದ ವರ್ಷ, ನೀನಾಸಮ್‌ನ ಆಡಳಿತ ಮಂಡಳಿಯ ಸದಸ್ಯರು ತಮ್ಮನ್ನು ತಾವು ಪರಾಮರ್ಶಿಸಿಕೊಳ್ಳುವ ಮತ್ತು ಈ ಮಂಡಳಿಯ ನಿರ್ವಹಣೆಯಲ್ಲಿ ಇನ್ನಷ್ಟು ಕ್ರಿಯಾಶೀಲತೆಯನ್ನು ತರುವ ಉದ್ದೇಶವಿಟ್ಟುಕೊಂಡು ಹಲವಾರು ಕಿರುಚಿಂತನ ಶಿಬಿರಗಳನ್ನು ನಡೆಸಿದ್ದಾರೆ.*

*ಇಂಥ ಚಿಂತನ ಶಿಬಿರಗಳ ಸರಣಿಯ ಒಂದು ಭಾಗವಾಗಿ, ಕಳೆದ 2012 ಜುಲೈ 16ರಂದು ನೀನಾಸಮ್‌ನ ಆಡಳಿತ ಮಂಡಳಿಯು ಕರ್ನಾಟಕದ ಕೆಲವು ಸಾಮಾಜಿಕ ಕ್ರಿಯಾಶೀಲರನ್ನೂ, ಚಿಂತಕರನ್ನೂ ಕರೆದು ಅವರಿಂದ ಸಂಸ್ಥೆಯ ಬಗ್ಗೆ ಸಲಹೆ–ಪ್ರತಿಕ್ರಿಯೆಗಳನ್ನು ಪಡೆದುಕೊಂಡಿದೆ. ಸುಮಾರು 3 ಗಂಟೆಗಳ ಕಾಲ ನಡೆದ ಈ ಕಿರು ಸಭೆಯಲ್ಲಿ ನೀನಾಸಮ್ ಆಡಳಿತ ಮಂಡಳಿಯ ಎಲ್ಲ ಸದಸ್ಯರು ಮತ್ತು ನೀನಾಸಮ್ ಅಂಗ ಸಂಸ್ಥೆಗಳ ನೌಕರರು ಹಾಗೂ ಕೆಲವು ನೀನಾಸಮ್ ಸದಸ್ಯರು ಪಾಲ್ಗೊಂಡಿದ್ದರು. ಈ ಸಭೆಗೆ ಆಹ್ವಾನಿತರಾಗಿ ಶ್ರೀಯುತರಾದ ಜಿ. ರಾಜಶೇಖರ, ಡಾ.ಜೆ.ಎಸ್. ಸದಾನಂದ, ಡಿ.ಎಸ್. ನಾಗಭೂಷಣ ಮತ್ತು ರಘುನಂದನ ಅವರು ಬಂದು ತಮ್ಮ ವಿಚಾರಗಳನ್ನು ಮಂಡಿಸಿದ್ದಾರೆ.*



*ಈ ಸಭೆಗೆ ಮೇಲ್ಕಂಡ ಗಣ್ಯರನ್ನು ಆಹ್ವಾನಿಸಿದಾಗ, ನಾವು ಸ್ಥೂಲವಾಗಿ ಅವರಿಂದ ಬಯಸುವ ಪ್ರತಿಕ್ರಿಯೆ ಮತ್ತು ಸಲಹೆಗಳು ಈ ಕೆಳಕಂಡ ಬಗೆಯವು –– ಎಂದು ಸೂಚಿಸಿದ್ದೆವು:*

- *ನೀನಾಸಮ್ ಸಂಸ್ಥೆಯು ಇದುವರೆಗಿನ ಕಾರ್ಯಕ್ರಮಗಳಲ್ಲಿ ನಿಮಗೆ ಮುಖ್ಯವೆನ್ನಿಸುವ, ಅಥವಾ ಹಾಗಲ್ಲವೆಂದು ಅನ್ನಿಸುವ ಅಂಶಗಳು ಯಾವುವು?*
- *ನೀನಾಸಮ್‌ನ ಯಾವುದೇ ಕಾರ್ಯಕ್ರಮಗಳ ಬಗ್ಗೆ ನಿಮಗಿರುವ ಸಹಮತ–ಭಿನ್ನಮತಗಳು ಯಾವುವು?*
- *ನೀನಾಸಮ್‌ನ ನೀತಿ–ಧೋರಣೆಗಳ ಬಗ್ಗೆ ನಿಮ್ಮ ಅಭಿಪ್ರಾಯಗಳೇನು?*
- *ನೀನಾಸಮ್ ಮುಂದಿನ ದಿನಗಳಲ್ಲಿ ಯಾವ ಬಗೆಯ ಕೆಲಸ ಮಾಡಬೇಕೆಂದು ನೀವು ಸೂಚಿಸುತ್ತೀರಿ?*
- *ಇನ್ನಾವುದೇ ಬಗೆಯ ನಿರ್ದಿಷ್ಟ ಸಲಹೆ–ಸೂಚನೆಗಳನ್ನು ನೀವು ಸಂಸ್ಥೆಗೆ ಕೊಡಬಯಸುತ್ತೀರಾ?*

*ಈ ಪ್ರಶ್ನೆಗಳಿಗೆ ಪ್ರತಿಸ್ಪಂದಿಯಾಗಿ, ಆವರು ಅಂದು ಆಡಿದ ಮಾತುಗಳ ಲಿಖಿತ ರೂಪವನ್ನು ಇಲ್ಲಿ ಪ್ರಕಟಿಸಲಾಗುತ್ತಿದೆ.*

*ದಾಖಲಿತ ಮಾತುಗಳನ್ನು ಬರಹಕ್ಕೆ ಇಳಿಸಿಕೊಟ್ಟವರು ಶ್ರೀ ತಪಸ್ವಿ ಹೆಚ್. ಎಂ. ಅಂದು ಮಾತನಾಡಿದ ಶ್ರೀಯುತರಾದ ಜಿ. ರಾಜಶೇಖರ, ಡಾ.ಜೆ.ಎಸ್. ಸದಾನಂದ, ಡಿ.ಎಸ್. ನಾಗಭೂಷಣ ಮತ್ತು ರಘುನಂದನ ಈ ನಾಲ್ವರೂ ಬರಹರೂಪಕ್ಕೆ ಬಂದ ತಮ್ಮ ಮಾತುಗಳನ್ನು ನೋಡಿ ತಿದ್ದಿ ಕೊಟ್ಟಿದ್ದಾರೆ. ಅವರಿಗೆಲ್ಲ ನಾವು ಋಣಿಗಳಾಗಿದ್ದೇವೆ.*

# ಇಂದಿನ ಸಮಸ್ಯೆಗಳಿಗೆ ಸ್ಪಂದಿಸಬೇಕು

## ಡಿ.ಎಸ್. ನಾಗಭೂಷಣ

ಸುಮಾರು ಎರಡು ತಿಂಗಳ ಹಿಂದೆ ಅಕ್ಷರ ಅವರು ನನ್ನನ್ನು ನೀನಾಸಮ್ ಬಗ್ಗೆ ಅನಿಸಿಕೆಗಳನ್ನು ಹೇಳಲು ಕೇಳಿಕೊಂಡಾಗ ನಾನೊಂದು ಕ್ಷಣ ಬೆಚ್ಚಿಬಿದ್ದೆ. ಕಾರಣ ನೀನಾಸಮ್‌ನ ಗಾತ್ರ ಹಾಗೂ ನೀನಾಸಮ್ ಎದುರಿಗೆ ನನ್ನ ಗಾತ್ರದ ಸ್ಪಷ್ಟ ಕಲ್ಪನೆ ನನಗಿತ್ತು. ನೀನಾಸಮ್ ಜೊತೆಗೆ ನನಗೆ ಅಂತಹ ಘನಿಷ್ಟವಾದ ಸಂಬಂಧವೇನೂ ಇಲ್ಲ. ಆದರೆ ದೀರ್ಘಕಾಲಿಕವಾದ ಸಂಬಂಧವಿದೆ. ಅಲ್ಲದೆ ನೀನಾಸವ್‌ನ ಬಹುಪಾಲು ಚಟುವಟಿಕೆಗಳಲ್ಲಿ ನಾನು ಭಾಗವಹಿಸಿದ ಅನುಭವವೂ ಇಲ್ಲ.

ನನ್ನ ಮತ್ತು ನೀನಾಸವ್ ಜತೆಗಿನ ಸಂಬಂಧಕ್ಕೆ ಹಿನ್ನೆಲೆಯಾಗಿ ಹೇಳುವುದಾದರೆ, ಸೆಂಟ್ರಲ್ ಕಾಲೇಜಿನಲ್ಲಿ ನಾನು ನನ್ನ ಕುಟುಂಬದ ಒತ್ತಾಯಕ್ಕೆ ಸಿಕ್ಕು ವಿಜ್ಞಾನದ ಅಭ್ಯಾಸ ಮಾಡುತ್ತಿರುವಾಗ – ನಾನು ನನ್ನ ಮನೋವೃತ್ತಿಯಿಂದ ವಿಜ್ಞಾನದ ವಿದ್ಯಾರ್ಥಿಯೇ ಅಲ್ಲ – ಅದರ ಒತ್ತಡಗಳಿಂದ ಪಾರಾಗಲು ಸಾಹಿತ್ಯ ಮತ್ತು ಸಂಸ್ಕೃತಿಗಳ ಅಧ್ಯಯನದ ಕಡೆ ಆಸಕ್ತಿ ಬೆಳೆಸಿಕೊಂಡೆ. ಅದು ಹೊಸ ಸಾಹಿತ್ಯ–ಸಂಸ್ಕೃತಿ ಚಳುವಳಿಗಳ ಏರುಗಾಲ. ಅಂದರೆ ಹೊಸ ಸಾಹಿತ್ಯ, ಹಾಗೆಯೇ ಹೊಸ ನಾಟಕಗಳ, ಹೊಸ ಸಿನಿಮಾಗಳ ಕಾಲವದಾಗಿತ್ತು. ಹೊಸ ಹೊಸ ರೀತಿಯ ಸಿನಿಮಾಗಳು ಬೆಂಗಳೂರಿಗೆ ಕಾಲಿಡಲು ಪ್ರಾರಂಭವಾಗಿತ್ತು. ಸುಚಿತ್ರ ಫಿಲ್ಮ್ ಸೊಸೈಟಿ ಪ್ರಾರಂಭವಾಗಿತ್ತು. ಸತ್ಯಜಿತ್ ರಾಯ್ ಮತ್ತು ಋತ್ವಿಕ್ ಘಟಕ್‌ರ ಜೊತೆಗೆ ಮಣಿ ಕೌಲ್, ಮೃಣಾಲ್ ಸೇನ್ ಹೆಸರುಗಳು ಪ್ರಚಲಿತಗೊಳ್ಳುತ್ತಿದ್ದವು. ಬಿ.ವಿ. ಕಾರಂತರು ದೆಹಲಿಯಿಂದ ಬಂದು ಬೆಂಗಳೂರಿನಲ್ಲಿ ನಾಟಕವನ್ನು ಮಾಡಿಸಲು ಪ್ರಾರಂಭಿಸಿದ್ದರು, ಇನ್ನೊಂದೆಡೆ ಲಂಕೇಶ್, ತೇಜಸ್ವಿ ಮುಂತಾದವರು ಅಡಿಗರ ನಾಯಕತ್ವದಲ್ಲಿ ಭಿನ್ನಾಭಿಪ್ರಾಯವನ್ನು ಹೊಂದಿದವರಾಗಿ ಹೊಸ ನೆಲೆಯ ಸಾಂಸ್ಕೃತಿಕ ಚರ್ಚೆಗಳನ್ನು ಪ್ರಾರಂಭಿಸಿದ್ದರು. ಸೆಂಟ್ರಲ್ ಕಾಲೇಜಿನ ಆವರಣದಲ್ಲಿ ನಂಜುಂಡಸ್ವಾಮಿಯವರ ಸಮಾಜವಾದಿ ಯುವಜನ ಸಭಾದ ಚಟುವಟಿಕೆಗಳು –ಅವುಗಳೊಂದಿಗೆ



ನಾನು ಆಗ ಗುರುತಿಸಿಕೊಳ್ಳದಿದ್ದರೂ – ಆರಂಭವಾಗಿದ್ದವು. ಇಂತಹ ಸಂದರ್ಭದಲ್ಲಿ ಸೆಂಟ್ರಲ್ ಕಾಲೇಜಿನ ಲೈಬ್ರರಿಗೆ ಬರುತ್ತಿದ್ದ 'ಸಾಕ್ಷಿ' ನನ್ನ ಸಾಹಿತ್ಯ ಜೀವನದ ಬಾಗಿಲನ್ನು ತೆರೆಯಿತು. ಅದನ್ನು ಓದಲು ಸಾಹಿತ್ಯ ವಿದ್ಯಾರ್ಥಿಗಳಿಗಿಂತ ಹೆಚ್ಚಾಗಿ ನಾವು ಕೆಲವರು ವಿಜ್ಞಾನದ ವಿದ್ಯಾರ್ಥಿಗಳು ಮುಗಿಬೀಳುತ್ತಿದ್ದೆವು. ಹೀಗೆ 'ಸಾಕ್ಷಿ'ಯ ಮೂಲಕ ನನಗೆ ನೀನಾಸಮ್‌ನ ಪರಿಚಯವಾಯಿತು.

'ಸಾಕ್ಷಿ'ಯಲ್ಲಿ ನನಗೆ ಆಗ ವಿಶೇಷವಾದ ಆಸಕ್ತಿ ಕೆರಳಿಸಿದ್ದು ಸಿನೆಮಾ ಕುರಿತು ಬರಲಾಂಭಿಸಿದ್ದ ಲೇಖನಗಳು. ನಾನು ನಾಟಕದ ಕುಟುಂಬದ ಹಿನ್ನೆಲೆಯವನಾಗಿದ್ದರೂ – ನನ್ನ ತಂದೆ ಕೇಳಿಕೆ–ನಾಟಕಗಳ ಮಾಸ್ತರ ರಾಗಿದ್ದರೂ – ನನ್ನ ಆಸಕ್ತಿ ಬಾಲ್ಯದಿಂದ ಸಿನೆಮಾ ಕಡೆಗೇ ಇದ್ದು, ಈ ಸಂದರ್ಭದಲ್ಲೆ ರೇ ಅವರ 'ಸೀಮಾಬದ್ಧ' ಚಿತ್ರ ನೋಡಿ, ಸಿನೆಮಾಗಳು ಹೀಗೂ ಇರಬಹುದಲ್ಲಾ ಎಂದು ನಾನು ಬೆರಗುಗೊಂಡೆನೆಂದೇ ಹೇಳಬೇಕು. ನಂತರ ನಾನು 'ಸುಚಿತ್ರ'ದಲ್ಲಿ ಅತಿಥಿ ಪ್ರೇಕ್ಷಕನಾಗಿ ಅನೇಕ ವಿದೇಶಿ ಚಿತ್ರಗಳನ್ನು ನೋಡಿದೆ. 'ಬೈಸಿಕಲ್ ಥೀವ್ಸ್' ನನಗೆ ಚೆನ್ನಾಗಿ ನೆನಪಿರುವ ಚಿತ್ರ. ಜೊತೆಗೆ ಮೃಣಾಲ್ ಸೇನರ, ಸತ್ಯಜಿತ್ ರೇಯವರ ಅನೇಕ ಹೊಸ ಹೊಸ ಸಿನೆಮಾಗಳನ್ನು ನೋಡಿದೆ. ಇವೆಲ್ಲಾ ನನ್ನಲ್ಲಿ ಹೊಸ ಬಗೆಯ ತಳಮಳ ಮತ್ತು ಕುತೂಹಲಗಳು ಮೂಡಲು ಕಾರಣವಾಗಿದ್ದವು. ಆ ಸಮಯಕ್ಕೆ ಸರಿಯಾಗಿ ಸುಬ್ಬಣ್ಣನವರು ಅಡಿಗರ ಸಂಪಾದಕೀಯದ ಸಾರಥ್ಯದಲ್ಲಿ 'ಸಾಕ್ಷಿ'ಯ ಸಿನೆಮಾ ಸಂಚಿಕೆ ತರಲು ಹೊರಟಿದ್ದರು. ಆಗ ಸಣ್ಣಪುಟ್ಟ ಕತೆ–ಕವನಗಳನ್ನು ಬರೆದು ಅಲ್ಲಿಲ್ಲಿ ಪ್ರಕಟಿಸಿಕೊಳ್ಳುವ ಸಾಹಸ ಮಾಡುತ್ತಿದ್ದ ಯುವ ಬರಹಗಾರನಾಗಿದ್ದ ನಾನು 'ಸಾಕ್ಷಿ'ಗೆ 'ಹೊಸ ಸಿನಿಮಾ ಹೊಸ ಭಾಷೆ' ಎಂದೇನೋ ಹೆಸರಿನ – ಹೆಸರು ಸ್ಪಷ್ಟವಾಗಿ ನೆನಪಿಲ್ಲ – ಒಂದು ಲೇಖನವನ್ನು ಬರೆದು ಕಳಿಸಿದೆ. ಇದಕ್ಕೆ ಸುಬ್ಬಣ್ಣನವರಿಂದ ನನಗೆ ಆಗ ರೋಮಾಂಚನವನ್ನೇ ಉಂಟುಮಾಡಿದ ಎಂದು ಹೇಳಬಹುದಾದ ಉತ್ತರ ಬಂತು: 'ಹೊಸ ರೀತಿಯ ಸಿನೆಮಾಗಳ ಬಗ್ಗೆ ಇಂದು ಯಾರೂ ಬರೆಯುವವರೇ ಇಲ್ಲ, ಅಭಿಪ್ರಾಯಗಳನ್ನು ಹಂಚಿಕೊಳ್ಳುವವರೇ ಇಲ್ಲ. ನೀವಾರೋ ಗೊತ್ತಿಲ್ಲ, ಲೇಖನ ತುಂಬಾ ಚೆನ್ನಾಗಿದೆ, ನಿಮ್ಮ ಲೇಖನವನ್ನು ಪ್ರಕಟಿಸುತ್ತಿದ್ದೇನೆ' ಎಂದು. ಇದು ಸಾಹಿತ್ಯ ಪತ್ರಿಕೆಯಲ್ಲಿ – ಅಥವಾ ಸಾಹಿತ್ಯ ಪಾಂಡಿತ್ಯದ ಪತ್ರಿಕೆ ಎನ್ನಬಹುದೇನೋ ಗೊತ್ತಿಲ್ಲ –ಪ್ರಕಟವಾದ ನನ್ನ ಮೊದಲ ಲೇಖನವಾಗಿತ್ತು. ಈ ಲೇಖನ ಪ್ರಕಟವಾದ ನಂತರ ಆಗಾಗ್ಗೆ ಸುಬ್ಬಣ್ಣನವರಿಗೆ ನಾನು ಪತ್ರಗಳನ್ನು ಬರೆಯುತ್ತಿದ್ದೆ. ಅವರಿಂದಲೂ ತಪ್ಪದೆ ಉತ್ತರ ರೂಪದಲ್ಲಿ ನನ್ನ ಓದು–ಅಭಿರುಚಿಗಳನ್ನು ವಿಚಾರಿಸಿಕೊಂಡ ಪತ್ರಗಳು ಬರುತ್ತಿದ್ದವು.

1973ರಲ್ಲಿ ಗಣಿತಶಾಸ್ತ್ರದಲ್ಲಿ ಎಂ.ಎಸ್.ಸಿ ಪದವಿ ಮುಗಿಸಿದ ನಾನು

ಶಾಶ್ವತವಾಗಿ ವಿಜ್ಞಾನಕ್ಕೆ ಬೆನ್ನುಮಾಡಿ ಮರುವರ್ಷ ದೆಹಲಿಯ ಆಕಾಶವಾಣಿ ಕೇಂದ್ರದಲ್ಲಿ ಕನ್ನಡ ವಾರ್ತಾವಾಚಕನಾಗಿ ಕೆಲಸಕ್ಕೆ ಸೇರಿಕೊಂಡೆ. ಆಗ ಸುಬ್ಬಣ್ಣ 'ದೆಹಲಿ ಫಿಲ್ಮ್ ಸೊಸೈಟಿಗೆ ಒಂದು ಪತ್ರವನ್ನು ಕೊಡುತ್ತೇನೆ. ಅಲ್ಲಿ ನೀವು ಸಿನೆಮಾಗಳನ್ನು ನೋಡಬಹುದು' ಎಂದು ಒಂದು ಪತ್ರದಲ್ಲಿ ತಿಳಿಸಿದರು. ಹೀಗೆ ದೆಹಲಿ ಫಿಲ್ಮ್ ಸೊಸೈಟಿ ಹಾಗೂ ಬಂಗಾಳಿ ಫಿಲ್ಮ್ ಸೊಸೈಟಿಗಳ ಸದಸ್ಯನಾದೆ, ಅಲ್ಲಿ ಜಗತ್ತಿನ ಅತ್ಯುತ್ತಮ ಚಿತ್ರಗಳನ್ನು ವೀಕ್ಷಿಸಿದೆ. ಬಂಗಾಳಿ ಫಿಲ್ಮ್ ಸೊಸೈಟಿಯಲ್ಲಿ ಋತ್ವಿಕ್ ಘಟಕ್‌ರ ಎಲ್ಲ ಮತ್ತು ರೇ ಅವರ ಆವರೆಗಿನ ಎಲ್ಲ ಚಿತ್ರಗಳನ್ನೂ ನೋಡಿದ್ದು ಒಂದು ಅಪೂರ್ವ ಅನುಭವ. ಅದೇ ಸಮಯಕ್ಕೆ ರಾಷ್ಟ್ರಾದ್ಯಂತ 'ತುರ್ತುಪರಿಸ್ಥಿತಿ' ಘೋಷಣೆಯಾಯಿತು. ಹಾಗೆಯೇ ತುರ್ತುಪರಿಸ್ಥಿತಿ ವಿರೋಧಿ ಚಳುವಳಿಯೂ ಆರಂಭವಾಗಿದ್ದು ನಾನೂ ಆಗ ಜವಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿದ್ದ ಕರ್ನಾಟಕದ ನನ್ನ ಸಮಾನ ಮನಸ್ಕ ಗೆಳೆಯರ ಮೂಲಕ ಈ ಚಳುವಳಿಯೊಂದಿಗೆ ಗುರುತಿಸಿಕೊಳ್ಳಲಾರಂಭಿಸಿದ್ದೆ. ಈ ಸಮಯದಲ್ಲಿ ಸುಬ್ಬಣ್ಣನವರು ನನಗೆ 'ಗುಪ್ತಸಾಹಿತ್ಯ' ವೇನಾದರೂ ಇದ್ದರೆ ಕಳಿಸಲು ಪತ್ರ ಬರೆಯುತ್ತಿದ್ದರು. ನನಗೆ ಇದು ಮೊದಲು ಅರ್ಥವಾಗಲಿಲ್ಲ. ಅದೇ ಸಮಯಕ್ಕೆ 'ಜೆ.ಪಿ.ಯವರ "ಪ್ರಿಸನ್ ಡೈರಿ" ಗುಪ್ತವಾಗಿ ಸಂಚಲನೆಯಾಗುತ್ತಿದೆಯಂತೆ. ನೀವು ಗಮನಿಸಿದ್ದೀರಾ?' ಎಂದು ತೇಜಸ್ವಿಯವರಿಂದ ಪತ್ರವೊಂದು ಬಂತು. ಆಗ ಗುಪ್ತ ಸಾಹಿತ್ಯ ವೆಂದರೇನೆಂದು ತಿಳಿದು, ಅಷ್ಟು ಹೊತ್ತಿಗೇ ಆ 'ಡೈರಿ'ಯ ಅನುವಾದವನ್ನು ಪ್ರಾರಂಭಿಸಿದ್ದ ನಾನು ಅದರ ಕೆಲ ಪುಟಗಳನ್ನು – ಅವುಗಳೊಂದಿಗೆ ನನಗೆ ದೊರೆತ ಒಂದೆರಡು ಕರಪತ್ರಗಳೊಂದಿಗೆ – ಸುಬ್ಬಣ್ಣನವರಿಗೆ ಕಳಿಸಲು ಪ್ರಾರಂಭಿಸಿದೆ. 'ತುರ್ತು ಪರಿಸ್ಥಿತಿ'ಯ ನಂತರದಲ್ಲಿ ನೆಲಮನೆ ಪ್ರಕಾಶನದಿಂದ 'ಜೆಪಿ ಸೆರೆಮನೆಯ ದಿನಚರಿ' ಪ್ರಕಟವಾಯಿತು. ಹೀಗೆ ನಾನು ನೀನಾಸಮ್‌ಗೆ ನೇರವಾಗಿ ಭೇಟಿ ಕೊಟ್ಟಿರದೇ ಇದ್ದರೂ ಸುಬ್ಬಣ್ಣನವರೊಡನೆ ಬೆಳೆಸಿಕೊಂಡಿದ್ದ ಈ ಪತ್ರವ್ಯವಹಾರದಿಂದ ನೀನಾಸಮ್‌ನೊಡನೆ ನನ್ನ ಸಂಬಂಧ ಪರೋಕ್ಷವಾಗಿ ಯಾದರೂ ಸ್ಥಾಪಿತವಾಗಿತ್ತು.

ನಂತರದ ವರ್ಷಗಳಲ್ಲಿ–1982ರ ಹೊತ್ತಿಗೆ–ಆಕಾಶವಾಣಿಯಲ್ಲೇ ನಾನು ಕಾರ್ಯಕ್ರಮ ನಿರ್ವಾಹಕನಾಗಿ ಆಯ್ಕೆಯಾದೆ. ಆ ಹುದ್ದೆ ವಹಿಸಿಕೊಳ್ಳಲು ಭದ್ರಾವತಿ ಆಕಾಶವಾಣಿಗೆ ಬರುವ ಮುನ್ನ ದೆಹಲಿಯ ನನ್ನ ಕೊನೆಯ ಕೆಲ ವರ್ಷಗಳಲ್ಲಿ ರಾಷ್ಟ್ರೀಯ ನಾಟಕಶಾಲೆಯ ಪಕ್ಕದಲ್ಲಿಯೇ ನನ್ನ ಕೊಠಡಿಯಿದ್ದದ್ದರಿಂದ ಕರ್ನಾಟಕ ನಾಟಕಲೋಕದ ದಿಗ್ಗಜರುಗಳೊಡನೆಯ ಸಂಪರ್ಕ ಸಾಧ್ಯವಾಗಿತ್ತು. ಆಗ ಅಲ್ಲಿ ಇಂದಿನ ಕನ್ನಡ ರಂಗಭೂಮಿಯ



ದೊಡ್ಡ ಹೆಸರುಗಳೆನಿಸಿರುವ – ಜಂಬೆ, ಅಕ್ಷರ, ರಘುನಂದನ, ಮಾಲತಿ, ನಾಯರಿ, ಕಿಟ್ಟಿ, ತಾತಾಚಾರಿ, ಪದ್ಮಶ್ರೀ, ಬಸವಲಿಂಗಯ್ಯ ಎಲ್ಲರೂ ವಿದ್ಯಾರ್ಥಿಗಳು. ಪ್ರಸನ್ನ ಆಗತಾನೇ ಪದವಿ ಮುಗಿಸಿ ಹೋಗಿ 'ಸಮುದಾಯ' ಆರಂಭಿಸಿದ್ದರು. ಫ್ರಿಟ್ಸ್ ಬೆನ್ನಿವಿಟ್ಸ್‌ರ ಪರಿಚಯವೂ ಆಯಿತು. ಇದರಿಂದಾಗಿ ನಾನು ಇವರೆಲ್ಲರ ಒಡನಾಟದಲ್ಲಿ ಅನೇಕ ಹೊಸ ಹೊಸ ನಾಟಕಗಳನ್ನು ನೋಡಿದೆ. ಅಲ್ಲಿ ಬಿ.ಎಂ. ಷಾ ಅವರು ತಯಾರಿಸಿದ 'ವೀರ ಅಭಿಮನ್ಯು' ಎಂಬ ಪಾರ್ಸಿ ಶೈಲಿಯ ನಾಟಕ ನೋಡಿ ಪ್ರಭಾವಿತನಾಗಿ ನನ್ನ ಬಾಲ್ಯದ 'ಫೇವರಿಟ್' ಆದ ಕೊಟ್ಟೂರಪ್ಪನವರ 'ದಾನಶೂರ ಕರ್ಣ' ನಾಟಕವನ್ನು–ನನ್ನ ಪ್ರಕಾರ ಅದೊಂದು ಪರಿಪೂರ್ಣ ಸಂರಚನೆಯ ನಾಟಕ–ಪುನಃಸೃಷ್ಟಿಸಬೇಕೆಂದು ಆಗಿನಿಂದ ಈಗಿನವರೆಗೆ ಹಲವರಿಗೆ ದುಂಬಾಲು ಬಿದ್ದು ವಿಫಲನಾಗಿದ್ದೇನೆ. ನಂತರದಲ್ಲಿ ಭದ್ರಾವತಿ ಆಕಾಶವಾಣಿ ಕೇಂದ್ರಕ್ಕೆ ಕಾರ್ಯಕ್ರಮ ನಿರ್ವಾಹಕನಾಗಿ ಬಂದ ನಂತರ ನೀನಾಸಮ್‌ಗೆ ಮೊದಲ ಭೇಟಿ ನೀಡಿದೆ. ಆ ಭೇಟಿಯಲ್ಲಿ ಮಣಿಪುರದಿಂದ ಬಂದಿದ್ದ ರಂಗತಂಡವೊಂದು ರಂಗಭೂಮಿಯಲ್ಲಿ ನಾನು ಅದುವರೆಗೆ ಕಂಡಿರದಿದ್ದ ಹಲವು ವಿಶಿಷ್ಟ ಮತ್ತು 'ಮಾಂತ್ರಿಕ'ವೆನ್ನಬಹುದಾದ ಚಲನೆಗಳ ಪ್ರಯೋಗಮಾಡಿ ನನ್ನ ಗಮನ ಸೆಳೆಯಿತು. ಅದಾದ ನಂತರ ನೀನಾಸಮ್‌ಗೆ ಅನೇಕ ಸಾರಿ ನಾಟಕಗಳನ್ನು ನೋಡಲು ಬರುತ್ತಿದ್ದೆ. ಆ ಸಂದರ್ಭದಲ್ಲಿ ಗಿರೀಶ್ ಕಾಸರವಳ್ಳಿ, ಬಿ.ವಿ.ಕಾರಂತರ ಪರಿಚಯವಾಯಿತು.

ನಂತರ 1984–85ರ ಹೊತ್ತಿನಲ್ಲಿ ಮಂಗಳೂರು ಆಕಾಶವಾಣಿ ಕೇಂದ್ರಕ್ಕೆ ವರ್ಗಾವಣೆಯಾದಾಗ ಇಲ್ಲಿ ನಡೆಯುತ್ತಿದ್ದ ಚಲನಚಿತ್ರ ರಸಗ್ರಹಣ ಶಿಬಿರಕ್ಕೆ ಬಂದಿದ್ದೆ. ಇದಾದ ನಂತರ ಸುಮಾರು ಒಂದು ದಶಕದ ಕಾಲ ನನಗೂ ಮತ್ತು ನೀನಾಸಮ್‌ಗೂ ನೇರ ಸಂಪರ್ಕ ಸಾಧ್ಯವಾಗಲಿಲ್ಲ. ಸುಬ್ಬಣ್ಣ ನಾನು ಇದ್ದ ಕೆಲವಡೆಗೆ – ಹಾಸನ, ಮಡಿಕೇರಿ ಮುಂತಾದೆಡೆ – ಸಂಸ್ಕೃತಿ ಶಿಬಿರ ಗಳಿಗಾಗಿ ಬಂದಾಗ ಅವರನ್ನು ಆಕಾಶವಾಣಿಗಾಗಿ ಮಾತನಾಡಿಸಿರುವೆ. ಮನೆಗೆ ಕರೆದು ಆತಿಥ್ಯ ನೀಡಿ ಮುಕ್ತ ಮಾತುಕತೆ ನಡೆಸಿದ ಖುಷಿ ಇದೆ. 2006ರಲ್ಲಿ ಮೈಸೂರು ಆಕಾಶವಾಣಿಯ ಸಹಾಯಕ ನಿರ್ದೇಶಕನಾಗಿ ನನ್ನ ಕೆಲಸದಿಂದ ಸ್ವಯಂನಿವೃತ್ತಿ ಪಡೆದ ನಂತರ ನೀನಾಸಮ್‌ನೊಡನೆ ಸಂಪರ್ಕ ನನ್ನ ಅನೇಕ ಭೇಟಿಗಳ ಮೂಲಕ ಇನ್ನಷ್ಟು ಗಾಢವಾಗುತ್ತಾ ಬಂತು. ಇಲ್ಲಿ ನಡೆಯುವ ಅನೇಕ ನಾಟಕಗಳನ್ನು ನೋಡಿದ್ದೇನೆ. ಹಾಗೆಯೇ ಪ್ರತಿಯೊಂದು ಸಂಸ್ಕೃತಿ ಶಿಬಿರಕ್ಕೂ ನಿಯಮಿತವಾಗಿ ಬರುತ್ತಿದ್ದೇನೆ. ಹೊಸ ನಾಟಕಗಳ ಸುದ್ದಿಯನ್ನು ಕೇಳಿದರೆ ಮತ್ತು ಅದು ನನ್ನ ಆಸಕ್ತಿಯನ್ನು ಕೆರಳಿಸಿದರೆ ಇಲ್ಲಿಗೆ ನನ್ನ ಪತ್ನಿ ಮತ್ತು ಗೆಳೆಯರೊಂದಿಗೆ ಬಂದು ಅದನ್ನು ನೋಡುತ್ತೇನೆ.

ನೀನಾಸಮ್ ಎಂದರೆ ಕೇವಲ ನೀನಾಸಮ್ ರಂಗ ಶಿಕ್ಷಣ ಕೇಂದ್ರ, ನಾಟಕ ಪ್ರದರ್ಶನ ಇಷ್ಟೇ ಅಲ್ಲದೆ 'ಅಕ್ಷರ ಪ್ರಕಾಶನ' ಕೂಡ ನೀನಾಸಮ್‌ಗೆ ಪೂರಕವಾಗಿ ಜೊತೆ ಜೊತೆಯಲ್ಲಿಯೇ ಬೆಳೆಯಿತೆಂದು ಅನಿಸುತ್ತದೆ. ಅದು ಕರ್ನಾಟಕದ – 'ನವ್ಯ'ವೆಂದು ಕರೆಯಲಾಗುವ – ಸಾಹಿತ್ಯ ಚಳುವಳಿಯನ್ನೇ ಕಟ್ಟಿದ ಒಂದು ಪ್ರಕಾಶನವಾಗಿದೆ. ಏಕೆಂದರೆ ಸಾಹಿತ್ಯ ಮಾತ್ರವಲ್ಲದೆ ನಾಟಕ, ಸಿನಿಮಾ ಸೇರಿ ವಿಸ್ತಾರಗೊಂಡ ಈ ಚಳುವಳಿಯ ಅನೇಕ ಕೃತಿಗಳನ್ನೂ 'ಸಾಕ್ಷಿ' ಪತ್ರಿಕೆಯ ಮೂಲಕ ಅದರ ತಾತ್ವಿಕತೆಯನ್ನೂ ಬೆಳೆಸಿದೆ. ಇನ್ನು ನೀನಾಸಮ್‌ನ ಮುಖವಾಣಿ ಎನಿಸಿರುವ 'ಮಾತುಕತೆ' ತ್ರೈಮಾಸಿಕ ಕರ್ನಾಟಕದ ಬೌದ್ಧಿಕ ಜಗತ್ತಿನ ಅನೇಕ ಮುಖ್ಯ ಚರ್ಚೆಗಳಿಗೆ, ಅವುಗಳ ವಿಸ್ತರಣೆಗೆ ವೇದಿಕೆಯಾಗಿದೆ. ಇಲ್ಲಿ ಮೊದಲು ಸಿನಿಮಾ ಶಿಬಿರಗಳು ನಡೆಯುತ್ತಿದ್ದವು. ಈಗ ಸಂಸ್ಕೃತಿ ಶಿಬಿರ, ಅದರ ಭಾಗವಾಗಿ ನಾಟಕ, ಸಿನಿಮಾ, ಸಂಗೀತ ಸಾಹಿತ್ಯಕ್ಕೆ ಸಂಬಂಧಿಸಿದ ಪ್ರದರ್ಶನ, ಚರ್ಚೆಗಳು ನಡೆಯುತ್ತಿವೆ. ಹೀಗೆ ಕರ್ನಾಟಕದ ಅನೇಕ ಬುದ್ಧಿಜೀವಿಗಳ ನಡುವಿನ ಚರ್ಚೆ, ಪರಾಮರ್ಶನಕ್ಕೆ ನೀನಾಸಮ್ ಸಾಕ್ಷಿಯಾಗಿದೆ. ಇವರ ಜೊತೆಗೆ ರಾಷ್ಟ್ರಮಟ್ಟದ ಸಂಸ್ಕೃತಿ ಚಿಂತಕರು ಚರ್ಚೆಗಳಲ್ಲಿ ಭಾಗವಹಿಸುತ್ತಿದ್ದಾರೆ. ನನ್ನ ಮಿತಿಯ ಕಾರಣ ಜಗತ್ತಿನ ಎಂದು ಹೇಳಲಾರೆನಾದರೂ ಭಾರತದಲ್ಲಿನ ಏಕೈಕ ಸಾಂಸ್ಕೃತಿಕ ಸಮಾಲೋಚನೆಯ ಗ್ರಾಮಾಂತರ ಕೇಂದ್ರವೆನಿಸಿರುವ ಮತ್ತು ಕರ್ನಾಟಕದ ಬೌದ್ಧಿಕ ಲೋಕವನ್ನು ದಟ್ಟವಾಗಿ ಪ್ರಭಾವಿಸಿದ ಮತ್ತು ಅದನ್ನು ಕಟ್ಟಲು ಗಣನೀಯ ಕೊಡುಗೆ ಸಲ್ಲಿಸಿರುವ ಈ ನೀನಾಸಮ್ ನಮ್ಮಲ್ಲಿದೆ, ನಮ್ಮ ಊರಿನ ಪಕ್ಕದಲ್ಲೇ ಇದೆ, ಒಂದು ಹಳ್ಳಿಯಲ್ಲಿದೆ ಎನ್ನುವುದು ಕನ್ನಡಿಗನಾಗಿ ನನಗೆ ಹೆಮ್ಮೆಯ ವಿಷಯ ಎನಿಸಿದೆ.

ಇಂತಹ ಸಂಸ್ಥೆ ಬೆಳೆಯುತ್ತಾ ಇರುವಂತೆ, ಅದರ ಭಾಗವಾಗಿ ಸಂಸ್ಕೃತಿ ಚರಿತ್ರೆಯನ್ನು ಕಟ್ಟುವಲ್ಲಿ ಒಂದು ನಿರ್ಣಾಯಕ ಪಾತ್ರವನ್ನು ವಹಿಸಲು ಪ್ರಾರಂಭಿಸಿದೆ ಎನಿಸುತ್ತಿದ್ದಂತೆ, ಎಲ್ಲರ ಗಮನ ಅದರ ಮೇಲೆ ಬೀಳಲು ಪ್ರಾರಂಭವಾಗಿದ್ದು ಸಹಜ. ಜೊತೆಗೆ ಸಲಹೆಗಳೂ, ಟೀಕೆಗಳೂ ಸಹಜ. ಸ್ವತಃ ನಾನೇ ಇಂತಹ ಕೆಲವು ಟೀಕೆಗಳನ್ನು ಮಾಡಿದ್ದೇನೆ. ಅವನ್ನು ಈ ಹಿಂದೆ ಸುಬ್ಬಣ್ಣ ಮತ್ತು ಇತ್ತೀಚೆಗೆ ಅಕ್ಷರ ಅವರ ಬಳಿಯೂ ಹೇಳಿದ್ದೇನೆ. ಎಪ್ಪತ್ತರ ದಶಕದಲ್ಲೇ ಅಕ್ಷರ ಪ್ರಕಾಶನ ಮತ್ತು ಅಡಿಗರ ಸಾರಥ್ಯದಲ್ಲಿ ಪ್ರಕಟವಾಗುತ್ತಿದ್ದ 'ಸಾಕ್ಷಿ'ಯ ಮೇಲೆ ಅನೇಕ ಟೀಕೆಗಳು ಬರಲಾರಂಭಿಸಿದವು. 'ಈ ಅಕ್ಷರ ಪ್ರಕಾಶನ ಮತ್ತು ಅಡಿಗರ 'ಸಾಕ್ಷಿ'ಯ ಹಿಂದೆ ಬಹು ದೊಡ್ಡ ಸಾಮಾಜಿಕ ರಾಜಕೀಯವಿದೆ, ನಮ್ಮ ಕನ್ನಡ ಸಾಹಿತ್ಯವನ್ನು ಅದರಿಂದ ಬಿಡುಗಡೆಗೊಳಿಸಬೇಕು' ಎಂಬ



ಬಹು ದೊಡ್ಡ ಆರೋಪ ಕೇಳಿಬಂತು. ತೇಜಸ್ವಿಯ ಮಾರ್ಗದರ್ಶನದ 'ಒಕ್ಕೂಟ' ಇದರ ವಿರುದ್ಧ 'ಸಾಮಾಜಿಕ ತತ್ವಶಾಸ್ತ್ರ'ವೆಂದು ಕರೆಯಬಹುದಾದ ಒಂದು ಪರ್ಯಾಯ ತಾತ್ವಿಕತೆಯನ್ನೇ ಒದಗಿಸಿಕೊಟ್ಟಿತು. ಇದರಿಂದಾಗಿ ಅನೇಕ ಬದಲಾವಣೆಗಳು ಕನ್ನಡ ಬೌದ್ಧಿಕ ಜಗತ್ತಿನಲ್ಲಿ ಜರುಗಿದವು. ಇದರ ಪರಿಣಾಮವಾಗಿ ಸುಬ್ಬಣ್ಣನವರ ಯೋಚನಾ ಲಹರಿಯಲ್ಲಿ ಆದ ಅನೇಕ ಬದಲಾವಣೆಗಳನ್ನು ನಾನು ಗಮನಿಸಿದ್ದೇನೆ. ಇದಕ್ಕೆ ಅವರು ಶ್ರೇಷ್ಠ ಸಾಹಿತ್ಯವನ್ನು ಕುರಿತು ಮಾಡಿದ ಭಾಷಣ ಮತ್ತು ನೀನಾಸಮ್‌ನಲ್ಲಿನ ನಾಟಕಗಳ ಸ್ವರೂಪದಲ್ಲಿ ಆದ ಬದಲಾವಣೆಗಳೇ ಸಾಕ್ಷಿ.

ಇನ್ನು ನೀನಾಸಮ್‌ನ ಸಂಸ್ಕೃತಿ ಶಿಬಿರಗಳ ಬಗ್ಗೆನೂ ಕೆಲವು ಟೀಕೆಗಳು ಕೇಳಿಬರುತ್ತಿವೆ. ನೀನಾಸಮ್‌ನ ಮುಖ್ಯ ಕಾಳಜಿ ಸಾಹಿತ್ಯ–ಸಂಸ್ಕೃತಿಯೇ ಆದರೂ ಅದರ ಒಟ್ಟು ಆಸಕ್ತಿ ಬಹುಮುಖಿಯೇ ಆಗಿದ್ದು, ಅದು ಕೃಷಿ, ಗಿಡಮೂಲಿಕೆ, ವಿಜ್ಞಾನ, ತತ್ವಶಾಸ್ತ್ರಗಳ ಬಗ್ಗೆ ಕೂಡಾ ಕೆಲವು ವಿಶೇಷ ಶಿಬಿರಗಳನ್ನು ನಡೆಸಿದೆ. ಹಾಗೆಯೇ ವಾರ್ಷಿಕ ಸಂಸ್ಕೃತಿ ಶಿಬಿರದ ವಸ್ತುಗಳನ್ನು ಗಮನಿಸಿದರೆ ಇಲ್ಲಿ 'ದೇವ ದೇವಿಯರು', 'ಹಿಂಸೆಯ ಎಡ–ಬಲ', 'ಗಾಂಧೀಜಿಯ ಹಿಂದ್ ಸ್ವರಾಜ್: ಮನೋಭೂಮಿಕೆಯಲ್ಲಿ', 'ಯುವ ಬರಹಗಾರರು' ಹೀಗೆ ಹತ್ತು ಹಲವು ವಿಷಯಗಳ ಮೇಲೆ ಶಿಬಿರಗಳು ನಡೆದಿವೆ. ಇಂತಹ ಶಿಬಿರಗಳ ಬಗ್ಗೆ ಕೇಳಿಬರುವ ಟೀಕೆಗಳು ಮುಖ್ಯವಾಗಿ ಶಿಬಿರದಲ್ಲಿ ಪ್ರದರ್ಶಿತಗೊಳ್ಳುವ ನೀನಾಸಮ್ ನಾಟಕಗಳ ಸ್ವರೂಪ ಮತ್ತು ಶಿಬಿರದಲ್ಲಿ ನಡೆಯುವ ಚರ್ಚೆಗಳ ಸ್ವರೂಪದ ಬಗ್ಗೆ. ಇಂತಹ ಶಿಬಿರಗಳಲ್ಲಿ ನಾನು ಒಂದು ಶಿಬಿರದಲ್ಲಿ ಬಹುಪಾಲು ಭಾಗದಲ್ಲಿ ಭಾಗವಹಿಸಿದ್ದೇನೆ ಮತ್ತು ಅನೇಕ ಶಿಬಿರಗಳಲ್ಲಿ ಕೆಲದಿನಗಳ ಮಟ್ಟಿಗೆ ಭಾಗವಹಿಸಿದ್ದೇನೆ. ಅವುಗಳ ಚರ್ಚೆಗಳಲ್ಲಿ ಸಂಕ್ಷಿಪ್ತವಾಗಿಯಾದರೂ ಮಧ್ಯಪ್ರವೇಶ ಮಾಡಿರುವೆ. ಈ ಎಲ್ಲಾ ಶಿಬಿರಗಳನ್ನು, ಹಾಗೆಯೇ ನೀನಾಸಮ್‌ನ ತಾತ್ವಿಕತೆಯ ಭಾಗವಾಗಿಯೇ ಪ್ರಕಟವಾಗುವ ಅಕ್ಷರ ಹಾಗೂ ಅವರ ಗೆಳೆಯರ ಬರವಣಿಯನ್ನು ಗಮನಿಸಿದಾಗ ನನಗನ್ನಿಸಿದ್ದು: ಒಂದು ಸಮಾಜಕ್ಕೆ ಬೌದ್ಧಿಕತೆ ಬೇಕು. ಅದೇ ಅದರ ಬುನಾದಿ ಕೂಡ. ಆದರೆ ಈ ಬೌದ್ಧಿಕತೆ ಬರೀ cerebral ಆದರೆ, ಬರೀ ಮಿದುಳಿಗೆ ಸಂಬಂಧಪಟ್ಟುದಾದರೆ, ಅಮೂರ್ತ ನೆಲೆಗಳಲ್ಲೇ ಕ್ರಿಯಾಶೀಲವಾದುದಾರೆ ಅದು ಸಮಸ್ಯಾತ್ಮಕವಾಗುತ್ತದೆ.

ಇದನ್ನು ನಾನು ಹಲವು ಬಾರಿ ಅಕ್ಷರ ಅವರಿಗೆ ಸೂಚ್ಯವಾಗಿ ಹೇಳಿದ್ದೀನಿ. ಬೌದ್ಧಿಕತೆ ಅನ್ನುವುದು ಲೌಕಿಕ ನೆಲೆಯಲ್ಲಿ ಅಂದರೆ ಏನಿರುವುದೋ ಮತ್ತು ಏನು ಇರಬೇಕೆಂದು ನಾವು ಭಾವಿಸುತ್ತೇವೆಯೋ ಅದರ ಮಧ್ಯವರ್ತಿಯಾಗಿ ಮಾತ್ರ ಇರಬೇಕೇ ಹೊರತು ಅದಕ್ಕೊಂದು ಸ್ವತಂತ್ರ ಅಸ್ತಿತ್ವವಿಲ್ಲ ಎಂದು

ನಾನೆಂದುಕೊಂಡಿದ್ದೇನೆ. ಹಾಗಾಗಿ ಹಲವಾರು ಬಾರಿ ನನಗೆ ಇಂತಹ ಚರ್ಚೆಗಳೆಲ್ಲ ಯಾರಿಗಾಗಿ ಮತ್ತು ಇದರಿಂದೇನು ಪ್ರಯೋಜನ, ಕೇವಲ ಮಾನಸಿಕ ಖುಷಿಗಾಗಿ ಮಾತ್ರ ಬೌದ್ಧಿಕತೆಯೇ, ಇದಕ್ಕೊಂದು purpuse ಅನ್ನುವುದೇ ಇಲ್ಲವೇ ಅಂತ ಆಶ್ಚರ್ಯಪಟ್ಟಿದ್ದೇನೆ. ಒಮ್ಮೊಮ್ಮೆ ಇದು ನನ್ನ ಸಮಸ್ಯೆ ಮಾತ್ರವಾ ಅಂತ ಸಂದೇಹ ಬಂದು ನಾನು ಕಳೆದ ಎರಡು ಮೂರು ಶಿಬಿರಗಳಲ್ಲಿ ನನಗೆ ಪರಿಚಯವಾದ ಅನೇಕ ಶಿಬಿರಾರ್ಥಿಗಳನ್ನೂ ಕೇಳಿದ್ದೇನೆ. ಇಲ್ಲಿ ನಡೆಯುವ ಚರ್ಚೆಗಳು ಅವರಲ್ಲಿ ಬಹಳ ಜನರಿಗೆ ಅರ್ಥವಾಗುತ್ತಿಲ್ಲ, ಇಲ್ಲಿಗೆ ಯಾಕಪ್ಪಾ ಬಂದಿವೆ ಅನ್ನಿಸುವಷ್ಟು ಕಠಿಣವಾಗಿದೆ ಅನ್ನುವುದನ್ನು ನಾನು ಖಚಿತಪಡಿಕೊಂಡು ಈ ಮಾತುಗಳನ್ನಾಡುತ್ತಿದ್ದೇನೆ. ಆದರೆ ಇವರಲ್ಲಿ ಹಲವಾರು ಶಿಬಿರಾರ್ಥಿಗಳು ಪದೇ ಪದೇ ಶಿಬಿರಕ್ಕೆ ಬರುತ್ತಾರೆ. ಇದಕ್ಕೆ ಕಾರಣ ಇಲ್ಲಿನ ಪರಿಸರವಾಗಿರಬಹುದು, ಶಿಬಿರದ ಸಮಯದಲ್ಲಿ ಸೃಷ್ಟಿಯಾಗುವ ಒಂದು ವಿಶಿಷ್ಟ ಸಾಂಸ್ಕೃತಿಕ ವಾತಾವರಣವಿರಬಹುದು ಮತ್ತು ಇಲ್ಲಿನ ಉಪಚಾರ ವೈಶಿಷ್ಟ್ಯವಿರಬಹುದು. ಆದರೆ ಇಲ್ಲಿನ ವಿಚಾರ ಯಾರನ್ನು ಮತ್ತು ಯಾಕೆ ತಲುಪಬೇಕೆಂದು ಚರ್ಚೆಗಳು ನಡೆಯುತ್ತಿದೆಯೋ ಆ ಅವರನ್ನು ತಲುಪುತ್ತಿಲ್ಲವೇನೋ ಎನ್ನುವ ಗಂಭೀರ ಅನುಮಾನ ನನ್ನಲ್ಲಿ ಇತ್ತೀಚೆಗೆ ಉಂಟಾಗಿದೆ.

ನೀವು ತುಂಬಾ ಶ್ರೇಷ್ಠ ಮಟ್ಟದ ಚರ್ಚೆಯನ್ನು ನಡೆಸಬೇಕೆಂಬ ಉದ್ದೇಶದಿಂದ ರಾಷ್ಟ್ರೀಯ–ಅಂತಾರಾಷ್ಟ್ರೀಯ ಖ್ಯಾತಿಯ ಚಿಂತಕರನ್ನು ಕರೆಸುವ ಬದ್ಧತೆಗೆ ಒಳಗಾಗಿದ್ದೀರಿ. ಅದು ಸರಿಯೇ. ಆದರೆ ಅವರೆಲ್ಲರೂ ಇಂಗ್ಲಿಷ್‌ನಲ್ಲಿ ಮಾತಾಡುವವರು. ಅವರ ಇಂಗ್ಲಿಷ್, ಹಲವು ಮಟ್ಟಗಳ ಮತ್ತು ಶೈಲಿಗಳ ಇಂಗ್ಲಿಷ್ ಭಾಷಣಗಳನ್ನು ಕೇಳಿರುವ ನನಗೇ ಕಷ್ಟವೆನ್ನಿಸುತ್ತದೆ. ಇನ್ನು ಸಾಮಾನ್ಯ ಶಿಬಿರಾರ್ಥಿಗಳ ಪಾಡೇನು? ನಿಜ, ಕನ್ನಡ ಅನುವಾದದ ಸೌಲಭ್ಯವಿದೆ. ಜಾಧವ್ ನಮ್ಮ ಅತ್ಯುತ್ತಮ ಅನುವಾದಕರು. ಆದರೆ ಇಂಗ್ಲಿಷ್ ಭಾಷಣದ ಕರಾರುವಾಕ್ಕು ಅನುವಾದ ಮಾಡುವ ಅವರ ಉತ್ಸಾಹ ಮತ್ತು ಬದ್ಧತೆಗಳಲ್ಲಿ ಹಲವುಬಾರಿ ಅವರ ಕನ್ನಡ ಅನುವಾದವೇ ಮೂಲ ಇಂಗ್ಲಿಷ್‌ಗಿಂತಲೂ ಕ್ಲಿಷ್ಟವಾಗಿರುತ್ತದೆ. ಅದೇನೇ ಇರಲಿ, ಅದು ಅಷ್ಟು ಮುಖ್ಯವಲ್ಲ. ಮುಖ್ಯ ಸಂಗತಿ, ಇಲ್ಲಿ ಆಗುತ್ತಿರತಕ್ಕಂತಹ ಚರ್ಚೆಗಳ ಮತ್ತು ತೆಗೆದುಕೊಳ್ಳುತ್ತಿರುವ ವಿಷಯಗಳ ಸ್ವರೂಪದ ಬಗ್ಗೆ ಹೇಳಬೇಕು. ಬುದ್ಧಿಲೋಕ ಬೇಕು, ಬುದ್ಧಿಜೀವಿಗಳೂ ಒಂದು ಸಮಾಜಕ್ಕೆ ಬೇಕು. ಬೇಕು ಅನ್ನೋದಕ್ಕಿಂತ ಅದು ಸಹಜವಾಗಿ ಇದ್ದೇ ಇರುತ್ತದೆ. ಏಕೆಂದರೆ ಅದೇ ನಾಗರಿಕ ಸಮಾಜದ ಬುನಾದಿ. ಅದೇ ನಮ್ಮನ್ನು ಕಟ್ಟಿರುವುದು. ಆದರೆ ನೀನಾಸಮ್ ಕಟ್ಟುತ್ತಿರುವ ಬುದ್ಧಿಲೋಕಕ್ಕೂ ಕರ್ನಾಟಕದ ಜನತೆಗೂ



ಏನಾದರೂ ಸಂಬಂಧವಿದೆಯೇ ಎಂಬ ಪ್ರಶ್ನೆ ಕೇಳಿಕೊಂಡಾಗ ಉತ್ತರ ಹೇಳೋದು ಕಷ್ಟ ಅನ್ನಿಸುತ್ತೆ. ಯಾಕೆಂದರೆ ಇಲ್ಲವೇ ಇಲ್ಲಾಂತ ಹೇಳೋಕೂ ಆಗೊಲ್ಲ. ನಿಜ, ಅಡಿಗರು ಹೇಳುತ್ತಿದ್ದಂತೆ ಎಲ್ಲರಿಗೂ ಅರ್ಥವಾಗುವಂತೆ ಪದ್ಯ ಬರೆಯಬೇಕಾಗಿಲ್ಲ ಮತ್ತು ಎಲ್ಲರಿಗೂ ಅರ್ಥವಾಗುವಂತೆಯೇ ಸಾಹಿತ್ಯ–ಸಂಸ್ಕೃತಿ ಚರ್ಚೆಯನ್ನು ನಡೆಸಬೇಕಿಲ್ಲ, ಹಾಗೆ ಬೌದ್ಧಿಕತೆಯೂ ಕೂಡ. ಆದರೆ ನನ್ನ ಪ್ರಕಾರ, ಒಂದು ಪದ್ಯ ಅಥವಾ ಕಥೆ, ಅದನ್ನು ಓದುವ ಎಲ್ಲಾ ಜನರನ್ನೂ ಯಾವುದೋ ಒಂದು ಸ್ತರದಲ್ಲಿ ಮುಟ್ಟದಿದ್ದರೆ ಅದು ಏನೂ ಅಲ್ಲವೇ ಅಲ್ಲ. ಅಂದರೆ ಕನ್ನಡ ಬಲ್ಲವರು ಅದನ್ನು ಓದಿದಾಗ ಅಥವಾ ಒಂದು ನಾಟಕವನ್ನು ನೋಡಿದಾಗ ಅದು ಎಲ್ಲರನ್ನೂ ಒಂದೇ ಸ್ತರದಲ್ಲಿ ಅಲ್ಲದಿದ್ದರೂ ಒಂದಲ್ಲ ಒಂದು ಸ್ತರದಲ್ಲಿ ಎಲ್ಲರನ್ನೂ ಮುಟ್ಟಬೇಕು.

ಆದರೆ ಇಲ್ಲಿನ ಶಿಬಿರದಲ್ಲಿ ನಡೆಯುತ್ತಿರುವ ಚರ್ಚೆಗಳು ಯಾರನ್ನೂ ಮುಟ್ಟುತ್ತಿಲ್ಲವೇನೋ ಎಂಬ ಅನುಮಾನ ನನಗಂತೂ ಇದೆ. ಯಾರನ್ನು ಅಂದರೆ, ಈ ಚರ್ಚೆಗಳನ್ನು ಆಯೋಜಿಸುವ ಮತ್ತು ಅದರಲ್ಲಿ ಭಾಗವಹಿಸುವವರನ್ನು ಬಿಟ್ಟು, ಯಾರಿಗೆ ತಲುಪಬೇಕೆಂದು ನೀವು ಉದ್ದೇಶಿಸಿದ್ದೀರೋ ಅವರನ್ನು ತಲುಪುತ್ತಿಲ್ಲ. ಎಲ್ಲೋ ಒಂದು ಅಂತರ ಇದೆ. ನಿಜ, ಬೌದ್ಧಿಕ ಲೋಕಕ್ಕೂ ಸಾಮಾನ್ಯ ಲೋಕಕ್ಕೂ ಅಂತರ ಇರುತ್ತೆ. ಆದರೆ ಅದು full blank ಆಗಿರಬಾರದು. ಆಯ್ದುಕೊಳ್ಳುವ ವಿಷಯಗಳೂ ಅಷ್ಟೇನೇ. 'ಹಿಂದ್ ಸ್ವರಾಜ್' ಕುರಿತ ಶಿಬಿರಕ್ಕೆ ನಾನೂ ಬಂದಿದ್ದೆ, ಸಂಪನ್ಮೂಲ ವ್ಯಕ್ತಿಯಾಗಿ. ಅದು 'ಮನೋಭೂಮಿಕೆಯಲ್ಲಿ ಹಿಂದ್ ಸ್ವರಾಜ್' ಆಗಿತ್ತು! ಯಾಕೆ, ಬರೀ 'ಹಿಂದ್ ಸ್ವರಾಜ್' ಎಂದು ನಡೆಯುತ್ತಿರಲಿಲ್ಲವೇ? ಇನ್ನು ಇವತ್ತಿನ ಜ್ವಲಂತ ಸಮಸ್ಯೆಗಳೇನಿವೆ, ಅವುಗಳ ಬಗ್ಗೆ ಮಾತನಾಡಬಲ್ಲವರೇನಿದ್ದಾರೆ ––ನಾನು ಇಲ್ಲಿ ಅಗ್ಗವಾಗಿ ಮಾತಾಡುತ್ತಿಲ್ಲ; ಸಾಮಾಜಿಕ ಕಳಕಳಿ, ಸಾಮಾಜಿಕ ನ್ಯಾಯದ ಜನಪ್ರಿಯ ಘೋಷಣೆಯ ಬಗ್ಗೆ ನನಗೆ ನಂಬಿಕೆ ಇಲ್ಲ. ಆದರೆ ನೀವು ಸಹಜವಾಗಿ ಯೋಚಿಸುವವರಾಗಿದ್ದರೆ, ಅಲ್ಲಿ ಎಲ್ಲವೂ ಇರುತ್ತೆ ಅಂತ ನಂಬಿರೋನು ನಾನು. ನೀವು ಸಹಜವಾಗಿದ್ದರೆ, ನೀವು normal ಆಗಿ ಕೆಲಸ ಮಾಡುತ್ತಿದ್ದರೆ ಮಾತಾಡುತ್ತಿದ್ದರೆ, ನಿಮ್ಮ ಸಂಬಂಧ ಸಮಾಜದ ಜೊತೆ ಸಹಜವೂ ಸಜೀವವೂ ಆಗಿದ್ದರೆ, ಯಾರೂ ಹೇಳದೆ ಕೇಳದೆ ಸಾಮಾಜಿಕ ನ್ಯಾಯ ಅಂತ ಏನನ್ನು ನಾವು ಕರೀತೀವಿ ಅದು ತನ್ನ ವಿಶಾಲ ಅರ್ಥದ ವ್ಯಾಪ್ತಿಯಲ್ಲಿ ಅಲ್ಲಿ ತಂತಾನೇ – ಸಹಜವಾಗಿ – ಇದ್ದೇ ಇರುತ್ತೆ. ಆದರೆ ಯಾವಾಗ ನೀವು ಸಹಜವಾಗಿ ಇರೋದಿಲ್ಲವೋ ಆಗ ಪ್ರಾತಿನಿಧ್ಯದ ಅಂದರೆ ಕೆಲ ಧ್ವನಿಗಳು ಕೇಳಿಸದಿರುವ, ಅಂದರೆ ಒಂದು ಧ್ವನಿಯಲ್ಲಿರಬೇಕಾದ ಕೆಲವು ತರಂಗಾಂತರಗಳು

ಇಲ್ಲದೆ ಆ ಧ್ವನಿ ಕೀರಲಾಗಿ ಕೇಳಿಸುವಂತೆ ಎಲ್ಲವೂ ಅಸಹಜ ಅನ್ನಿಸಲಾರಂಭಿಸುತ್ತದೆ. ಪ್ರಾತಿನಿಧ್ಯ ಅಥವಾ ಧ್ವನಿಕ್ಷೀಣತೆ ಲೆಕ್ಕಾಚಾರದ ಮಾತಲ್ಲ. ಹಾಗೆ ನೋಡಿದರೆ ನಾನು ಸಂಸ್ಕೃತಿ ಕ್ಷೇತ್ರದಲ್ಲಿ ಮೀಸಲಾತಿಯ ಕಟು ವಿರೋಧಿ. ಆದರೆ ಇದು ಭಾವನೆಯ ಮತ್ತು ಅನುಭವದ ಮಾತು. ಶಿಬಿರದ ಚರ್ಚೆಗಳು ಬಹಳ ಜನ ಶಿಬಿರಾರ್ಥಿಗಳಿಗೆ ತಲುಪುತ್ತಿಲ್ಲ ಅಂದರೆ , something fundamentally wrong with us ಅಂತ ನೀನಾಸಮ್ ತಿಳೀಬೇಕು.

ನನಗೆ ನೀನಾಸಮ್ ಬಗ್ಗೆ ಅನೇಕ ವಿಷಯಗಳಲ್ಲಿ ಮೆಚ್ಚುಗೆ ಇದೆ. ನಾನು ಅದರ ಅಭಿಮಾನಿ. ಇದೆಲ್ಲದರ ಹೊರತಾಗಿಯೂ ನೀನಾಸಮ್ ಕುರಿತ ನನ್ನ ಮುಖ್ಯ ಆಕ್ಷೇಪಣೆ ಎಂದರೆ ಅದು ಎಲ್ಲೋ ಒಂದು ಕಡೆ ಅತಿಯಾದ ವೈಯುಕ್ತಿಕತೆಗೆ ಶರಣಾಗಿದೆಯೇನೋ ಎನ್ನುವುದು. ಇದಕ್ಕೆ ಕಾರಣ ಇತ್ತೀಚಿನ ವರ್ಷಗಳಲ್ಲಿ ಸಾಮಾಜಿಕತೆಯ ಹೆಸರಿನಲ್ಲಿ ನಡೆದ ಅಗ್ಗದ ರೂಕ್ಷ ರಾಜಕಾರಣ ಇರಬಹುದು, ಇದು ಅದಕ್ಕೆ ಪ್ರತಿಕ್ರಿಯಿಸುತ್ತಿರುವ ರೀತಿ ಇರಬಹುದು. ಆದರೆ ಸಮಾಜಕ್ಕೂ ನನಗೂ ಸಂಬಂಧವಿಲ್ಲ, ಸಮಾಜ ಹಾಳಾದರೆ ಆಗಲಿ, ನನಗೇನು ಅಥವಾ ನಾವು ಸುಮ್ಮನೆ ನಮಗನಿಸಿದಂತೆ ಕೆಲಸ ಮಾಡುತ್ತಾ ಹೋದರೆ ಅದು ಎಂದೋ ಒಂದು ದಿನ ಸಮಾಜಕ್ಕೆ connect ಆಗುತ್ತೆ ಅಂತ ಊಹಿಸಿ ಅಥವಾ ಭಾವಿಸಿ ನೀನಾಸಮ್ ಕೆಲಸ ಮಾಡ್ತಿದೆ ಅಂತ ನನಗನ್ನಿಸುತ್ತಿದೆ. ಕೆಲವೊಮ್ಮೆ ನಾನು ಸುಬ್ಬಣ್ಣನವರಿಗೂ ಈ ಮಾತನ್ನು ಹೇಳುತ್ತಿದ್ದೆ. ಒಮ್ಮೆ 'ಸದಾರಮೆ' ನಾಟಕವನ್ನು ನೋಡಿದಾಗ 'ಸುಬ್ಬಣ್ಣ ನೀವು ಸದಾರಮೆ ನಾಟಕವನ್ನು ಹಾಳುಮಾಡಿಬಿಟ್ಟಿದ್ದೀರಿ' ಎಂದಿದ್ದೆ. ಏಕೆಂದರೆ ಎಲ್ಲೂ connect ಆಗದ ಬೌದ್ಧಿಕತೆಯ ಕಾರಣದಿಂದಾಗಿ ಸುಬ್ಬಣ್ಣ ಅದರ ಇಡಿ ಸೌಂದರ್ಯವನ್ನು ಕೆಡಿಸಿಬಿಟ್ಟಿದ್ದರು. ನನ್ನ ಈ ಮಾತುಗಳನ್ನು ಅಂದು ಕೇಳಿದ ಅದರ ನಿರ್ದೇಶಕ ಬಿ.ವಿ. ಕಾರಂತರು 'ಟೈಟ್' ಆಗಿ ಕುಳಿತಿದ್ದರೂ 'Your are right' ಎಂದು ಅನುಮೋದಿಸಿದ್ದರು! ಅದೇನೇ ಇರಲಿ, ಹೀಗೆ ಬೌದ್ಧಿಕತೆಯೆನ್ನುವುದು ನೀನಾಸಮ್‌ನೊಳಗೆ ಜೀರ್ಣವಾಗದೆ ಒಂದು ರೀತಿಯ ಅನುಬಂಧದಂತೆ, ಭಾರದಂತೆ ಇದೆ ಅನ್ನಿಸುತ್ತದೆ.

ಅಕ್ಷರ ಪ್ರಸ್ತಾವನೆಯಲ್ಲಿ ಹೇಳಿದಂತೆ ನೀನಾಸಮ್‌ನಲ್ಲಿ ಶೇಕಡಾ 80ರಷ್ಟು ಜನ ಹವ್ಯಕ ಬ್ರಾಹ್ಮಣರಿದ್ದೀರಿ. ಈ ಊರಿನ ಜನಸಂಖ್ಯೆಯ ಸ್ವರೂಪವೇ ಹಾಗಿದ್ದರೆ ಸಮಸ್ಯೆ ಇಲ್ಲ. ಆದರೆ ಹವ್ಯಕರು ಹವ್ಯಕರಾಗಿಯೇ ಉಳಿದರೆ ತುಂಬಾ ಸಮಸ್ಯೆಯಾಗುತ್ತದೆ. ಇಲ್ಲಿ ನಾನು ಜಾತಿಯ ನೆಲೆಯಲ್ಲಿ ಮಾತಾಡುತ್ತಿಲ್ಲ. ಅಭಿರುಚಿ, ಆಯ್ಕೆ, ನಂಬಿಕೆ ಮತ್ತು ಜೀವನದೃಷ್ಟಿಯ ನೆಲೆಗಳಿಂದ ಮಾತನಾಡುತ್ತಿದ್ದೇನೆ. ಏಕೆಂದರೆ ಹೆಗ್ಗೋಡು ಊರು ಸ್ವತಂತ್ರ ಘಟಕವಲ್ಲ.



ಅದು ಒಂದು ದೇಶದ ಒಂದು ರಾಜ್ಯದಲ್ಲಿ ಇದೆ. ಅಂದರೆ ಅದು ಇತರ ಸಮುದಾಯಗಳ ಜೊತೆಗೇ ಇದೆ. ಈ ಎಲ್ಲದರಿಂದಲೂ ಅದು ಪಡೀತಾ ಇದೆ. ಹಾಗಾಗಿ ನಾವು ಹವ್ಯಕರು, ನೀನಾಸಮ್ ಮುಖ್ಯವಾಗಿ ಹವ್ಯಕರದ್ದು, ನಮ್ಮ ಅಭಿರುಚಿಗೆ ತಕ್ಕಂತೆ ಅದನ್ನು ನಡೆಸ್ತೀವಿ ಅಂತ ಹೇಳೋಕೆ ಆಗೊಲ್ಲ. ಹಾಗೆ ನೋಡಿದರೆ ಇದೇ ಊರಲ್ಲಿರೋ 'ಚರಕ'ದ social profile ಬೇರೇನೇ ಇದೆ. ಇದಕ್ಕೆ ಕಾರಣ ಬೇರೆ ಬೇರೆ ಊರುಗಳಿಂದ ಜನ ನೌಕರಿಗೆ ಬರುತ್ತಿರುವುದು ಇರಬಹುದು; ನನಗೆ ಗೊತ್ತಿಲ್ಲ. ಆದರೆ ತಪ್ಪು ತಿಳೀಬೇಡಿ -- ನಾನು ಎರಡನ್ನೂ ಹೋಲಿಸುತ್ತಿಲ್ಲ -- ನಾನು ಅಲ್ಲಿಗೆ ಹೋದಾಗ ಇರುವಷ್ಟು ಸಲೀಸಾಗಿ ಇಲ್ಲಿರೋಕೆ ಆಗೊಲ್ಲ. ಯಾರೋ ಒಬ್ಬರು ಇದನ್ನು ಅತಿಗೆ ತೆಗೆದುಕೊಂಡು ಹೋಗಿ ನೀನಾಸಮ್‌ಗೆ ಹೋದಾಗ ಉಸಿರುಗಟ್ಟಿದಂತಾಗುತ್ತದೆ ಅಂತ ಬರೆದಿದ್ದರು. ಅದಕ್ಕೆ ನಾನು, ನೀವು ಅಲ್ಲಿಗೆ ಹೋದಾಗ ವೈದ್ಯರೊಬ್ಬರನ್ನು ಕರೆದುಕೊಂಡು ಹೋಗಿ ಅಂತ ಹಾಸ್ಯ ಮಾಡಿದ್ದೆ. ಆ ಥರ ಅಲ್ಲ, ಇಲ್ಲಿಗೆ ನಾನು ಪ್ರೀತಿಯಿಂದಲೇ ಬರ್ತೀನಿ, ಅಕ್ಷರ ಮತ್ತು ಅವರ ಗೆಳೆಯರು ಬಹು ಆತ್ಮೀಯವಾಗೇ ನಮ್ಮನ್ನು ಉಪಚರಿಸ್ತಾರೆ. ಆದರೆ ಇಲ್ಲಿ ಒಂದು levelನಲ್ಲಿ ಏನೋ ಒಂದು ರೀತಿಯ uncomfortable ಅನ್ನಿಸೋದಕ್ಕೆ ಶುರು ಮಾಡುತ್ತೆ. ಇದಕ್ಕೆ ಏನು ಕಾರಣ ಅಂತ ಯೋಚಿಸಿದರೆ... ಏನೂಂತ ಹೇಳೋದು... ಇಲ್ಲಿನ ಬೌದ್ಧಿಕ ತರಂಗಾಂತರವೇ ವಿಚಿತ್ರ ಅನ್ನಿಸುತ್ತದೆ. ಇಲ್ಲಿನ ವಾತಾವರಣ ಪೂರ್ಣವಾಗಿ ನನ್ನನ್ನು ಆವರಿಸಿಕೊಳ್ತಿದೆ, ತಬ್ಬಿಕೊಳ್ತಿದೆ ಅಂತ ನನಗೆ ಅನ್ನಿಸೋಲ್ಲ. ಅಥವಾ ಇಲ್ಲಿ ನಾನು ಪೂರ್ಣವಾಗಿ ಲೀನವಾಗೋಕ್ಕೆ ಸಾಧ್ಯವಾಗೊಲ್ಲ. ಎಲ್ಲೋ ನನ್ನ ಒಂದು ಭಾಗ–being–ಹೊರಗೇ ಉಳಿಯುತ್ತೆ. ನಾನು ಯಾವುದರಲ್ಲಾದರೂ ಪೂರ್ಣವಾಗಿ ಲೀನವಾಗಬೇಕಾದರೆ ಕೆಲವು ಜಗಳಗಳಾಗಬೇಕಾಗುತ್ತೆ. ಆ ಜಗಳಗಳು ಇಲ್ಲಿ ಆಗಿಲ್ಲ... ಮತ್ತೆ ಇದಕ್ಕೆ ಕಾರಣ, ನನ್ನ ಭಿನ್ನಾಭಿಪ್ರಾಯಗಳನ್ನು ಬಿಚ್ಚು ಮನಸ್ಸಿನಿಂದ ಅಥವಾ ತೀವ್ರವಾಗಿ ಹೇಳೋದಕ್ಕೆ ಇಲ್ಲಿ ಸಾಧ್ಯವಾಗಿಲ್ಲ. ಇದಕ್ಕೆಲ್ಲ ಕಾರಣ, ನನ್ನ social profile ಇರಬಹುದು ಅಥವಾ ನೀನಾಸಮ್‌ನ social profile ಇರಬಹುದು. ಇವೆರಡೂ ಪರಸ್ಪರ ಹೊಂದಿಕೆಯಾಗದೇ ಇರಬಹುದು.

ಆದರೆ ಇದೇನೂ ದೊಡ್ಡ ಸಮಸ್ಯೆಯಲ್ಲ ನನಗೆ. ನಾನು ಇಲ್ಲಿಗೆ ಬರ್ತಾನೇ ಇರ್ತೀನಿ. ನಾಟಕಗಳನ್ನು ನೋಡ್ತಿರ್ತೀನಿ. ಚೆನ್ನಾಗಿದ್ರೆ ಚೆನ್ನಾಗಿದೆ ಅನ್ತೀನಿ. ಚೆನ್ನಾಗಿಲ್ಲದಿದ್ದರೆ ಚೆನ್ನಾಗಿಲ್ಲ ಅಂತೀನಿ. ಅದರಿಂದ ನಮ್ಮ–ನಿಮ್ಮ ಪ್ರೀತಿಯೇನೂ ಹೆಚ್ಚು ಕಡಿಮೆ ಆಗಿಲ್ಲ. ಮೊನ್ನೆ ತಾನೇ ಎರಡು ನಾಟಕಗಳ ಬಗ್ಗೆ ಬರೆದೆ. ಆದರೆ ನೀನಾಸಮ್ ಕಟ್ಟುತ್ತಿರುವ ಬೌದ್ಧಿಕತೆ ಇದೆಯಲ್ಲ,

ಹಾಗೇ ಅಕ್ಷರ ಅವರ ಆಧುನಿಕೋತ್ತರತೆ ಕುರಿತ ನಿಲುವುಗಳು -- ಅಕ್ಷರ ಅವರೇನೋ ತಾವು ಆಧುನಿಕೋತ್ತರವಾದಿಯಲ್ಲ ಅಂತ ಒಂದು ಸೂಕ್ಷ್ಮವಾದ ವಾದ ಮಂಡಿಸುತ್ತಾರೆ -- ಇರಲಿ; ಎರಡನೆಯದಾಗಿ ಜಾತಿ ವ್ಯವಸ್ಥೆ ಕುರಿತ ಬಾಲಗಂಗಾಧರರ ಪ್ರಮೇಯದ ಬಗೆಗೆ ನೀನಾಸಮ್ ತೋರಿಸುತ್ತಿರುವ ಸಕ್ರಿಯ ಆಸಕ್ತಿ ಬಗ್ಗೆ ನನ್ನ ತೀವ್ರ ಅಸಮಾಧಾನವಿದೆ. ನಾನು ಖಂಡಿತ ಬಾಲಗಂಗಾಧರರನ್ನು ಚರ್ಚಿಸಬಾರದು, ವಿಮರ್ಶಿಸಬಾರದು, ಇಷ್ಟವಾದರೆ ಮೆಚ್ಚಬಾರದು ಎಂದು ಹೇಳುತ್ತಿಲ್ಲ. ಹಾಗೇ ಇವರು ಅವರ ಪುಸ್ತಕವನ್ನು ಪ್ರಕಟಿಸುವುದು ತಪ್ಪು ಎಂದೂ ಹೇಳುತ್ತಿಲ್ಲ. ಆದರೆ ಬಾಲಗಂಗಾಧರರನ್ನು ಓದಿರುವ, ಅವರನ್ನು ಭೇಟಿಮಾಡಿದ ಜಿಗುಪ್ಸೆಕರ ಅನುಭವ ಪಡೆದಿರುವ, ಅವರ ಪ್ರಮೇಯದ ಹಿಂದೆ ಕೆಲಸ ಮಾಡುತ್ತಿರುವ ಆರ್ಥಿಕ ಮತ್ತು ಸಾಮಾಜಿಕ ರಾಜಕಾರಣದ ಒಂದಿಷ್ಟು ಪರಿಚಯವಿರುವ ನನಗೆ ಅವರ ವಾದವನ್ನು ಕುರಿತ ನೀನಾಸಮ್‌ನ ಅವಿಮರ್ಶಾತ್ಮಕ ಸಹಾನುಭೂತಿ ಮತ್ತು ಉತ್ಸಾಹಗಳ ಬಗ್ಗೆ ನನ್ನ ತೀವ್ರ ಬೇಸರವಿದೆ.

ಇನ್ನು ಇಲ್ಲಿ ನಡೆಯುತ್ತಿರುವ ಅನೇಕ ಕಾರ್ಯಕ್ರಮಗಳು ಒಂದು ರೀತಿ ಗುಪ್ತವಾಗಿ, ಗುಟ್ಟಾಗಿ ನಡೆಯುವುದೇಕೋ ನನಗೆ ತಿಳಿಯದಾಗಿದೆ. ಇಲ್ಲಿ ನಡೆಯುವ ಅನೇಕ ಚರ್ಚೆಗಳು ಅನೇಕ ಗೋಷ್ಠಿಗಳು ಹತ್ತಿರದಲ್ಲೇ – ಭೌತಿಕವಾಗಿ ಕೂಡಾ – ಇರುವ ನನ್ನಂಥವರಿಗೂ ಗೊತ್ತಾಗುವುದಿಲ್ಲ. ಮೊನ್ನೆ ತತ್ವಶಾಸ್ತ್ರದ ಬಗ್ಗೆ ಒಂದು ವಿಚಾರ ಸಂಕಿರಣ ನಡೆಯಿತಂತೆ; ಅದರ ವರದಿ ನೋಡಿಯೇ ನನಗೆ ಗೊತ್ತಾದದ್ದು. ಆಯ್ದ ಕೆಲವರಿಗಷ್ಟೇ ಇಂತಹ ಕಾರ್ಯಕ್ರಮಗಳಿದ್ದರೆ ನೀನಾಸಮ್‌ನ ಗೊಡವೆ ನನ್ನಂತಹವರಿಗೆ ಬೇಡವೇ ಬೇಡ. ಅಂದರೆ ನಾನು ಹೇಳುತ್ತಿರುವುದಿಷ್ಟೆ: ನೀನಾಸಮ್ ಸ್ವಲ್ಪ ಮೈಚಳಿ ಬಿಟ್ಟು ಸಾಮಾಜಿಕವಾಗಿ ಇನ್ನಷ್ಟು ತೆರಕೊಳ್ಳಬೇಕು. ಇತ್ತೀಚೆಗೆ ಇಲ್ಲಿ ಒಂದು ಭರ್ಜರಿ ನಾಟಕೋತ್ಸವ ಮತ್ತು ವಿಚಾರ ಸಂಕಿರಣ ನಡೆಯಿತೆಂದು ಕೇಳಿದೆ (ಇಂಡಿಯಾ ಥಿಯೇಟರ್ ಫೋರಮ್‌ನವರು ನಡೆಸಿದ ಸೆಮಿನಾರ್). ಅದನ್ನು ಕಂಡವರು ಹೇಳ್ತಾ ಇದ್ದರು, 'ನೀವೆಲ್ಲ ನೀನಾಸಮ್‌ನ ಸಂಸ್ಕೃತಿ ಕೆಲಸ ಗ್ರಾಮಕೇಂದ್ರಿತ ಅನ್ನುತ್ತೀರಿ, ಇಲ್ಲಿಗೆ ಬಂದು ನೋಡಬೇಕಿತ್ತು ನೀವು, ಮುಂಬೈನ ಥಳುಕು ಬಳುಕೆಲ್ಲ ನೀನಾಸಮ್ ಸುತ್ತಲೇ ನೆರೆದಿತ್ತು' ಅಂತ. ಈ ಎಲ್ಲದರ ಹಿನ್ನೆಲೆಯಲ್ಲಿ ಒಮ್ಮೊಮ್ಮೆ ನನಗೂ ಅನುಮಾನ ಬರುತ್ತೆ -- ಇದು ಗ್ರಾಮಾಂತರದಲ್ಲಿರುವ ಸಂಸ್ಕೃತಿ ಕೇಂದ್ರವೋ ಅಥವಾ ಗ್ರಾಮಕೇಂದ್ರಿತ ಸಂಸ್ಕೃತಿ ಕೇಂದ್ರವೋ -- ಅಂತ. ಏಕೆಂದರೆ ಸುಬ್ಬಣ್ಣನವರು 'ನೀನಾಸಮ್ ಹಿನ್ನೆಲೆಯ ಸೆಲೆ' ಅಂತ ಒಂದು ಲೇಖನ ಬರೆದಿದ್ದಾರೆ. ಅದರಲ್ಲಿ ಅವರು ನೀನಾಸಮ್‌ನ್ನು ಕಟ್ಟಿದ್ದರ



ಹಿನ್ನೆಲೆಯನ್ನು ಹೇಳುತ್ತಾ, ಸ್ವಾತಂತ್ರ್ಯ ಹೋರಾಟದ ಆಶಯಗಳೇ, ಹಳ್ಳಿಗಳ ಪುನಾರಚನೆಯ ಉದ್ದೇಶವೇ ಇದರ ಹಿಂದೆ ಕೆಲಸಮಾಡಿದ್ದು ಅಂತ ಗಾಂಧೀಜಿಯ 'ಹಿಂದ್ ಸ್ವರಾಜ್'ನ್ನೂ ಸ್ಮರಿಸುತ್ತಾರೆ.

ಆದರೂ ನನಗೆ ಇಲ್ಲಿಗೆ ಬಂದಾಗಲೆಲ್ಲ ತುಂಬ ಖುಷಿಯಾಗುತ್ತೆ ಅಂತ ಹೇಳಲೇಬೇಕು; ಏಕೆಂದರೆ, ನಿಜವಾದ ಹಳ್ಳಿಯ ಪರಿಸರ ಇಲ್ಲಿದೆ. ಊರು ವಿಶಾಲವಾಗಿದೆ. ನಮ್ಮ ಬಯಲು ಸೀಮೆಗಳ ಹಳ್ಳಿಗಳಲ್ಲಿರುವಂತೆ ಕೊಳಕಿಲ್ಲ. ಕೆಟ್ಟ ಬೈಗುಳಗಳಿಲ್ಲದ ಒಳ್ಳೆಯ ಕನ್ನಡ ಕೇಳಿಸುತ್ತೆ. ಒಳ್ಳೆಯ ನಾಟಕಗಳನ್ನೂ ಇಲ್ಲಿ ನೋಡಬಹುದು. ಹಾಗೆ ನೋಡಿದರೆ, ನನ್ನ ಬದುಕಿನಲ್ಲಿ ಮತ್ತೆ ಮತ್ತೆ ಹೋಗಿ ಕೊಂಚ ಕಾಲ ಕೂತು ಬರಬಯಸುವ ಮೂರು ಜಾಗಗಳಿವೆ: ಒಂದು ನನ್ನೂರಿನ ಬಳಿಯ ಮಹಿಮಾಪುರದ ಗುಡ್ಡೆ ಮೇಲಿನ ಪುಟ್ಟ ದೇವಸ್ಥಾನದ ಬಳಿಯ ಬೇವಿನ ಮರದ ಕೆಳಗಿನ ಸ್ಥಳ. ಬಾಲ್ಯದಲ್ಲಿ ಒಂದೆರಡು ಬಾರಿ ಅನುಭವಿಸಿದ ಜಗತ್ತನ್ನೇ ಮರೆಸುವ ಆ ಪ್ರಶಾಂತಿ ಈಗಲೂ ನನ್ನ ನೆನಪಿನಲ್ಲಿ ಉಳಿದಿದೆ. ಎರಡನೆಯದು, ದೆಹಲಿಯಲ್ಲಿದ್ದಾಗ ಸಮಾಜವಾದಿ ಅಧ್ಯಯನ ಶಿಬಿರಕ್ಕೆಂದು ಹೋಗಿದ್ದ ಹರ್‍ಯಾಣದ ಒಂದು ಹಳ್ಳಿಯಲ್ಲಿ ನಾನು ಒಂದು ಸಂಜೆ ಕಳೆದ ಜಾಗ. ಅದು ಜೆಪಿಯವರು ಭೂದಾನ ಚಳುವಳಿ ಸೇರಿ ಭೂದಾನ ಪಡೆದ ಮೊದಲ ಹಳ್ಳಿಯಂತೆ. ಅಲ್ಲಿ ಒಂದು ವಿಶಾಲ ಬಂಡೆ ಪ್ರದೇಶದ – – ಅಂತಹ ಬಂಡೆ ಜಾಗವಲ್ಲದೆ ಇನ್ನಾವ ಜಾಗ ಭೂದಾನಕ್ಕೆ ಅರ್ಹ? -- ಒಂದು ತುದಿಯಲ್ಲಿದ್ದ ಒಂದೆರಡು ಹೊಂಗೆ ಮರದ ಕೆಳಗಿನ ತಂಪು. ಮೂರನೆಯದು, ಈ ಹೆಗ್ಗೋಡಿನ ನೀನಾಸಮ್ ಕಾರ್ಯಾಲಯದ ಮುಂದೆ ಹಾಕಿರುವ ಅಡಿಕೆ ಮರದ ಮಂಚ. ಎದುರಿನ ಪುಟ್ಟ ಬಯಲು ಮತ್ತು ಅದರಾಚೆಗಿನ ಕಾಡು... ಒಳ್ಳೇ ಆಮ್ಲಜನಕ ಸಿಗುತ್ತೆ. ಜೊತೆಗೆ ಇಲ್ಲಿನ ಸುಸಂಸ್ಕೃತ ವಾತಾವರಣ. ಹವ್ಯಕ ಬ್ರಾಹ್ಮಣರೇ ಇರುವ ಪರಿಣಾಮ ಇರಬೇಕು... ನಾನು ಇಲ್ಲಿಗೆ ಪದೇ ಪದೇ ಬರಬೇಕು ಅನ್ನಿಸುತ್ತೆ, ಇಲ್ಲಿ ಸ್ವಲ್ಪ ಕಾಲ ಕಳೆಯುವುದಕ್ಕಾದರೂ...

ಆದರೆ ಇದರ ಬೌದ್ಧಿಕ ಸ್ವರೂಪದಲ್ಲಿ ಏನೋ ಒಂದು ದೋಷ, ಏನೋ ಒಂದು ಸಮಸ್ಯೆ ಇದೆ ಅಂತ ಅನ್ನಿಸುತ್ತೆ. ಇವೊತ್ತಿನ ಸಮಾಜಕ್ಕೆ ಅಷ್ಟೇನೂ ಒಳ್ಳೆಯದಲ್ಲ ಇದು ಅನ್ನಿಸುತ್ತೆ. ಹೀಗೆ ನಾನು ಹೇಳಿದರೆ ಅದು ಸ್ವಲ್ಪ ತೀವ್ರವಾದ ಮಾತು ಅನ್ನಿಸಬಹುದು. ಆದರೆ ನಾನು ಹೇಳತಿರೋದು, ನಿಮ್ಮಿಂದ ನಿರೀಕ್ಷಿಸಬಹುದಾದ್ದನ್ನು ನೀವು ಮಾಡ್ತಿಲ್ಲ ಅನ್ನುವ ಮಾತನ್ನು. ಸುಬ್ಬಣ್ಣ ಕಟ್ಟಿದ ನೀನಾಸಮ್‌ನಿಂದ ನಾವು ಇದನ್ನು ನಿರೀಕ್ಷಿಸಿರಲಿಲ್ಲ ಅನ್ನೋದು. ಯಾಕೆಂದರೆ, ಇವೊತ್ತು ಚರ್ಚಿಸಬೇಕಾದ ತುಂಬಾ ಸಮಸ್ಯೆಗಳಿವೆ. ಆದರೆ

ನೀನಾಸಮ್‌ಗೆ ರಾಜಕೀಯ ನೆಲೆಗಳ ಸಮಸ್ಯೆಗಳು ಅಂದರೆ ಯಾಕೋ ಮಡಿ ಮೈಲಿಗೆ ಶುರುವಾಗುತ್ತೆ. ಹಾಗಾಗಿಯೇ ಅದು 'ಹಿಂದ್ ಸ್ವರಾಜ್'ನ್ನು ಚರ್ಚೆಗೆ ತಗೊಂಡಾಗ ಅದನ್ನು 'ಮನೋಭೂಮಿಕೆಯಲ್ಲಿ ಹಿಂದ್ ಸ್ವರಾಜ್' ಅಂತ ಮಾಡಿಬಿಡ್ತದೆ. ನಾನೇನೋ ಆ ಬಗ್ಗೆ ರಾಜಕೀಯ ನೆಲೆಯಲ್ಲೇ ಮಾತಾಡಿದೆ. ಇನ್ನು ತಂತ್ರಜ್ಞಾನದ ಪ್ರಶ್ನೆ, ಸಾಮಾಜಿಕ ನ್ಯಾಯ... ಸಾಮಾಜಿಕ ನ್ಯಾಯ ಅನ್ನೋದು ಇವೊತ್ತು ಒಂದು ಸಂಕೀರ್ಣ ಪ್ರಶ್ನೆಯಾಗಿದೆ. ಅದರ ಬಗ್ಗೆ ನಿಜವಾಗಿ ಇಂತಹ ಕಡೆ ಚರ್ಚೆ ನಡೆಯಬೇಕಿದೆ. ಯಾಕೆಂದರೆ ಇಲ್ಲಿಗೆ ದೊಡ್ಡ ದೊಡ್ಡ ಚಿಂತಕರು ಬರ್ತಾರೆ. ಆಮೇಲೆ ಜಾಗತೀಕರಣದ ಸಮಸ್ಯೆ ಅಥವಾ ಸವಾಲುಗಳಿವೆ. ಜಾಗತೀಕರಣ ಕುರಿತ ಸುಬ್ಬಣ್ಣ ಮತ್ತು ಅಕ್ಷರ ಅವರ ನಿಲುವುಗಳಲ್ಲಿ ಸಾಕಷ್ಟು ಸಂದಿಗ್ಧಗಳಿವೆ. ಹಾಗೆಯೇ ಹಿಂದೂ ಕೋಮುವಾದ ಕುರಿತಂತೆ ಕೂಡ. ಕೆಲವರು ಸೂಚಿಸುವಂತೆ ನೀನಾಸಮ್ ಹಿಂದೂ ಕೋಮುವಾದದ ಪರೋಕ್ಷ ವಕ್ತಾರಿಕೆ ಮಾಡ್ತಿದೆ ಅಂತ ಖಂಡಿತ ನಾನು ಹೇಳ್ತಿಲ್ಲ. ಆದರೆ ಇವೊತ್ತು ನಮ್ಮನ್ನು ಕಾಡುತ್ತಿರುವ ತಂತ್ರಜ್ಞಾನ, ಸೆಕ್ಯುಲರಿಸಮ್, ಸಾಮಾಜಿಕ ನ್ಯಾಯದಂತಹ ಇನ್ನೂ ಹಲವು ಜ್ವಲಂತ ಸಮಸ್ಯೆಗಳ ಚರ್ಚೆಗೆ ನೀನಾಸಮ್ ಸಕ್ರಿಯ ಆಸಕ್ತಿ ತೋರಿಸುತ್ತಿಲ್ಲ. ಏಕೆ ಅನ್ನೋದು ನನ್ನಂತಹವರನ್ನು ಕಾಡುವ ಮುಖ್ಯ ಪ್ರಶ್ನೆ. ಹಾಗಾಗಿಯೇ ನನ್ನಂತಹ social profile ನವರಿಗೆ ಇಲ್ಲಿಗೆ ಬಂದಾಗ ಸ್ವಲ್ಪ uncomfortable ಅನ್ನಿಸುತ್ತೇನೋ ಅಂತ ಹೇಳಿ ನನ್ನ ಆರಂಭಿಕ ಮಾತುಗಳನ್ನ ಮುಗಿಸ್ತೇನೆ. ನಮಸ್ಕಾರ.

•••

ಇತ್ತೀಚೆಗೆ ನಿಧನರಾದ
ಹಿರಿಯ ರಂಗತಜ್ಞ
**ಶ್ರೀ ಎ.ಎಸ್. ಮೂರ್ತಿ**
ಮತ್ತು
ಸಂಗೀತಜ್ಞ
**ಶ್ರೀ ಎಂ.ಎಸ್. ಗೋಪಾಲಕೃಷ್ಣನ್**
ಇವರಿಗೆ ನೀನಾಸಮ್‌ನ ಶ್ರದ್ಧಾಂಜಲಿ

# ಸ್ವಾಯತ್ತತೆಯನ್ನು ಕಾಪಾಡಿಕೊಳ್ಳಬೇಕು

ಜಿ. ರಾಜಶೇಖರ

ಹೆಗ್ಗೋಡಿಗೆ ನಾನು ಮೊದಲ ಸಲ ಬಂದದ್ದು ಸುಮಾರು ನಲವತ್ತು ವರ್ಷಗಳ ಹಿಂದೆ. ಈ ನಲವತ್ತು ವರ್ಷಗಳಲ್ಲಿ ಹೆಗ್ಗೋಡು ತುಂಬ ಬದಲಾಗಿದೆ. ಹಿಂದೆ, ಇಲ್ಲಿನ ಕಾರ್ಯಕ್ರಮಗಳನ್ನು ವರದಿ ಮಾಡಲು ಬೆಂಗಳೂರಿನಿಂದ ಪತ್ರಕರ್ತರು ಬರುತ್ತಿದ್ದರು. ಈಗ ಶಿವಮೊಗ್ಗದಿಂದ ಬರುತ್ತಾರೆ. ಬೆಂಗಳೂರಿನ ಪತ್ರಕರ್ತರು ಆಗ ಬಹಳ ಪೇಟ್ರನೈಸಿಂಗಾಗಿ ಕಾಂಡಿಸೆಂಡಿಂಗಾಗಿ 'ಹೆಗ್ಗೋಡಿನಂತಹ ಕುಗ್ರಾಮದಲ್ಲೂ...' ಎಂದು ಮುಂತಾಗಿ ಬರೆಯುತ್ತಿದ್ದರು. ನಾನು ಆ ಪದಪ್ರಯೋಗದ ಬಗ್ಗೆ ಬಹಳ ಸಿಟ್ಟಾಗಿದ್ದೆ. ನಲವತ್ತು ವರ್ಷಗಳ ಹಿಂದೆ ಕೂಡ ಹೆಗ್ಗೋಡು, ಹೇಗೆ ನೋಡಿದರೂ ಕುಗ್ರಾಮವಾಗಿರಲಿಲ್ಲ. ಆಗಲೇ ಇಲ್ಲಿ ಬಹಳ ಚೆನ್ನಾಗಿ ನಡೆಯುತ್ತಿದ್ದ ಹೈಸ್ಕೂಲಿತ್ತು; ಒಂದು ಸಹಕಾರ ಸಂಘ, ಒಂದು ಬ್ಯಾಂಕು ಇದ್ದವು. ಎರಡು ತಾಲೂಕು ಕೇಂದ್ರಗಳನ್ನು – ಹೊಸನಗರ ಮತ್ತು ಸಾಗರ – ಗಳನ್ನು ಸೇರಿಸುವ ಹೆದ್ದಾರಿ ಹೆಗ್ಗೋಡಿನ ಮೂಲಕ ಹಾದುಹೋಗಿತ್ತು. ನಾವು ಇವತ್ತು ಬಹಳ ದೊಡ್ಡದಾಗಿ ಹೇಳುವ 'ಕನೆಕ್ಟಿವಿಟಿ'ಯನ್ನು ಹೆಗ್ಗೋಡು ಆ ದಿನಗಳಲ್ಲೇ ಸಾಧಿಸಿಕೊಂಡಿತ್ತು. 'ಕುಗ್ರಾಮ' 'ರಿಮೋಟ್ ವಿಲೇಜ್' ಮುಂತಾದ ಶಬ್ದಗಳು 'ಪ್ರಿಮಿಟಿವ್ ಟ್ರೈಬ್' ಎಂಬ ಶಬ್ದದ ಹಾಗೆ ವಸಾಹತುಶಾಹಿಯ ಬಳುವಳಿ. ಅದನ್ನು ಬಳಸುವಾಗ ನಾವು ಜಾಗ್ರತೆ ವಹಿಸಬೇಕು. ಯಾವುದೇ ಊರಿನವರಿಗೆ ತಮ್ಮದು ಒಂದು 'ಕುಗ್ರಾಮ' ಎನ್ನಿಸಿದರೆ ಅದೊಂದು ಕೀಳರಿಮೆಯೇ ಸರಿ. ಸಹಜವಾಗಿ ಇರುವ ಯಾರೊಬ್ಬನಿಗೂ ತಾನು 'ಹಿಂದುಳಿದವ' ಅಥವಾ 'ಆದಿವಾಸಿ' ಮತ್ತು ತನ್ನ ಊರು 'ಕುಗ್ರಾಮ' ಎಂದು ಅನ್ನಿಸಲು ಸಾಧ್ಯವಿಲ್ಲ. ಯಾರಿಗೂ ಯಾವ ಗ್ರಾಮವನ್ನೂ 'ಕುಗ್ರಾಮ' ಎಂದು ಕರೆಯುವ ಹಕ್ಕಿಲ್ಲ ಎಂಬುದು ನನ್ನ ನಿಲುವು. ಹೆಗ್ಗೋಡು ಎಂದೂ ಕುಗ್ರಾಮವಾಗಿರಲಿಲ್ಲ. ಈಗಂತೂ ಅದು ಗ್ರಾಮವಾಗಿಯಾದರೂ ಉಳಿದಿದೆಯೆ ಎಂಬುದರ ಬಗ್ಗೆ ನನಗೆ ಸಂದೇಹವಿದೆ. 'ಗ್ರಾಮ' ಎಂಬುದರ ಎಲ್ಲ ಗುಣಲಕ್ಷಣಗಳನ್ನೂ ನಾವು ಇವತ್ತು ಒಟ್ಟಾಗಿ

ಯಾವ ಗ್ರಾಮದಲ್ಲೂ ಕಾಣಲಾರೆವು. ಪರಿಶುದ್ಧವಾದ ಏನನ್ನೂ ಅರಸಿಕೊಂಡು ಹೋಗಬಾರದು; ಪರಿಶುದ್ಧ ಗ್ರಾಮಗಳನ್ನು ಸಹ.ಆದ್ದರಿಂದ 'ತಾವು ಒಂದು ಗ್ರಾಮದಲ್ಲಿದ್ದುಕೊಂಡು ಕಲೆ, ಸಂಸ್ಕೃತಿಗಳ ಕ್ಷೇತ್ರದಲ್ಲಿ ಏನನ್ನೋ ಮಾಡುತ್ತಿದ್ದೇವೆ' ಎಂಬ ಯೋಚನೆ ಏನಾದರೂ ನೀನಾಸಮ್‌ನ ಆಡಳಿತ ಮಂಡಳಿಯವರಿಗೆ ಇದ್ದರೆ, ಅವರು ಅದರಿಂದ ಕಳಚಿಕೊಳ್ಳಬೇಕು.

ಹೆಗ್ಗೋಡು, ಯಾರ ಕಣ್ಣಿನಲ್ಲೂ 'ಗ್ರಾಮೀಣ'ವೆಂದು ಅಧಿಕೃತವಾಗಬೇಕಾದ ಅಗತ್ಯವೇನೂ ಇಲ್ಲ.

ಗೆಳೆಯ ನಾಗಭೂಷಣರ ಒಂದು ಮಾತಿನ ಬಗ್ಗೆ ನನ್ನ ಆಕ್ಷೇಪವಿದೆ. 'ಹೆಗ್ಗೋಡಿನಲ್ಲಿ ಹವ್ಯಕ ಬ್ರಾಹ್ಮಣರ ಸಂಖ್ಯೆ ಎಷ್ಟು? ಇತರರ ಸಂಖ್ಯೆ ಎಷ್ಟು?' ಎಂಬ ಪ್ರಶ್ನೆಯೇ ಅವೈಜ್ಞಾನಿಕ. ಅದರ ತರ್ಕ ಏನು ಎಂದೇ ನನಗೆ ಅರ್ಥವಾಗುತ್ತಿಲ್ಲ. ಇಂತಹ ಜಾತಿವಾರು ತಲೆ–ಲೆಕ್ಕಕ್ಕೆ, ಒಂದು ಹಳ್ಳಿಯನ್ನು ಯೂನಿಟ್ ಎಂದು ಪರಿಗಣಿಸುವುದು ಎಷ್ಟು ಸರಿ? ಒಂದು ಹಳ್ಳಿಯ ಬದಲು, ಅದರ ಬ್ರಾಹ್ಮಣ ಕೇರಿಯನ್ನು ಒಂದು ಯೂನಿಟ್ ಎಂದು ಪರಿಗಣಿಸಿದರೆ ಅಲ್ಲಿ ಪ್ರತಿಶತ ನೂರರಷ್ಟು ಬ್ರಾಹ್ಮಣರೇ ಇರುತ್ತಾರಲ್ಲವೇ? ಮುಸ್ಲಿಮರ ಕೇರಿಯಲ್ಲಿ ನೂರಕ್ಕೆ ನೂರು ಮುಸ್ಲಿಮರೇ ಇರುತ್ತಾರೆ. ಅಲ್ಲಿ ಅವರೇ ಬಹುಸಂಖ್ಯಾತರು. ಆದರೆ ಇಡೀ ಹಳ್ಳಿಯನ್ನೋ ಹೋಬಳಿಯನ್ನೋ ಯೂನಿಟ್ ಎಂದು ಪರಿಗಣಿಸಿದರೆ ಅವರು ಎಲ್ಲಿಯೂ ಬಹುಸಂಖ್ಯಾತರಲ್ಲ. ನಾನು ಒಂದು ಕಾಲ್ಪನಿಕ ಸಮಸ್ಯೆಯ ಬಗ್ಗೆ ಹೇಳುತ್ತಿಲ್ಲ. ಇಡೀ ನಾಡಿನಲ್ಲಿ ಮುಸ್ಲಿಮರು ಅಲ್ಪಸಂಖ್ಯಾತರು. ಆದರೆ ಈಗ ಕರ್ನಾಟಕದ ಅನೇಕ ಊರುಗಳಲ್ಲಿ ಮುಸ್ಲಿಮರ ಕೇರಿಗಳನ್ನು 'ಪಾಕಿಸ್ತಾನ' ಎಂದು ಕರೆಯಲಾಗುತ್ತಿದೆ. ಹೀಗೆ ಎಲ್ಲಿ ಯಾರದ್ದು ಮೆಜಾರಿಟಿ ಎಂದು ನಾವು ಮಾಡುವ ತೀರ್ಮಾನಗಳೆಲ್ಲ ನಮ್ಮ ನಮ್ಮ ಮೂಗಿನ ನೇರಕ್ಕೆ ಮಾಡುವಂತಹವು. ನೀನಾಸಮ್‌ನಲ್ಲಿ ಯಾವ ಜಾತಿಯವರು ಎಷ್ಟು ಜನರಿದ್ದಾರೆ ಎಂದು ಯೋಚಿಸುವ ಮೊದಲು ಇಂತಹ ತಲೆ–ಲೆಕ್ಕಕ್ಕೆ ನೀನಾಸಮ್‌ನ್ನು ಒಂದು ಯೂನಿಟ್ ಎಂದು ಪರಿಗಣಿಸುವುದು ಎಷ್ಟು ಸರಿ ಎಂದು ನಾವು ಯೋಚಿಸಬೇಕು. ಈ ಬಗೆಯ ತಲೆ–ಲೆಕ್ಕಕ್ಕಿಂತ ನೀನಾಸಮ್‌ನ ರಂಗಪ್ರಸ್ತುತಿ ಮತ್ತು ಇತರ ಚಟುವಟಿಕೆಗಳಲ್ಲಿ ಜಾತಿ ಪಕ್ಷಪಾತ ಕಾಣುತ್ತದೆಯೋ ಎಂದು ಯೋಚಿಸುವುದು ಸರಿಯಾದ ವಿಧಾನ. ನನಗಂತೂ, ನೀನಾಸಮ್‌ನ ಯಾವ ಚಟುವಟಿಕೆಯಲ್ಲೂ ಅಂತಹ ಬ್ರಾಹ್ಮಣಪರ ಪಕ್ಷಪಾತ ಮತ್ತು ಅನ್ಯರ ಕುರಿತು ಪೂರ್ವಗ್ರಹ ಏನೂ ಕಂಡಿಲ್ಲ. ಅಂತಹದ್ದು ಇದೆ ಎಂದು ಹೇಳುವವರು ಉದಾಹರಣೆಗಳ ಸಮೇತ ಮುಂದೆ ಬರಬೇಕು.

ಇನ್ನು ನೀನಾಸಮ್‌ನಂಥ ಸಂಸ್ಥೆಯ ಕಾರ್ಯನಿರ್ವಹಣೆ ಹೇಗಿರ



ಬೇಕೆಂಬುದರ ಬಗ್ಗೆ ನಾನು ನಾಗಭೂಷಣರಿಗಿಂತ ಭಿನ್ನವಾದ ನಿಲುವುಗಳನ್ನು ಹೊಂದಿದ್ದೇನೆ. ಅದನ್ನು ಸ್ಪಷ್ಟಪಡಿಸಲು 'ದಿ ಹಿಂದೂ' ಪತ್ರಿಕೆಯ 2012 ಜೂನ್ 13ರ ಸಂಚಿಕೆಯಲ್ಲಿ 'ಕೇರಳದ ಮಹಾತ್ಮಾಗಾಂಧಿ ವಿಶ್ವವಿದ್ಯಾಲಯದ ಸ್ವಾಯತ್ತತೆಗೆ ಭಂಗ ತರಬೇಡಿ' ಎಂಬ ಶೀರ್ಷಿಕೆಯ ಅಡಿಯಲ್ಲಿ ಪ್ರಕಟವಾದ ಒಂದು ಪತ್ರವನ್ನು ನಾನು ನಿಮ್ಮ ಮುಂದೆ ಇಡಬಯಸುತ್ತೇನೆ. ಈ ಪತ್ರ ಬರೆದವರು ಕೇಂದ್ರ ಸರ್ಕಾರದ ವಿಜ್ಞಾನ ಸಲಹೆಗಾರ ಪ್ರೊ. ಸಿ.ಎನ್.ಆರ್. ರಾವ್, ಜವಹರಲಾಲ್ ನೆಹರು ವಿಶ್ವವಿದ್ಯಾಲಯದ ಇತಿಹಾಸ ಪ್ರಾಧ್ಯಾಪಿಕೆ ಪ್ರೊ. ರೋಮಿಲಾ ಥಾಪರ್, ನಮ್ಮವರೇ ಆದ ಪ್ರೊ. ಯು.ಆರ್. ಅನಂತಮೂರ್ತಿ ಹಾಗೂ ಕೇರಳದ ಶಿಕ್ಷಣತಜ್ಞ ಪ್ರೊ. ಕೆ.ಎನ್. ಪಣಿಕ್ಕರ್. ಪ್ರೊ. ಸಿ.ಎನ್.ಆರ್. ರಾವ್ ಅವರ ಬಗ್ಗೆ ನನಗೆ ಗೊತ್ತಿಲ್ಲ. ಪತ್ರಕ್ಕೆ ರುಜು ಹಾಕಿದ ಉಳಿದ ಮೂವರೂ ಸ್ವಘೋಷಿತ ಎಡಪಂಥೀಯರು ಮತ್ತು ಸಮಾಜವಾದಿಗಳು. ಅವರ ಪತ್ರ ಹೀಗಿದೆ:

'ಕೇರಳದ ಕೊಟ್ಟಾಯಂನಲ್ಲಿರುವ ಮಹಾತ್ಮಾಗಾಂಧಿ ವಿಶ್ವವಿದ್ಯಾಲಯದ ಕುರಿತಂತೆ, ಕಳೆದ ಕೆಲವು ತಿಂಗಳುಗಳಿಂದ ನಡೆಯುತ್ತಿರುವ ವಿದ್ಯಮಾನದಿಂದ ನಮಗೆ ಕಳವಳವಾಗಿದೆ. ಖ್ಯಾತ ಇತಿಹಾಸ ವಿದ್ವಾಂಸ ಪ್ರೊ. ರಾಜನ್ ಗುರುಕಲ್ ಅವರು ಆ ವಿಶ್ವವಿದ್ಯಾಲಯದ ಕುಲಪತಿಗಳಾದ ಮೇಲೆ, ಅವರು ಉನ್ನತ ಶಿಕ್ಷಣದಲ್ಲಿ ಹೊಸ ಮಾನದಂಡ ರೂಪಿಸಲು ಹಲವು ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ. ಕಲಿಕೆ ಮತ್ತು ಸಂಶೋಧನೆಗಳಿಗೆ ಸಂಬಂಧಿಸಿದಂತೆ ಇತರ ವಿಶ್ವವಿದ್ಯಾಲಯಗಳ ಜೊತೆ ಸಂಬಂಧ ಬೆಳೆಸುವುದು, ಉತ್ಕೃಷ್ಟ ಮಟ್ಟದ ಅಂತರ್–ವಿಶ್ವವಿದ್ಯಾಲಯ ಕೇಂದ್ರಗಳ ಸ್ಥಾಪನೆ, ಪಾಠಕ್ರಮ ಮತ್ತು ಪಠ್ಯಗಳ ಸುಧಾರಣೆ, ಅಂತರ್‌ರಾಷ್ಟ್ರೀಯ ಮನ್ನಣೆಯುಳ್ಳ ವಿದ್ವಾಂಸ ರೊಡನೆ ಸಹಯೋಗ ಮುಂತಾದವಕ್ಕೂ ಅವರು ಮುಂದಾಗಿದ್ದಾರೆ. ಆದರೆ ಪ್ರೊ. ಗುರುಕಲ್ ಅವರ ಈ ವರ್ತನೆ ಯಥಾಸ್ಥಿತಿಯನ್ನು ಮುಂದುವರೆಸಿ ಕೊಂಡು ಹೋಗಲು ಹವಣಿಸುವ ಹಲವರ ಕಣ್ಣು ಕೆಂಪಾಗಿಸಿದೆ. ಇಂತಹ ಜನಗಳು ಈಗ ಪ್ರೊಫೆಸರ್‌ನ್ನು ಅವರ ಹುದ್ದೆಯಿಂದ ಇಳಿಸಲು ಪಣತೊಟ್ಟಿದ್ದಾರೆ. ವಿಶ್ವವಿದ್ಯಾಲಯವನ್ನು ತನ್ನ ಮೊದಲಿನ ನೌಕರಶಾಹಿಯ ನಿಧಾನ ಪ್ರವೃತ್ತಿ ಮತ್ತು ಶೈಕ್ಷಣಿಕ ಪಡಪೋಷಿತನಗಳ ಕಾಲಕ್ಕೆ ಮರಳಿಸಿ ಕೊಂಡೊಯ್ಯುವುದು ಅವರ ಉದ್ದೇಶವಾಗಿದೆ.

ಈ ಜನಗಳು ವಿಶ್ವವಿದ್ಯಾಲಯದ ಪುನರ್‌ರಚಿತ ಸಿಂಡಿಕೇಟ್ ಮೂಲಕ ತಮ್ಮ ಉದ್ದೇಶವನ್ನು ಈಡೇರಿಸಿಕೊಳ್ಳಲು ಹವಣಿಸುತ್ತಿದ್ದಾರೆ. ಅದಕ್ಕೆ ಸರಿಯಾಗಿ ನೂತನ ಸಿಂಡಿಕೇಟ್ ಶೈಕ್ಷಣಿಕ ಹಿತಾಸಕ್ತಿಗಳ ಬದಲು ರಾಜಕೀಯ ಒತ್ತಾಸೆಗಳಿಗೆ

ಅನುಗುಣವಾಗಿ ರಚಿತವಾಗಿದೆ. ಪ್ರತಿಸಲ ರಾಜ್ಯಸರ್ಕಾರ ಬದಲಾದಾಗಲೂ ಕುಲಪತಿಗಳನ್ನು ಬದಲಾಯಿಸುವ ಮೂಲಕ ವಿಶ್ವವಿದ್ಯಾಲಯುಗಳನ್ನು ನಿಯಂತ್ರಿಸುವುದು ಮತ್ತು ಸಿಂಡಿಕೇಟುಗಳಲ್ಲಿ ರಾಜಕೀಯದ ವ್ಯಕ್ತಿಗಳನ್ನು ಸದಸ್ಯರನ್ನಾಗಿಸುವುದು ವಿಶ್ವವಿದ್ಯಾಲಯದ ಆರೋಗ್ಯಕ್ಕೆ ಹಾನಿಯನ್ನುಂಟು ಮಾಡುತ್ತದೆ. ಯಾವುದೇ ಅರ್ಥಪೂರ್ಣ ಶೈಕ್ಷಣಿಕ ಕಾರ್ಯಯೋಜನೆಗೆ ಅತ್ಯವಶ್ಯವಾಗಿರುವ ವಿಶ್ವವಿದ್ಯಾಲಯದ ಸ್ವಾಯತ್ತತೆಗೂ ಸರಕಾರದ ಇಂತಹ ಮಧ್ಯಪ್ರವೇಶ ತೊಡರುಗಾಲಾಗಿ ನಿಲ್ಲುತ್ತದೆ. ಉನ್ನತ ಶಿಕ್ಷಣದಲ್ಲಿ ಸಾತತ್ಯವನ್ನು ಉಳಿಸಿಕೊಳ್ಳುವುದು ಅತ್ಯಗತ್ಯ. ಕುಲಪತಿಗಳನ್ನು ಬಗ್ಗುಬಡಿಯುವುದು ಉನ್ನತ ಶಿಕ್ಷಣದ ಉಸ್ತುವಾರಿ ನಡೆಸುವ ವಿಧಾನ ಖಂಡಿತ ಅಲ್ಲ.

ರಾಜನ್ ಗುರುಕಲ್ ಕುಲಪತಿಯಾಗಿದ್ದ ಅವಧಿಯಲ್ಲಿ ವಿಶ್ವವಿದ್ಯಾಲಯ ರಾಷ್ಟ್ರೀಯ ಹಾಗೂ ಅಂತರ್‌ರಾಷ್ಟ್ರೀಯ ಮಟ್ಟದ ಗಮನ ಸೆಳೆದಿದೆ. ಈ ಅವಧಿಯಲ್ಲಿ ಅಲ್ಲಿ ಭೇಟಿ ನೀಡಿದ ನಮ್ಮಲ್ಲಿ ಹಲವರಿಗೆ ವಿದ್ವತ್ತು ಮತ್ತು ವ್ಯಾಸಂಗಗಳನ್ನು ಬೆಳೆಸಲು ಅನುವಾಗುವಂತಹ ಅಲ್ಲಿನ ವಾತಾವರಣ ಭಾರತದ ವಿಶ್ವವಿದ್ಯಾಲಯಗಳಲ್ಲೇ ವಿಶಿಷ್ಟವಾದುದು ಎಂದೆನಿಸಿದೆ. ಅದಕ್ಕೆ ಪ್ರೊ. ಗುರುಕುಲ್ ಅವರ ನಿಷ್ಠೆ ಮತ್ತು ಆಡಳಿತ ಕೌಶಲ್ಯಗಳೇ ಕಾರಣ. ಹಾಗಾಗಿ ಅವರ ವಿರುದ್ಧ ಆಧಾರರಹಿತ ಹಾಗೂ ಕ್ಷುಲ್ಲಕ ಆಪಾದನೆಗಳನ್ನು ಮಾಡಲಾಗುತ್ತಿರುವುದು ಆಶ್ಚರ್ಯ ಹುಟ್ಟಿಸುತ್ತದೆ. ವಿಶ್ವವಿದ್ಯಾಲಯದ ಶೈಕ್ಷಣಿಕ ಸ್ವಾತಂತ್ರ್ಯ ಮತ್ತು ಆಡಳಿತ ಸ್ವಾಯತ್ತತೆಯನ್ನು ರಕ್ಷಿಸುವ ದೃಷ್ಟಿಯಿಂದ ಈ ವಿಷಯದಲ್ಲಿ ತಾವು ತಕ್ಷಣ ಮಧ್ಯಪ್ರವೇಶಿಸಬೇಕೆಂದು ನಾವು ಒತ್ತಾಯಿಸುತ್ತೇವೆ.'

ಇದು ಕೇರಳದ ರಾಜ್ಯಪಾಲರನ್ನು ಉದ್ದೇಶಿಸಿರುವ ಪತ್ರ. ಈ ಪತ್ರ ಬರೆದವರು ಮುಖ್ಯವಾಗಿ ಎರಡು ಮೌಲ್ಯಗಳಿಗೆ ಒತ್ತು ಕೊಡುತ್ತಾರೆ. ಸ್ವಾಯತ್ತತೆ ಮತ್ತು ಸಾತತ್ಯಗಳೇ ಆ ಎರಡು ಮೌಲ್ಯಗಳು. ವಿಶ್ವವಿದ್ಯಾಲಯಗಳು ಮಾತ್ರವಲ್ಲ ನೀನಾಸಮ್‌ನಂತಹ ಸಂಸ್ಥೆ ಕೂಡ ತನ್ನ ಸ್ವಾಯತ್ತತೆಯನ್ನು ಎಂದೂ ಕಳೆದುಕೊಳ್ಳಕೂಡದು. ತನ್ನ ದಿನದಿನದ ಖರ್ಚು ವೆಚ್ಚಗಳನ್ನು ಭರಿಸಲು ಅದು ಸರಕಾರದ ಅನುದಾನ ಮಾತ್ರವಲ್ಲ, ಎಲ್ಲಿಂದ ಸಂಪನ್ಮೂಲ ದೊರೆತರೂ, ಅದನ್ನೆಲ್ಲ ನಿರ್ಭಿಡೆಯಾಗಿ ಬಳಸಿಕೊಳ್ಳಬೇಕು. ಗುಣಮಟ್ಟ, ಅಭಿರುಚಿ ಮತ್ತು ನಂಬಿಕೆಗಳ ಮಟ್ಟಿಗೆ ಯಾವುದೇ ರಾಜಿ ಮಾಡಿಕೊಳ್ಳುವುದಿಲ್ಲ ಎಂಬ ದೃಢ ಸಂಕಲ್ಪದಲ್ಲಿ ನೀನಾಸಮ್ ಎಲ್ಲ ಮೂಲಗಳಿಂದಲೂ ನಿಸ್ಸಂಕೋಚವಾಗಿ ಆರ್ಥಿಕ ನೆರವು ಪಡೆಯಬಹುದು; ಆದರೆ ಯಾವುದೇ ಕಾರಣಕ್ಕೂ ಅದು ತನ್ನ ಸ್ವಾಯತ್ತತೆಗೆ ಎರವಾಗಕೂಡದು ಎಂಬುದು ನನ್ನ ಕಳಕಳಿ.

ಇದುವರೆಗೆ ಈ ಸಂಸ್ಥೆ ಸ್ವಾಯತ್ತತೆ ಮತ್ತು ಸಾತತ್ಯ – ಎರಡನ್ನೂ



ಉಳಿಸಿಕೊಂಡಿದೆ. ಸಾತತ್ಯವೂ ಸ್ವಾಯತ್ತತೆಯಷ್ಟೆ ಮುಖ್ಯವಾದದ್ದು. ಬಹಳ ಸುಲಭವಾಗಿ ಅದನ್ನು 'ಗೊಡ್ಡು ಸಂಪ್ರದಾಯ' ಎಂದು ನಾಮಕರಣ ಮಾಡಿ ಬಿಡಬಹುದು. ಆದರೆ ಸಂಸ್ಥೆಗಳು ಸಾತತ್ಯವನ್ನು ಕಾಪಾಡಿಕೊಳ್ಳದಿದ್ದರೆ ಪರಂಪರೆಯೂ ಉಳಿಯುವುದಿಲ್ಲ. ಸ್ವಾಯತ್ತತೆ ಎಂದರೆ ಯಾವ ಯಾವ ಅಧಿಕಾರ ಕೇಂದ್ರಗಳ ಎದುರು ಸ್ವಾಯತ್ತತೆ? ಈ ಪ್ರಶ್ನೆಗೆ ನಾವು ಬಹಳ ಸುಲಭದ ಉತ್ತರಗಳನ್ನು ಅರಸುತ್ತೇವೆ. ನಮಗೆ ಕಾಣುವುದು ಅಧಿಕಾರದ ಒಂದು ಕೇಂದ್ರ ಮಾತ್ರ – ಸರಕಾರ. ಅದನ್ನು ಇನ್ನೂ ವಿಸ್ತರಿಸಿ ಸರಕಾರ, ಆಡಳಿತ, ವಿರೋಧ ಪಕ್ಷಗಳು –– ಎಲ್ಲ ಒಟ್ಟಾಗಿ ನಮ್ಮ ಪ್ರಭುತ್ವ ವ್ಯವಸ್ಥೆಯನ್ನೂ ನಾವು ಅಧಿಕಾರದ ಒಂದೇ ಒಂದು ಕೇಂದ್ರ ಎಂದು ಸಹ ಭಾವಿಸಬಹುದು. ನೀನಾಸಮ್‌ನಂತಹ ಸಂಸ್ಥೆ ಈ ವ್ಯವಸ್ಥೆಯ ಯಜಮಾನಿಕೆ ಎದುರು ತನ್ನ ಸ್ವಾಯತ್ತತೆಯನ್ನು ಉಳಿಸಿಕೊಳ್ಳಬೇಕು ಎಂಬುದನ್ನು ಇವತ್ತು ಉದಾರವಾದಿಗಳು ಮಾತ್ರವಲ್ಲ ಸಮಾಜವಾದಿಗಳು ಸಹ ಒಪ್ಪಿಕೊಳ್ಳುತ್ತಾರೆ. 'ಅಧಿಕಾರ ಎಂದರೆ ಕೇವಲ ಸರಕಾರ ಅಥವಾ ಪ್ರಭುತ್ವದ ಯಜಮಾನಿಕೆ, ವಿಶ್ವವಿದ್ಯಾಲಯಗಳು, ಮತ್ತು ನೀನಾಸಮ್‌ನಂತಹ ಸಂಸ್ಥೆಗಳಿಗೆ ಅವು ಅನುದಾನ ಮಾತ್ರ ಕೊಡಲಿ; ಆದರೆ ಅವುಗಳನ್ನು ನಿಯಂತ್ರಿಸುವ ಗೋಜಿಗೆ ಹೋಗದೆ ಇರಲಿ. ಆಗ ಈ ಸಂಸ್ಥೆಗಳು ಸ್ವಾಯತ್ತವಾಗಿ ಉಳಿಯುತ್ತವೆ' ಎಂದು ಈಗ ಉದಾರವಾದಿಗಳು, ಸಮಾಜವಾದಿಗಳು ಎಲ್ಲರೂ ಭಾವಿಸುತ್ತಿದ್ದಾರೆ. ಆದರೆ ನನ್ನ ಪ್ರಕಾರ ಸ್ವಾಯತ್ತತೆ ಎಂದರೆ ಅಷ್ಟೇ ಅಲ್ಲ. ಪ್ರಭುತ್ವವೊಂದೇ ಈ ಸಮಾಜದ ಅಧಿಕಾರ ಕೇಂದ್ರವಲ್ಲ. ಪ್ರತಿಯೊಂದು ಕುಟುಂಬದಲ್ಲೂ ಉಳಿದವರ ಮೇಲೆ ಅಧಿಕಾರ ಚಲಾಯಿಸುವ 'ಹಿರಿಯರು' ಇರುತ್ತಾರೆ. ಹಾಗೆಯೇ ಪ್ರತಿ ಊರು, ಜಾತಿ, ಪಂಗಡ, ಧರ್ಮಗಳಲ್ಲೂ 'ಯಜಮಾನ'ರಿದ್ದಾರೆ. ನಾವು ದುಡಿಯುವ ಕಚೇರಿ ಅಥವಾ ಉದ್ಯಮದಲ್ಲೂ ಒಂದು ಅಧಿಕಾರದ ಸಂರಚನೆ ಇರುತ್ತದೆ.

ನಮ್ಮ ಕಾಲದ ಮಾಧ್ಯಮಗಳು ಚಲಾಯಿಸುವ ಅಧಿಕಾರ ಸಹ ನಗಣ್ಯವೇನೂ ಅಲ್ಲ. ಹೀಗೆ ಅಧಿಕಾರದ ಕೇಂದ್ರ ಒಂದಲ್ಲ. ನೂರಾರಿವೆ. ಅದೂ ಅಲ್ಲದೆ ನಮ್ಮ ಕಾಲದಲ್ಲಿ ಆಳುವ ಸರಕಾರಕ್ಕಿಂತಲೂ ಪ್ರಬಲವಾದ ಅಧಿಕಾರ ಕೇಂದ್ರವೊಂದಿದ್ದರೆ, ಅದು ನಮ್ಮ ಮನಸ್ಸುಗಳನ್ನು ಆಳುವ ಸಿದ್ಧಾಂತಗಳು– ಎಡ, ಬಲ, ಎಲ್ಲ ಬಗೆಯ ಸಿದ್ಧಾಂತಗಳು. 20ನೆಯ ಶತಮಾನದ ನಂತರ ಜಗತ್ತಿನಲ್ಲಿ ಚಲಾವಣೆಗೆ ಬಂದ ಎಲ್ಲ ರಾಜಕೀಯ ಸಿದ್ಧಾಂತಗಳೂ ಚರಿತ್ರೆಯಲ್ಲಿ ಹಿಂದೆ ಎಂದೂ ಕಾಣದ ಜೀವಹಿಂಸೆಗೆ ಕಾರಣವಾಗಿವೆ. ಫ್ಯಾಸಿಸಂ, ಕ್ಯಾಪಿಟಲಿಸಂ, ಕಮ್ಯುನಿಸಂ, ಇಂಪೀರಿಯಲಿಸಂ –– ನಮ್ಮ ಕಾಲದ ಈ ಎಲ್ಲ ಪ್ರಧಾನ ಇಸಂಗಳೂ ನರಮೇಧಗಳನ್ನೂ ನಡೆಸಿವೆ. ಆದಾಗ್ಯೂ ಅವು ಈಗಲೂ

ನಮ್ಮ ಮನಸ್ಸುಗಳನ್ನು ಆಳುತ್ತಿವೆ. ನೀನಾಸಮ್‌ನಂತಹ ಸಾಂಸ್ಕೃತಿಕ ಸಂಸ್ಥೆ ಆ ಸಿದ್ಧಾಂತಗಳ ನಿರಂಕುಶತೆಗೆ ಎದುರಾಗಿ ತನ್ನ ಸ್ವಾಯತ್ತತೆಯನ್ನು ಒಂದು ವ್ರತದಂತೆ ಕಾಪಾಡಿಕೊಳ್ಳಬೇಕು. ಸಮಾಜವಾದದಲ್ಲಿ ಈಗಲೂ ನಿಷ್ಠೆ ಇರಿಸಿಕೊಂಡೇ ನಾನು ಈ ಮಾತು ಹೇಳುತ್ತಿದ್ದೇನೆ. ತಥಾಕಥಿತ ಸಮಾಜವಾದಿಗಳು ನೀನಾಸಮ್‌ಗೆ 'ಜಾತಿವಾದಿ' ಅಥವಾ 'ಪ್ರತಿಗಾಮಿ' ಎಂಬ ಲೇಬಲ್ ಹಚ್ಚಿದರೆ ಸಂಸ್ಥೆ ಆ ಬಗ್ಗೆ ಚಿಂತಿಸಬೇಕಾದ ಅಗತ್ಯವೇ ಇಲ್ಲ. ಬಲಪಂಥೀಯ ಸಾಂಸ್ಕೃತಿಕ ಅಜೆಂಡಾಗಳನ್ನು ಎಂದೂ ನೀನಾಸಮ್ ತನ್ನ ಹತ್ತಿರ ಕೂಡ ಸೇರಿಸಿಕೊಂಡದ್ದಿಲ್ಲ. ಹಾಗಿರುತ್ತ ನಿಮಗೆ ಈ ಎಡಪಂಥೀಯರ ಸರ್ಟಿಫಿಕೇಟು ಯಾಕೆ ಬೇಕು? ನಮ್ಮ ಮೆಚ್ಚುಗೆಯ ಸಾಂಸ್ಕೃತಿಕ ಸಂಘಟನೆಯೊಂದು ನಮಗೆ ಒಪ್ಪಿಗೆಯಾಗುವ ಮಾತುಗಳನ್ನು ಮಾತ್ರ ಹೇಳುತ್ತಿರಬೇಕು ಎಂದು ನಾವು ನಿರೀಕ್ಷಿಸುವುದೇ ಆದರೆ, ನಾವು ಆ ಸಂಘಟನೆಯನ್ನು ನಮ್ಮನ್ನೂ ಸೇರಿಸಿಕೊಂಡೇ ಕುಬ್ಜಗೊಳಿಸುತ್ತೇವೆ. ನೀನಾಸಮ್ ಒಂಟಿದನಿಯಾಗಿರಲು ಹಿಂಜರಿಯಕೂಡದು. ಡೇರ್ ಟು ಬಿ ಎಲೋನ್. ಇಷ್ಟು ಮಾತ್ರ ನಾನು ಹೇಳ ಬಯಸುವುದು.

•••





ಅಕ್ಷರ ಪ್ರಕಾಶನದ ಹೊಸ ಪ್ರಕಟಣೆ

ಸುರಗಿ

ಯು.ಆರ್. ಅನಂತಮೂರ್ತಿ
ಅವರ ಆತ್ಮಕಥನ
ನಿರೂಪಣೆ ಮತ್ತುಸಂಯೋಜನೆ
ಜ.ನಾ. ತೇಜಶ್ರೀ
ಬೆಲೆ – ರೂ. ೨೫೦


# ಮುಕ್ತ ಚಿಂತನೆಗೆ ಅವಕಾಶ

## ಡಾ. ಜೆ. ಎಸ್. ಸದಾನಂದ

ನಾಗಭೂಷಣರವರು ಮತ್ತು ರಾಜಶೇಖರ್ ಅವರು ಮೊದಲು ಮಾತನಾಡಲಿ ಎನ್ನುವ ನನ್ನ ನಿರೀಕ್ಷೆಗೆ ಎರಡು ಕಾರಣಗಳಿವೆ. ಒಂದು, ಅವರು ನನಗಿಂತ ದೀರ್ಘಕಾಲ ನೀನಾಸಮ್ ಜೊತೆ ಸಂಪರ್ಕವನ್ನಿಟ್ಟುಕೊಂಡದ್ದು ಮತ್ತು ಎರಡನೆಯದು, ನನಗಿಂತ ಹೆಚ್ಚು ನೀನಾಸಮ್‌ನ ಬೇರೆ ಬೇರೆ ಕ್ಷೇತ್ರಗಳಲ್ಲಿ ಅವರನ್ನು ತೊಡಗಿಸಿಕೊಂಡದ್ದು. ನನಗೆ ನೀನಾಸಮ್ ಬಗ್ಗೆ ಮೊದಲು ಗೊತ್ತಾಗಿದ್ದು 'ತುರ್ತು ಪರಿಸ್ಥಿತಿಯ' ಸಂದರ್ಭದಲ್ಲಿ. ಆಗ ನಾನು ಕಾರ್ಕಳದಲ್ಲಿ ಬಿ.ಎ. ಪದವಿಯ ವ್ಯಾಸಂಗ ಮಾಡುತ್ತಿದ್ದೆ. ನನಗಿಲ್ಲಿ ಮೊದಲು ಭೇಟಿನೀಡಲು ಅವಕಾಶವಾದದ್ದು 1980ರ ದಶಕದಲ್ಲಿ ರೈತ ಚಳುವಳಿಯ ಮೂಲಕ; ಅಂದರೆ ಅನೇಕ ರೈತ ಮುಖಂಡರ ಜೊತೆ ಸುಬ್ಬಣ್ಣನವರನ್ನು ಭೇಟಿಯಾಗಲು ಬಂದಿದ್ದೆ. ನಂತರ ಕುವೆಂಪು ವಿಶ್ವವಿದ್ಯಾಲಯಕ್ಕೆ ಬಂದಮೇಲೆ ನೀನಾಸಮ್‌ನೊಡನೆ ಒಡನಾಟ ಪ್ರಾರಂಭವಾಯಿತು. ಕಳೆದ ಏಳೆಂಟು ವರ್ಷಗಳಿಂದ ಅಕ್ಷರರವರ ಒಡನಾಟ ಮತ್ತು ಅದಕ್ಕಿಂತ ಹಿಂದೆ ಸುಬ್ಬಣ್ಣನವರೊಡನೆ ಒಡನಾಟ ನೀನಾಸಮ್ ಜೊತೆ ಬೆರೆಯಲು ಸಾಧ್ಯಮಾಡಿಕೊಟ್ಟಿತು. ನಾನು ನನ್ನ ಈ ಅಭಿಪ್ರಾಯವನ್ನು ನೀನಾಸಮ್‌ನ ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ವಲಯಗಳಿಗೆ ಸೀಮಿತವಾಗಿಸಿಕೊಳ್ಳುತ್ತೇನೆ.

ಇಂತಹ ಚರ್ಚೆಗಳನ್ನು ಮಾಡಲು ನೀನಾಸಮ್‌ಗೆ ಇರುವ ಉದ್ದೇಶಗಳೇನು? ಏನಾದರೂ ಇರಲೇಬೇಕು. ಬೇರೆ ಬೇರೆ ರೀತಿಯ ಅಭಿಪ್ರಾಯಗಳಿರಬಹುದು. ಮೊದಲನೆಯದು, ಒಂದು ವಿಷಯದ ಬಗ್ಗೆ ಇರುವ ವಿಭಿನ್ನವಾದ ಅಭಿಪ್ರಾಯಗಳನ್ನು ಸಂಗ್ರಹಿಸುವುದು ಮತ್ತು ಅವನ್ನು ವ್ಯಕ್ತಪಡಿಸುವುದಕ್ಕೆ ನೀನಾಸಮ್ ಒಂದು ಮುಕ್ತ ವೇದಿಕೆಯಾಗಬೇಕೆಂಬುದು. ಎರಡನೆಯದು, ಒಂದು ಸಮಾಜದ ಬದಲಾವಣೆಯ ಬಗ್ಗೆ, ಬದಲಾಗುವ ರಾಜಕೀಯ ಪರಿಸ್ಥಿತಿಗಳ ಬಗ್ಗೆ ನೀನಾಸಮ್‌ಗೇ ಆದಂತಹ ಒಂದು ಬದ್ಧತೆಯಿದೆ; ಆದ್ದರಿಂದ, ಅದಕ್ಕೆ ಪೂರಕವಾದ ಒಂದು ಬೌದ್ಧಿಕ ಚಿಂತನೆಯನ್ನು ರೂಪಿಸ

ಬೇಕೆಂಬುದು. ಕೊನೆಯದು, ಕೇವಲ ಒಂದು ರೀತಿಯ ಚರ್ಚೆ ಅಥವಾ ಒಂದು ರೀತಿಯ ಚಟುವಟಿಕೆಗಳನ್ನು ನಡೆಸಲೋಸುಗ ಆಯೋಜಿಸಿದ್ದು. ಹೀಗೆ ಭಿನ್ನ ರೀತಿಯಲ್ಲಿ ಉದ್ದೇಶಗಳನ್ನು ಹೊಂದಿರಬಹುದು. ಆದರೆ, ನನ್ನ ಪ್ರಕಾರ ಅದಕ್ಕೆ ತನ್ನ ಉದ್ದಿಶ್ಯದ ಸ್ಪಷ್ಟತೆಯಿರಬೇಕು. ಇನ್ನು ಇಂತಹ ಚರ್ಚೆಗಳನ್ನು ನಡೆಸುವ ಸಂದರ್ಭದಲ್ಲಿ ನೀನಾಸಮ್ ಆಡಳಿತ ಮಂಡಳಿಯ, ಅಧ್ಯಕ್ಷರ ಅಥವಾ ಅಕ್ಷರರವರ -- ಸಮಾಜದ ಬಗೆಗಿನ ವೈಯಕ್ತಿಕ ನೆಲೆಗಳು ಬೇರೆಯಿರಬಹುದು. ಅದಕ್ಕೂ ಇಂತಹ ಚರ್ಚೆಗಳ ಉದ್ದೇಶಕ್ಕೂ ಬಹಳ ಸ್ಪಷ್ಟವಾದ ವ್ಯತ್ಯಾಸಗಳಿರಬೇಕು.

ರಾಜಶೇಖರರವರು ವಿವರಿಸಿದ ಸ್ವಾಯತ್ತತೆ ಇಲ್ಲಿಗೂ ಅನ್ವಯವಾಗುತ್ತದೆ ಎಂಬುದು ನನ್ನ ಭಾವನೆ. ಸ್ವಾಯತ್ತತೆ ಕೇವಲ ಪ್ರಭುತ್ವ ಮತ್ತು ಸರ್ಕಾರ – – ಇವುಗಳ ನಿಯಂತ್ರಣದಿಂದ ಹೊರಗಿರುವುದು ಎನ್ನುವುದಷ್ಟೇ ಅಲ್ಲ. ನೀನಾಸಮ್‌ನಂತಹ ಸಂಸ್ಥೆಗೆ ಬೇಕಾಗುವುದು ಅದಷ್ಟೇ ಅಲ್ಲ. ಬೇಕಾಗಿರುವುದು ಬೌದ್ಧಿಕ ಸ್ವಾಯತ್ತತೆ. ಅಂದರೆ ಬೌದ್ಧಿಕ ವಲಯದಲ್ಲಿರುವ ಗುಂಪುಗಳಲ್ಲಿ ಯಾವುದೇ ಒಂದು ಗುಂಪಿನ ನಿಯಂತ್ರಣಕ್ಕೆ ಅದು ಒಳಗಾಗಬಾರದು. ಇಲ್ಲಿ ಸಹಜವಾಗಿ ಕೆಲವು ಪ್ರಶ್ನೆಗಳು ಉದ್ಭವಿಸುತ್ತವೆ. ನಾಗಭೂಷಣರವರ ಅಭಿಪ್ರಾಯದಂತೆ, ಅವರಿಗೆ ಇಲ್ಲಿನ ಕೆಲವು ಚರ್ಚೆಗಳಲ್ಲಿ ಭಾಗವಹಿಸಿದಾಗ ಕೆಲವು ರೀತಿಯ ಮುಜುಗರಗಳು ಉಂಟಾಗಿವೆ. ಏಕೆಂದರೆ, ನನ್ನ ಪ್ರಕಾರ, ಅವರು ಚರ್ಚೆಗಳು ಯಾವುದೋ ಒಂದು ರೀತಿಯಲ್ಲಿ ಆಗಿದ್ದರೆ ಚೆನ್ನಾಗಿತ್ತು ಎನ್ನುವ ನಿರೀಕ್ಷೆಯಲ್ಲಿರುತ್ತಾರೆ. ನೀನಾಸಮ್ ಒಂದು ಶಿಬಿರವನ್ನು ನಾಗಭೂಷಣರವರೇ ನಡೆಯಿಸಲು ಆಹ್ವಾನಿಸುತ್ತದೆ ಎಂದಿಟ್ಟು ಕೊಳ್ಳೋಣ. ಆಗ ಇನ್ನುಳಿದ ಕೆಲ ಮಂದಿಗೆ ಅದು ಮುಜುಗರ ತರಿಸಬಹುದು! ಅಂದರೆ, ಕೆಲವು ಜನರಿಗೆ ಕೆಲ ಬಗೆಯ ಚರ್ಚೆಗಳು ಮುಜುಗರ ತರಿಸುವುದನ್ನು ತಪ್ಪಿಸಲು ಸಾಧ್ಯವಿಲ್ಲ. ಇದು ಬೌದ್ಧಿಕ ಚರ್ಚೆಯ ಬೆಳವಣಿಗೆಯಲ್ಲಿನ ಅನಿವಾರ್ಯ ಪ್ರಕ್ರಿಯೆ. ಯಾರಿಗೂ ಮುಜುಗರ ತರಿಸದ ಚರ್ಚೆ ಚರ್ಚೆಯೇ ಅಲ್ಲ; ಬದಲಾಗಿ ಅದೊಂದು ಸ್ವಾಮಿಗಳ ಪ್ರವಚನವಾಗಿಬಿಡುತ್ತದೆ.

ನನ್ನ ಸುಮಾರು ಇಪ್ಪತ್ತೈದು ಮೂವತ್ತು ವರ್ಷಗಳ ನೀನಾಸಮ್ ಜೊತೆಗಿನ ಒಡನಾಟದಿಂದ ಕಂಡುಬಂದದ್ದು -- ಯಾವ ಕೆಲಸಗಳನ್ನು ವಿಶ್ವವಿದ್ಯಾಲಯಗಳು ಮಾಡಬೇಕಿತ್ತೋ ಮತ್ತು ಆ ಕೆಲಸಗಳ ಪ್ರಾರಂಭಗಳಲ್ಲಿ ಪ್ರತಿಶತ ನೂರರಷ್ಟು ಸೋಲನ್ನು ಕಂಡಿವೆಯೋ ಅಂತಹ ಕೆಲಸಗಳನ್ನು ಮಾಡಲು ನೀನಾಸಮ್ ಅವಕಾಶಗಳನ್ನು ತೆರೆಯಿಸಿಕೊಡುತ್ತಿದೆ. ಬಹಳ ಖೇದಕರ ಸಂಗತಿಯೆಂದರೆ, ಯೂನಿವರ್ಸಿಟಿಗಳಲ್ಲಿನ ವಾತಾವರಣಗಳಲ್ಲಿ ಬೌದ್ಧಿಕ



ಚಟುವಟಿಕೆಗಳು ಸಂಪೂರ್ಣವಾಗಿ ನಾಶಗೊಂಡಿವೆ. ಇದಕ್ಕೆ ಎರಡು ಮೂರು ಕಾರಣಗಳು: ಒಂದು, ಅಲ್ಲಿಗೆ ಭೇಟಿ ನೀಡುವ ಜನಗಳಿಗೆ ಬೌದ್ಧಿಕ ಚಟುವಟಿಕೆಗಳ ಬಗ್ಗೆ ಗೌರವವಿಲ್ಲದೆ ಇರುವುದು. ಎರಡನೆಯದು, ಬೌದ್ಧಿಕ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿರುವವರಲ್ಲಿ ಉಂಟಾಗುವ ಗುಂಪುಗಾರಿಕೆ. ಒಂದು ಗುಂಪಿನ ಜನ ಇನ್ನೊಂದು ಗುಂಪಿನ ಜನರ ಅಭಿಪ್ರಾಯಗಳನ್ನು ಟೀಕಿಸುವ ಪ್ರಕ್ರಿಯೆಯಲ್ಲಿ ಬೌದ್ಧಿಕ ಪ್ರಾಮಾಣಿಕತೆ ಮರೆಯಾಗಿ ತನ್ನ ಗುಂಪಿನ ಐಡಿಯಾಲಜಿಗೆ ಬದ್ಧರಾಗಿರುವುದೇ ಪ್ರಾಮಾಣಿಕತೆ ಎನಿಸಿಕೊಳ್ಳುವ ಪರಿಸ್ಥಿತಿ ಇದೆ. ಅಂತಹ ವಾತಾವರಣದಲ್ಲಿ ಹೊಸ ರೀತಿಯ ಚಿಂತೆನಗಳೇ ಹುಟ್ಟಿ ಕೊಳ್ಳುವುದಿಲ್ಲ. ಈ ಕಾರಣದಿಂದಾಗಿಯೇ ಕಳೆದ ಕೆಲವು ದಶಕಗಳಿಂದ ವಿಶ್ವವಿದ್ಯಾನಿಲಯಗಳಲ್ಲಿ ಯಾವುದೇ ರೀತಿಯ ಹೊಸ ಚಿಂತನೆಗಳು ಹುಟ್ಟುತ್ತಿಲ್ಲ. ಯಾರು ಒಪ್ಪಲಿ ಬಿಡಲಿ, ಒಂದು ರೀತಿಯ ಮುಕ್ತವಾದ ಚರ್ಚೆಗಳು ನಡೆಯಬೇಕೆಂಬ ಧೋರಣೆಗಳು ಕಡಿಮೆಯಾಗಿ ಪೊಲಿಟಿಕಲಿ ಸರಿಯಾದ ನಿಲುವು ತೆಗೆದುಕೊಳ್ಳುವ ಒತ್ತಡ ಹೆಚ್ಚಾಗುತ್ತಿದೆ. ಇದರ ಪರಿಣಾಮವಾಗಿ ನಮ್ಮ ಚಿಂತನೆಗಳನ್ನು ವಿಮರ್ಶೆಗೊಡ್ಡುವ ಅವಕಾಶಗಳು ಕುಂಠಿತವಾಗಿ, ಅದರಿಂದ ಹುಟ್ಟಬಹುದಾದ ಹೊಸ ಚಿಂತನೆಗಳ ಬೇರನ್ನೇ ಚಿವುಟಿ ದಂತಾಗುತ್ತದೆ. ಎಡಪಂಥ, ಬಲಪಂಥ ಮುಂತಾದ ಅನೇಕ ಸಿದ್ಧಾಂತಗಳು ಹುಟ್ಟಿದ್ದೇ ಯುರೋಪಿನ ವಿಶ್ವವಿದ್ಯಾಲಯಗಳಲ್ಲಿ. ಈ ಎಲ್ಲಾ ಸಿದ್ಧಾಂತಗಳು ಮುಂದೆ ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ರೀತಿಯ ಆಯಾಮಗಳನ್ನು ಪಡೆದುಕೊಂಡಿವೆ. ಆದರೆ ಇವುಗಳ ಉಗಮಸ್ಥಾನ ಅಲ್ಲಿನ ವಿಶ್ವವಿದ್ಯಾಲಯಗಳು ಎನ್ನುವುದನ್ನು ನಾವು ನೆನಪಿಡಬೇಕು. ದುರದೃಷ್ಟವಶಾತ್ ವಿಶ್ವವಿದ್ಯಾಲಯಗಳು ಇಂದು ಅಂತಹ ಪಾತ್ರ ವಹಿಸುತ್ತಿಲ್ಲ. ಕಳೆದ ಇನ್ನೂರು ಮುನ್ನೂರು ವರ್ಷಗಳ ಇತಿಹಾಸದಿಂದ ನಮಗೆ ಕಂಡುಬರುವುದು -- ಅನೇಕ ಚಿಂತನೆಗಳು ಅನೇಕರ ಗರಡಿಗಳಲ್ಲಿ ಪಳಗಿ ಒಂದು ಹೊಸದಾದ ಮತ್ತು ಒಂದು ಸ್ಪಷ್ಟವಾದ ರೂಪವನ್ನು ಪಡೆದುಕೊಳ್ಳುತ್ತಿವೆ, ಮತ್ತು ಆ ಸಿದ್ಧಾಂತಗಳನ್ನು ಬೇರೆ ಬೇರೆ ಆಯಾಮಗಳಲ್ಲಿ ವಿಶ್ಲೇಷಿಸಬಹುದೆಂಬುದನ್ನು ತೋರಿಸಿಕೊಡುತ್ತವೆ. ಮಾರ್ಕ್ಸಿಸಂ, ಸೋಷಿಯಲಿಸಂ ಮುಂತಾದ ಸಿದ್ಧಾಂತಗಳು ನಮ್ಮ ಅನುಭವಗಳನ್ನು ಬೇರೆ ರೀತಿಯಲ್ಲಿ ಕಟ್ಟಿಕೊಡುವ ಕ್ರಿಯೆಗಳಾಗಿರುವುದೇ ಇದಕ್ಕೆ ಒಂದು ನಿದರ್ಶನ. ಇವು ನಮ್ಮ ಅನುಭವಗಳಿಗೆ ಒಂದೊಂದು ರೀತಿಯ ಚೌಕಟ್ಟುಗಳನ್ನು ಒದಗಿಸುತ್ತವೆ. ಅದನ್ನು ನಿರಂತರ ವಿಮರ್ಶೆ ಗೊಳಪಡಿಸುವುದರಿಂದ ಅದರಲ್ಲಿನ ಲೋಪದೋಷಗಳನ್ನು ಸರಿಪಡಿಸಿ ಒಂದು ಹೊಸ ಚಿಂತನೆಗೆ ಆಧಾರವನ್ನು ಒದಗಿಸುವುದು ಸಾಧ್ಯ. ಆದರೆ ಇಂದಿನ ಸಮಾಜ ಅಂತಹ ಹೊಸ ಚಿಂತನೆಗಳನ್ನೇ ಮುಚ್ಚಿಹಾಕುವ

ಕೆಲಸದಲ್ಲಿ ನಿಷ್ಠವಾಗಿದೆ. ಇದಕ್ಕಿರುವ ಹಲವಾರು ಕಾರಣಗಳಲ್ಲಿ ಜಾಗತೀಕರಣವೂ ಒಂದು. ನಾಗಭೂಷಣರ ಅಭಿಪ್ರಾಯಕ್ಕೆ ವ್ಯತಿರಿಕ್ತವಾದ ಒಂದು ಅಂಶವನ್ನು ಹೇಳುವುದಾದರೆ, ಇಂದು ನನಗೆ ನೀನಾಸಮ್ ಯಾವ ಕಾರಣದಿಂದ ಮುಖ್ಯವೆನಿಸುತ್ತಿದೆ ಎಂದರೆ –– ನಾವು, ಇಲ್ಲಿನ ಸ್ಥಳೀಯರು, ನಮ್ಮ ಬದುಕಿನ ಬಗ್ಗೆ ಯೋಚನೆ ಮಾಡುವ ವಿಧಾನಕ್ಕೂ, ನಮ್ಮ ಪ್ರಭುತ್ವ ಯಾವ ರೀತಿಯಿಂದ ನಮ್ಮ ಬದುಕಿನ ಬಗ್ಗೆ ಯೋಚನೆ ಮಾಡಿ ನೀತಿಗಳನ್ನು ನಿರ್ಮಿಸುತ್ತಿದೆಯೋ ಅದಕ್ಕೂ ಇರುವ ವ್ಯತ್ಯಾಸಗಳೇನು? ಒಂದು ವೇಳೆ ವ್ಯತ್ಯಾಸಗಳಿದ್ದರೆ ಅಂತಹ ವ್ಯತ್ಯಾಸಗಳು ಯಾಕಿವೆ? –– ಎನ್ನುವುದರ ಬಗ್ಗೆ ಪರ್ಯಾಲೋಚನೆ ಮಾಡಲು ನೀನಾಸಮ್ ಒಂದು ವೇದಿಕೆಯಾಗಿರುವುದು.

ನೀನಾಸಮ್‌ನಲ್ಲಾಗುತ್ತಿರುವ ಚರ್ಚೆಗಳಲ್ಲಿ ಅನೇಕ ಕ್ಷೇತ್ರಗಳಿಂದ ಬಂದ ವಿದ್ವಾಂಸರು ಅವರವರ ಕ್ಷೇತ್ರಗಳಲ್ಲಾಗುತ್ತಿರುವ ಬದಲಾವಣೆಗಳನ್ನು ತಂದು ಇಲ್ಲಿನ ಚರ್ಚೆಗಳಲ್ಲಿ ನಮ್ಮನ್ನು ಚಿಂತನೆಗೊಳಪಡಿಸುತ್ತಾರೆ. ಇದು ಸ್ವಾಗತಾರ್ಹ ಹೌದು. ಆದರೆ ಇಲ್ಲಿರುವ ಒಂದು ಸಮಸ್ಯೆಯನ್ನು ನಾವು ಗುರುತಿಸಬೇಕು. ಯಾವುದೇ ಹೊಸತರದ ಚಿಂತನೆಗೆ ನಾವು ಹೊರಗಿನಿಂದ (ಈಗಾಗಲೇ ಬೌದ್ಧಿಕ ವಲಯದಲ್ಲಿ ಪ್ರಸಿದ್ಧಿ ಪಡೆದವರು ಹಾಗೂ ಪಾಶ್ಚಾತ್ಯ ಚಿಂತನೆಯ ನಿಕಟ ಪರಿಚಯುವಿರುವವರು) ಬಂದ ವಿದ್ವಾಂಸರನ್ನೇ ಅವಲಂಬಿಸಲು ಪ್ರಾರಂಭಿಸುತ್ತೇವೆ. ಅವರ ಚಿಂತನೆಗಳು ಸ್ಥಳೀಯ ಚಿಂತಕರನ್ನು ಪ್ರಭಾವಿಸುತ್ತಿರಬಹುದು. ಆದರೆ ಇಲ್ಲಿ ನಡೆಯುವ ಚರ್ಚೆಗಳು ಅವರ ಚಿಂತನೆಗಳ ಮೇಲೆ ಪ್ರಭಾವ ಬೀರುತ್ತಿವೆಯೇ ಎನ್ನುವುದು ನಮಗೆ ಗೊತ್ತಿಲ್ಲ. ಅಂದರೆ ಚಿಂತನೆಯು ಹರಿಯುವಿಕೆ ಏಮ್ಮುಖವಾಗಿದೆ. ಈ ಪರಿಸ್ಥಿತಿಯುನ್ನು ಬದಲಾಯಿಸುವ, ಅಂದರೆ, ಪ್ರತಿಷ್ಠಾಪಿತ ಬುದ್ಧಿಜೀವಿಗಳ ಹಾಗೂ ಸ್ಥಳೀಯರ ನಡುವಿನ ಚರ್ಚೆಯಲ್ಲಿ, ಸಂವಾದಗಳಲ್ಲಿ ಕೊಡುಕೊಳ್ಳುವಿಕೆಯನ್ನು ಸಾಧ್ಯ ಮಾಡುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವುದರತ್ತ ನೀನಾಸಮ್ ಗಮನ ಹರಿಸಬೇಕು. ಅವರ ಚಿಂತನೆಗಳನ್ನೇ ಚಿಂತನೆಗೆ ಹಚ್ಚುವ ಚಿಂತಕರನ್ನು ಬೆಳೆಸುವುದರ ಮೂಲಕ ನೀನಾಸಮ್ ಬೆಳೆಯಬೇಕು. ಹಾಗೆ ಚರ್ಚೆಗಳಲ್ಲಿ ಆರೋಗ್ಯಕರವಾದ ಸಂವಾದ ಏರ್ಪಡಬೇಕು.

ಪ್ರಚಲಿತದಲ್ಲಿರುವ ಮುಖ್ಯವಾಹಿನಿ ಚಿಂತನೆಗಳಲ್ಲಿನ ಮೂಲಭೂತ ದೋಷವೆಂದರೆ ಇಲ್ಲಿನವರ, ಅಂದರೆ ಬೌದ್ಧಿಕ ವಲಯದಿಂದಾಚೆ ಇರುವ ಜನರ ಬದುಕು ಹಾಗೂ ಅಂತಹ ಬದುಕಿನ ಬಗ್ಗೆ ಇರುವ ಗ್ರಹಿಕೆಯ ಸ್ವರೂಪವನ್ನು ಗುರುತಿಸಲು ಸಾಧ್ಯವಾಗದೆ ಇರುವುದು. ವಿಪರ್ಯಾಸವೆಂದರೆ ಪರಿಸ್ಥಿತಿ ಹೀಗಿದೆ ಎಂದು ತೋರಿಸುವ ಸಾಮರ್ಥ್ಯ ನಮಗೂ ಇಲ್ಲ. ಇದಕ್ಕೆ ಹಲವಾರು



ಕಾರಣಗಳಿವೆ. ಅವುಗಳಲ್ಲಿ ಒಂದು, ನಮ್ಮ ಚಿಂತನೆಗಳನ್ನು ಮಂಡಿಸಲು ಲಭ್ಯವಿರುವ ಪದಗುಚ್ಛಗಳಲ್ಲಿ (Vocabulary) ನಾವು ಬಂಧಿಯಾಗಿದ್ದೇವೆ. ಆಧುನಿಕ ಶಿಕ್ಷಣ ರೂಪಿಸಿರುವ ವಿಶ್ವವಿದ್ಯಾನಿಲಯಗಳ ಮಟ್ಟಿಗೆ ಈ ಮಾತು ಅಕ್ಷರಶಃ ಸತ್ಯ. ನಾವೂ ಕೂಡ ಆ ಪದಗುಚ್ಛಗಳನ್ನೇ ಬಳಸಿಕೊಂಡು ನಮ್ಮ ಸಿದ್ಧಾಂತಗಳನ್ನು ಮಂಡಿಸಬೇಕಾಗುತ್ತದೆ. ಅದರಿಂದಾಚೆ ಇರುವ ಚಿಂತನೆಗಳು ಒಂದೋ ನಮ್ಮ ಗ್ರಹಿಕೆಗೆ ನಿಲುಕುವುದಿಲ್ಲ, ಇಲ್ಲವೇ ನಮಗೆ ಅವು ನಗಣ್ಯವಾಗಿಬಿಡುತ್ತವೆ. ಇದು ನಮ್ಮ ಕಾಲದ ದೊಡ್ಡ ಸಮಸ್ಯೆ. ನಾವು ರಾಜಕೀಯದ ಬಗ್ಗೆ ಮಾತನಾಡುವಾಗ ತುಂಬಾ ಪದಗಳನ್ನು ನಮಗೆ ಸಮಸ್ಯೆಯೇ ಅಲ್ಲವೇನೋ ಎಂಬಂತೆ ಬಳಸುತ್ತೇವೆ. ಇದಕ್ಕೆ ಉದಾಹರಣೆ ಯಾಗಿ, ಒಂದು ಉದಾರವಾದಿ ಪ್ರಜಾಪ್ರಭುತ್ವ ಖಾಸಗೀ ಜೀವನದಲ್ಲಿ ಪ್ರವೇಶಿಸಬಾರದು ಎಂದೆನ್ನುತ್ತೇವೆಂದುಕೊಳ್ಳೋಣ. ಅದು ಕೇವಲ ಸಾರ್ವಜನಿಕ ಜೀವನಕ್ಕೆ ಸಂಬಂಧಪಟ್ಟದ್ದು ಎಂದು ಭಾವಿಸಿರುತ್ತೇವೆ. ಒಂದು ಕ್ಷಣ ನಮ್ಮನ್ನು ನಾವೇ ಕೇಳಿಕೊಳ್ಳುವುದಾದರೆ, ನಮಗೆ ಎಂದಾದರೂ ಖಾಸಗೀ ಅಥವಾ ಸಾರ್ವಜನಿಕ ಜೀವನ ಎಂಬ ಅನುಭವವಾಗಿದೆಯೇ? ಅಂದರೆ ಈ ಅಭಿಪ್ರಾಯ ಹಳ್ಳಿಗರ ಅನುಭವದಲ್ಲಿ ಬರುತ್ತದೆಯೇ? ಅಥವಾ ಬರಲು ಸಾಧ್ಯವಿದೆಯೇ? ಆದರೆ, ನಮ್ಮ ಮಾತುಗಳು 'ಹಾಗೆ ಸಾಧ್ಯವಿದೆ' ಎನ್ನುವ ರೀತಿಯಲ್ಲಿ ಜರುಗುತ್ತವೆ. ಪ್ರಭುತ್ವವನ್ನು ನಾವು ಆಂಗ್ಲದ **'State'** ಎನ್ನುವ ಶಬ್ದಕ್ಕೆ ಸಂವಾದಿಯಾಗಿ ಬಳಸುತ್ತೇವೆ. ಆದರೆ ನಿಜವಾಗಿ ಯಾವುದನ್ನು ಪ್ರಭುತ್ವ ಎಂದು ಗ್ರಹಿಸುತ್ತಿದ್ದೇವೆ ಎಂಬುದೇ ತಿಳಿದಿರುವುದಿಲ್ಲ. ಹೀಗೆ ನಮ್ಮ ಅನುಭವಕ್ಕಿಂತಲೂ ಅನುಭವವನ್ನು ಮಂಡಿಸಲು ಉಪಯೋಗಿಸುತ್ತಿರುವ ಪರಿಭಾಷೆ ಭಿನ್ನವಾಗಿದೆ. ಇದರಿಂದಾಗಿ ನಾವು ಅನುಭವಿಸಿದ್ದನ್ನು ಯಥಾವತ್ತಾಗಿ ನಿರೂಪಿಸಲು ಸಾಧ್ಯವಾಗುತ್ತಿಲ್ಲ. ಹಾಗಾಗಿ ಅದನ್ನು ಮಂಡಿಸುವಾಗ ಬೇರೆಯದೇ ಪರಿಭಾಷೆಯನ್ನು ಬಳಸುವುದರ ಮೂಲಕ ನಾವೊಬ್ಬ 'ಸ್ವಘೋಷಿತ ವಿದ್ವಾಂಸ' ಎನ್ನುವುದನ್ನು ನಿರೂಪಿಸಿಕೊಳ್ಳದೇ ಹೋದರೆ ನಾವೊಬ್ಬ ವಿದ್ವಾಂಸ ಎಂಬುದೂ ತಿರಸ್ಕೃತವಾಗುತ್ತದೆ.

ಇಂತಹ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯಗಳ ಬೌದ್ಧಿಕ ಚಿಂತನೆಯ ಮಿತಿಯನ್ನು ಮೀರುವ ವೇದಿಕೆಯಾಗಿ ಬೆಳೆಯುವ ಸಾಧ್ಯತೆ ನೀನಾಸಮ್‌ಗಿದೆ. ಹಾಗಾಗಬೇಕಾದರೆ ಬೌದ್ಧಿಕ ಚಿಂತನೆಯನ್ನು ಅಳೆಯುವ ಪ್ರಚಲಿತ ಮಾನದಂಡ ವನ್ನು ಸಕಾರಣದಿಂದ ತಿರಸ್ಕರಿಸುವ ಧಾರ್ಷ್ಟ್ಯವನ್ನು ನೀನಾಸಮ್ ಬೆಳೆಸಿಕೊಳ್ಳ ಬೇಕಾಗುತ್ತದೆ. ಅಂತಹ ಬೌದ್ಧಿಕರನ್ನು ಹುಟ್ಟುಹಾಕುವ ಸಂಸ್ಥೆಯಾಗಿ ನೀನಾಸಮ್ ರೂಪುಗೊಳ್ಳಬೇಕು ಹಾಗೂ ಒಂದು ನಿರ್ದಿಷ್ಟ ಚೌಕಟ್ಟಿನೊಳಗೆ ನಿಲ್ಲುವಂಥ ವರನ್ನು ಮಾತ್ರ ವಿದ್ಯಾಂಸರು ಎನ್ನುವ ರೂಢಿಯನ್ನು ತೊಡೆದುಹಾಕುವಲ್ಲಿ

ನೀನಾಸಮ್ ದೀರ್ಘವಾದ ಯೋಜನೆಯನ್ನಿಟ್ಟುಕೊಳ್ಳಬೇಕು. ಇಲ್ಲದಿದ್ದರೆ ಆ ಚೌಕಟ್ಟಿನೊಳಗೆಯೇ ಮಾತನಾಡಲು ಪ್ರಾರಂಭಿಸುತ್ತಿರುತ್ತೇವೆ. ಇಂದಿನ ದಿನಗಳಲ್ಲಿ 'ರಾಜಕೀಯವಾಗಿ ಸರಿಯಾದ ನಿಲುವು'ಗಳೆಂಬ ಪರಿಭಾಷೆಗೆ ವಿರುದ್ಧವಾಗಿ ಧ್ವನಿಯೆತ್ತುವ ಮತ್ತು ಚರ್ಚೆಯನ್ನು ಮಾಡುವ ವೇದಿಕೆಗಳು ಹುಟ್ಟಿಕೊಳ್ಳಬೇಕಾಗಿದೆ. ಉದಾಹರಣೆಗೆ, ಇಂದು 'ಮೀಸಲಾತಿ'ಯನ್ನು ಬೇರೆ ಬೇರೆ ವಿಧಾನಗಳಲ್ಲಿ ವಿರೋಧಿಸಬಹುದು: ಒಂದು, ಮೊದಲಿದ್ದ ರೀತಿಯಲ್ಲಿ ಅರ್ಹತೆಯ ಆಧಾರದ ಮೇಲೆ ಅವಕಾಶಗಳನ್ನು ಕಲ್ಪಿಸುವುದು ಸರಿಯಾದ ವ್ಯವಸ್ಥೆಯಾಗಿತ್ತು. ಆದರೆ ಮೀಸಲಾತಿಯಿಂದ ಆ ವ್ಯವಸ್ಥೆ ಹಾಳಾಗಿದೆ ಎನ್ನುವ ವಾದ. ಇನ್ನೊಂದು, ಮೀಸಲಾತಿಯ ಕಾರಣಗಳನ್ನು ಗುರುತಿಸಿ, ಅಂದರೆ ಯಾವ ಅನ್ಯಾಯಗಳಿಗಾಗಿ ಮೀಸಲಾತಿ ವ್ಯವಸ್ಥೆ ಹುಟ್ಟಿಕೊಂಡಿತೋ ಅಂತಹ ಅನ್ಯಾಯಗಳನ್ನು ಪರಿಣಾಮಕಾರಿಯಾಗಿ ಎದುರಿಸಲು ಮೀಸಲಾತಿಗಿಂತಲೂ ಪರ್ಯಾಯವಾದ ಇನ್ನೊಂದು ವ್ಯವಸ್ಥೆಯ ಬಗ್ಗೆ ಮಾತನಾಡುವುದೂ ಕೂಡ ಮೀಸಲಾತಿಯ ವಿರುದ್ಧದ ವಾದವಾಗುತ್ತದೆ. ಹಾಗೆ ಇವೆರಡೂ ಮೀಸಲಾತಿಯ ವಿರುದ್ಧವೆಂದಾದಾಗ, ಮೀಸಲಾತಿಯನ್ನು ವಿರೋಧಿಸುವವರೆಲ್ಲರನ್ನೂ ಒಂದೇ ತಕ್ಕಡಿಯಲ್ಲಿಟ್ಟು ಅವರೆಲ್ಲರೂ ದಮನಿತ ವರ್ಗದ ವಿರೋಧಿಗಳು ಎಂದು ಸಾರಾಸಗಟಾಗಿ ತೀರ್ಮಾನಿಸದೆ ಯಾವ ನೆಲೆಯಿಂದ ಮೀಸಲಾತಿಯನ್ನು ವಿಮರ್ಶಿಸಲಾಗುತ್ತಿದೆ ಎಂದು ತಿಳಿದುಕೊಳ್ಳುವ ಸಹನೆಯನ್ನು ನಾವು ಬೆಳೆಸಿಕೊಳ್ಳಬೇಕಾಗಿದೆ. ಆ ತೆರನಾದ ಸಹನೆಯಿಂದ ಚರ್ಚೆಯಲ್ಲಿ ಪಾಲ್ಗೊಳ್ಳಬಹುದಾದ ವೇದಿಕೆಗಳನ್ನು ಹುಟ್ಟುಹಾಕಬೇಕಾದ ಅಗತ್ಯವಿದೆ.

ಇಲ್ಲಿ ನಡೆದ, ಒಂದು ಬಹಳ ಕಟುವಾದ ಚರ್ಚೆಯಲ್ಲಿ, ಸುಬ್ಬಣನವರೇ ಹೇಳಿದ ಒಂದು ಮಾತನ್ನು ಇಲ್ಲಿ ಹೇಳಲಿಚ್ಛಿಸುತ್ತೇನೆ. 'ಇದು ನೀಲಕಂಠೇಶ್ವರ ನಾಟ್ಯ ಸಂಘ. ಇದು ವಿಷವನ್ನೂ ಕುಡಿದು ಅರಗಿಸಿಕೊಳ್ಳುತ್ತದೆ; ಹಾಗೆಯೇ ಅಮೃತವನ್ನೂ ಕುಡಿದು ಅರಗಿಸಿಕೊಳ್ಳುತ್ತದೆ.' ನೀನಾಸಮ್ ಅಂತಹ ಒಂದು ವೇದಿಕೆಯಾಗಬೇಕು. ಪ್ರತಿಯೊಬ್ಬರಿಗೂ ಅವರವರದೇ ಆದ ನಿಲುವು ಇರುತ್ತದೆ ಮತ್ತು ನಾವು ನಮ್ಮ ನಮ್ಮ ನಿಲುವುಗಳಿಗೆ ಬದ್ಧರಾಗಿರಬೇಕಾಗುತ್ತದೆ. ಆದರೆ ನಮ್ಮ ನಿಲುವುಗಳನ್ನು ಯಾವುದೇ ವಿಮರ್ಶೆಗೊಳಪಡಿಸದೆ ಹೇಗಾದರೂ ಮಾಡಿ ಅದಕ್ಕೇ ಬದ್ಧರಾಗಿರಬೇಕೆಂಬ ಹಟ ತೊಟ್ಟರೆ ಅದು ಮುಕ್ತ ಚಿಂತನೆಗೆ ಅವಕಾಶಗಳನ್ನು ಮುಚ್ಚಿಬಿಡುವ ಐಡಿಯಾಲಜಿಯಾಗಿಬಿಡುತ್ತದೆ. ಎಡ ಹಾಗೂ ಬಲಪಂಥೀಯ ಚಿಂತನೆಗಳೆರಡೂ ಐಡಿಯಾಲಜಿಗಳಾಗಿ ಪರಿವರ್ತಿತ ವಾಗಿರುವುದು ಹೀಗೆಯೆ ಎನ್ನುವುದು ನನ್ನ ಅನಿಸಿಕೆ. ಒಂದು ಮುಕ್ತವಾದ ಚರ್ಚೆ ಸಾಧ್ಯವಾಗದೇ ಉಸಿರುಕಟ್ಟುವಂತಹ ವಾತಾವರಣ ನಿರ್ಮಾಣವಾಗುವ



ಪರಿಸ್ಥಿತಿಯನ್ನು ತೊಡೆದುಹಾಕುವ ಸಾಮರ್ಥ್ಯವನ್ನು ಅನೇಕ ಬೌದ್ಧಿಕ ಸಂಸ್ಥೆಗಳು ಕಳೆದುಕೊಂಡಿವೆ. ಆ ದೃಷ್ಟಿಯಿಂದ ಯಾರ ಟೀಕೆಗಳಿಗೂ ಯಾರೇ ಹಚ್ಚುವ ಹಣೆಪಟ್ಟಿಗಳಿಗೂ ತಲೆಕೆಡಿಸಿಕೊಳ್ಳಬೇಡಿ ಎನ್ನುವ ರಾಜಶೇಖರರ ಅಭಿಪ್ರಾಯ ಬಹಳ ಮುಖ್ಯವಾದುದು ಎಂಬುದು ನನ್ನ ಭಾವನೆ. ಆದರೆ ನಮ್ಮ ಗುರಿ ಬಹಳ ಸ್ಪಷ್ಟವಾಗಿರಬೇಕು. ಒಂದು ಸಲಹೆಯ ರೂಪದಲ್ಲಿ ಉದಾಹರಿಸುವು ದಾದರೆ, ಒಂದು ವರ್ಷದ ಸಂಸ್ಕೃತಿ ಶಿಬಿರವನ್ನು ನಾಗಭೂಷಣರಂತಹ ವಿದ್ವಾಂಸರಿಗೆ, ಇನ್ನೊಂದು ವರ್ಷದ ಶಿಬಿರವನ್ನು ನಾಗಭೂಷಣರ ನಿಲುವಿಗೆ ತದ್ವಿರುದ್ಧವಾಗಿರುವವರಿಗೆ ವಹಿಸಿಕೊಟ್ಟುಬಿಡಬೇಕು. ಯಾರ ನೇತೃತ್ವದಲ್ಲಿ ನಡೆದರೂ ಚರ್ಚೆ ಹಾಗೂ ಸಂವಾದಗಳು ಮುಕ್ತ ಹಾಗು ಗಂಭೀರ ಸ್ವರೂಪದವುಗಳಾಗಿರಬೇಕು. ಅದರಲ್ಲಿ ಭಾಗವಹಿಸುವವರೆಲ್ಲರೂ ಹಲವು ವಿಭಿನ್ನ ವಿಚಾರಧಾರೆಗಳಿಗೆ ತೆರೆದುಕೊಳ್ಳುತ್ತಾ ಹೋಗಬೇಕು.

•••





ಅಕ್ಷರ ಪ್ರಕಾಶನದ ಹೊಸ ಪ್ರಕಟಣೆ

**ಫಾಚರ್ ಫೋಚರ್**

ವಿವೇಕ ಶಾನಭಾಗ ಅವರ ಕಥಾಸಂಕಲನ

ಬೆಲೆ – ರೂ. ೬೫

# ಮುದ್ದೆ ರೊಟ್ಟಿ ಕಾಯಿಪಲ್ಲೆ ಹೆಚ್ಚಾಗಲಿ

ರಘುನಂದನ

'...ನಮ್ಮ ಸಖ್ಯದ ಆಖ್ಯಾನ ಕಟುಮಧುರ'
– ಸಖೀಗೀತ, ದ.ರಾ. ಬೇಂದ್ರೆ

ನನ್ನ ಅನ್ನಿಸಿಕೆಗಳನ್ನು ಹಂಚಿಕೊಳ್ಳುವುದಕ್ಕೆ ಮೊದಲು, ಕೆಲವಾತು ಹೇಳಿಕೊಳ್ಳುತ್ತೇನೆ. ಕಳೆದ ಮೂವತ್ತು ವರ್ಷದಿಂದ, ಅಂದರೆ ನಾಟಕ ಆಡುವುದೇ ನನ್ನ ಕಾಯಕವಾದ ದಿನದಿಂದ, ನಾನು ನೀನಾಸಮ್ಮಿನಲ್ಲಿ ಕಳೆದ ದಿನಗಳನ್ನು ಒಗ್ಗೂಡಿಸಿ ಲೆಕ್ಕಹಾಕಿದರೆ, ಹಲವು ವರ್ಷಗಳಷ್ಟು ಕಾಲ ನಿಮ್ಮೆಲ್ಲರ ಆತಿಥ್ಯವನ್ನು ಪಡಕೊಂಡಿದ್ದೇನೆ; ಇಲ್ಲಿನ ಮೂಲೆಮೂಲೆ ತಿರುಗಾಡಿದ್ದೇನೆ; ಇಲ್ಲಿ ಹಲವು ಬಗೆಯ ಕೆಲಸಮಾಡಿದ್ದೇನೆ. ಅದಕ್ಕೆಲ್ಲ ನಾನು ತುಂಬ ಕೃತಜ್ಞನಾಗಿದ್ದೇನೆ. ನೀನಾಸಮ್ಮಿನಲ್ಲಲ್ಲದೇ, ಕನ್ನಡನಾಡಿನ, ಹಾಗೂ ನಮ್ಮ ದೇಶದ, ಹಲವು ಬೇರೆಯೆಡೆ ಕೂಡ, ರಂಗಭೂಮಿಯ ಕೆಲಸವನ್ನು ಮಾಡಿದ್ದೇನೆ. ಅಂಥ ಎಲ್ಲ ಅನುಭವದ ಮೇಲೆ ಹೇಳುತ್ತಿದ್ದೇನೆ: ರಂಗಭೂಮಿಯ ಕೆಲಸವನ್ನು ಶ್ರದ್ಧೆ ಸಂತೋಷಗಳಿಂದ ಮಾಡಲು ನನಗೆ ಇಲ್ಲಿ – ನೀನಾಸಮ್ಮಿನಲ್ಲಿ – ಸಿಕ್ಕಿರುವಷ್ಟು ಅವಕಾಶ, ಒದಗಿಬಂದಿರುವಷ್ಟು ಸಾಧ್ಯತೆ ಬೇರೆಲ್ಲಿಯೂ ಸಿಕ್ಕಿಲ್ಲ, ಒದಗಿಬಂದಿಲ್ಲ. ರಂಗಭೂಮಿಯಲ್ಲಿ ಕೆಲಸಮಾಡುವ ಹೊತ್ತಿನಲ್ಲಿ, ಇಲ್ಲಿನ ಯಾರೂ, ಯಾವತ್ತೂ, ನನ್ನ ಸ್ವಾತಂತ್ರ್ಯವನ್ನು ಪ್ರಶ್ನಿಸಿಲ್ಲ. ಅಷ್ಟೇ ಅಲ್ಲ, ನನಗೆ ತಿಳಿದಮಟ್ಟಿಗೆ, ನನ್ನಂತೆ ಹೊರಗಿನಿಂದ ಬರುವ ಬೇರೆಯ ರಂಗನಿರ್ದೇಶಕರಿಗೆ, ಅಧ್ಯಾಪಕರಿಗೆ ಹಾಗೂ ರಂಗಭೂಮಿಯ ಬೇರೆ ಜನರಿಗೆ ಕೂಡ ಇಲ್ಲಿ ಯಾವುದೇ ರೀತಿಯ ಕೆಟ್ಟ ಅನುಭವ ಆಗಿರುವುದು ನನಗೆ ಗೊತ್ತಿಲ್ಲ.

ನೀನಾಸಮ್ ಅಂದರೆ ಹೀಗೆ ಎಂದು ಮಾತನಾಡುವಷ್ಟು ಈ ಸಂಸ್ಥೆಗೆ ಹತ್ತಿರದವನಾದರೂ ನಾನು, ನಾನು ಇಲ್ಲಿನ ಒಬ್ಬ ಅತಿಥಿ ಮಾತ್ರ ಎನ್ನುವ ಎಚ್ಚರದಲ್ಲಿ ಯಾವಾಗಲೂ ಇರಬಯಸುತ್ತೇನೆ; ಹಾಗೆ ಇರುತ್ತ ಬಂದಿದ್ದೇನೆ ಕೂಡ. ಯಾಕೆಂದರೆ ನನ್ನಂಥವರು ಈ ಸಂಸ್ಥೆಯ ಒಡನಾಟವನ್ನು ಎಷ್ಟೆಲ್ಲ



ಇಟ್ಟುಕೊಳ್ಳುತ್ತ, ಎಷ್ಟೆಲ್ಲ ಇಲ್ಲಿ ಕೆಲಸಮಾಡುತ್ತ ಬಂದಿದ್ದರೂ, ಒಂದು ಮಾತು ದಿಟವಾದ್ದು. ಅನೇಕ ಮಹನೀಯರು ಮತ್ತು ಮಹಿಳೆಯರು ಅರವತ್ತಮೂರು ವರ್ಷಗಳ ಸತತ ಪರಿಶ್ರಮದಿಂದ ಈ ಸಂಸ್ಥೆಯನ್ನು ಕಟ್ಟಿ ಬೆಳೆಸುತ್ತ ಬರುತ್ತಿರುವುದರಿಂದ ನನ್ನಂಥ ಒಬ್ಬ ಬರೆಹಗಾರ ಮತ್ತು ರಂಗನಿರ್ದೇಶಕ ಒಂದಷ್ಟು ಕೆಲಸಮಾಡಲು ಸಾಧ್ಯವಾಗಿದೆ. ಇಂತಹ ಸಂಸ್ಥೆಯನ್ನು ಕಟ್ಟುವಷ್ಟರ ಮಟ್ಟದ ದೊಡ್ಡ ಕೆಲಸ ನನ್ನ ಕೈಮೀರಿದ್ದು. ಹಾಗಾಗಿ, ಈ ಸಂಸ್ಥೆಯನ್ನು ಕುರಿತಂತೆ ಕೆಲವು ಅನ್ನಿಸಿಕೆಗಳನ್ನು ನಿಮ್ಮ ಮುಂದಿಡುವಾಗ ಧರ್ಮಸಂಕಟ ವಾಗುತ್ತಿದೆ; ನೀವು ಹೀಗೆ ಮಾಡಿ, ಹೀಗೆ ಮಾಡಬೇಡಿ ಎನ್ನಲು ನಾನೆಷ್ಟರವ ಅನ್ನಿಸುತ್ತಿದೆ. ಇಷ್ಟು ಹೇಳಿ, ನೀನಾಸಮ್ ಮಾಡುತ್ತಿರುವ ಕೆಲಸವನ್ನು ಕುರಿತು ಮುಖ್ಯವಾಗಿ ರಂಗಭೂಮಿಯಲ್ಲಿನ ಕೆಲಸವನ್ನು ಕುರಿತು – ಕೆಲವು ಮಾತುಗಳನ್ನು ಆಡುತ್ತೇನೆ. ಉಳಿದಂತೆ, ಸಂಸ್ಥೆಯ ಬೇರೆ ಕೆಲಸವನ್ನು ಕುರಿತು ಕೂಡ ಒಂದಷ್ಟು ಅನ್ನಿಸಿಕೆಗಳನ್ನು ನಿಮ್ಮ ಮುಂದಿಡುತ್ತೇನೆ.

ನನಗೆ ತೋರುವಂತೆ, ಇವತ್ತಿನ ನೀನಾಸಮ್ಮಿನ ಒಟ್ಟು ಕೆಲಸ ನಿಂತಿರುವುದು ದಿನದಿನದ ಲವಲವಿಕೆಯ ಎರಡು ಬೊಡ್ಡೆಗಳ ಮೇಲೆ: ಒಂದು, ನೀನಾಸಮ್ ರಂಗಶಿಕ್ಷಣ ಕೇಂದ್ರ; ಎರಡು, ನೀನಾಸಮ್ ತಿರುಗಾಟ. ಈಚಿನ ಸುಮಾರು ಇಪ್ಪತ್ತು ವರ್ಷಗಳಲ್ಲಿ ನೀನಾಸಮ್ ಸಂಸ್ಕೃತಿ ಶಿಬಿರವೂ ಸೇರಿದಂತೆ ನೇರವಾಗಿ ರಂಗಭೂಮಿಯವೇನೂ ಅಲ್ಲದ ಹಲವು ಶಿಬಿರಗಳು, ಗೋಷ್ಠಿಗಳು ಕೂಡ ಇಲ್ಲಿ ನಡೆಯುತ್ತ ಬಂದಿವೆ, ನಿಜ. ಅಲ್ಲದೇ, ಜನಮಾನಸದಲ್ಲಿ 'ಫಿಲ್ಮ್‌ಕೋರ್ಸ್' ಎಂದೇ ಪ್ರಸಿದ್ಧವಾದ ಚಲನಚಿತ್ರ ರಸಗ್ರಹಣ ಶಿಬಿರಗಳು ಎಪ್ಪತ್ತೊಂಭತ್ತರಲ್ಲಿ ಶುರುವಾಗಿ ಎಂಭತ್ತರ ದಶಕದ ಉದ್ದಕ್ಕೂ ಇಲ್ಲಿ ನಡೆದಿವೆ, ನಿಜ. ಆದರೆ, ನೀನಾಸಮ್ಮಿನ ದಿನದಿನದ ಚಟುವಟಿಕೆಗಳ ತಾಣಗಳೆಂದರೆ ನೀನಾಸಮ್ ರಂಗ ಶಿಕ್ಷಣ ಕೇಂದ್ರ ಹಾಗೂ ನೀನಾಸಮ್ ತಿರುಗಾಟಗಳೇಯ. ನೀನಾಸಮ್ ಸಂಸ್ಥೆಯು ನಾಡಿನ ಮೂಲೆಮೂಲೆಯನ್ನು ತಲುಪಿ, ಕರ್ನಾಟಕದ ಹೊರಗೆಯೂ ತುಂಬ ಗೌರವವನ್ನು ಸಂಪಾದಿಸಿರುವುದು ಅದರ ಈ ಎರಡು ಬೊಡ್ಡೆಗಳ ಕೆಲಸದ ಮೂಲಕವೇ. ನೀನಾಸಮ್ ಸಂಸ್ಕೃತಿ ಶಿಬಿರಕ್ಕೆ ಜನ ದೇಶವಿದೇಶಗಳಿಂದ ಬಂದು ಪಾಲ್ಗೊಳ್ಳುತ್ತಾರೆ ಮತ್ತು ಅದರಿಂದಾಗಿ ಇವತ್ತು ಜಗತ್ತಿನ ಹಲವು ಜನರು ಈ ಸಂಸ್ಥೆಯ ಹೆಸರನ್ನು ಗೌರವದಿಂದ, ಮೆಚ್ಚಿಕೆಯಿಂದ ನೆನೆಯುತ್ತಾರೆ ಅನ್ನುವುದೆಲ್ಲ ನಿಜವೇ. ಆದರೆ ಈ ಸಂಸ್ಥೆಯು ಕರ್ನಾಟಕದ ಸಂಸ್ಕೃತಿಯನ್ನು ನಿರ್ಣಾಯಕವಾಗಿ ಬಿಂಬಿಸುತ್ತಿರುವುದು, ಶೋಧಿಸುತ್ತಿರುವುದು, ಮತ್ತು ಪ್ರಭಾವಿಸುತ್ತಿರುವುದು ತನ್ನ ರಂಗಶಿಕ್ಷಣ ಕೇಂದ್ರ ಮತ್ತು ತಿರುಗಾಟಗಳ ಮೂಲಕವೇನೆ. ಒಂದು ವೇಳೆ, ನೀನಾಸಮ್ ಸಂಸ್ಕೃತಿಶಿಬಿರವು ಇನ್ನುಮೇಲೆ

ಇರುವುದಿಲ್ಲ, ನಡೆಯುವುದಿಲ್ಲ ಎಂದಾದರೆ, ಜನ ‘ಛೇ, ಶಿಬಿರ ಇದ್ದಿದ್ದರೆ ಚೆನ್ನಾಗಿತ್ತು’ ಅನ್ನಬಹುದು; ಆದರೆ, ಅದೇ, ನೀನಾಸಮ್ ರಂಗಶಿಕ್ಷಣ ಕೇಂದ್ರವು ಇನ್ನುಮೇಲೆ ಇರುವುದಿಲ್ಲವೆಂದೇನಾದರೂ ಆದರೆ, ಅಥವಾ ನೀನಾಸಮ್ ತಿರುಗಾಟವು ಇರುವುದಿಲ್ಲ ಎಂದಾದರೆ, ಜನರು ‘ಅಯ್ಯೋ, ಆಗಬಾರದ್ದು ಆಗಿಹೋಯಿತು’ ಅನ್ನುತ್ತ ತಳಮಳಿಸುತ್ತಾರೆ. ಅದಕ್ಕೇ, ನಾನು ನೀನಾಸಮ್ಮಿನ ಈ ಎರಡು ಬೊಡ್ಡೆಗಳ ಮೇಲೆಯೇ ಹೆಚ್ಚಿಗೆ ಮಾತನಾಡುತ್ತೇನೆ.

••• ••• •••

ನೀನಾಸಮ್ ತಿರುಗಾಟ ಶುರುವಾದ್ದು 1985ರಲ್ಲಿಯಷ್ಟೆ. ಆಗ ಅದು ಮಾಡತೊಡಗಿದ ಕೆಲಸವು ಅದುವರೆಗೆ ಇಡಿಯ ಭಾರತದಲ್ಲಿಯೇ ಯಾರೂ ಮಾಡದೇಯಿದ್ದ, ಹೊಚ್ಚಹೊಸ ಬಗೆಯ, ಕೆಲಸವಾಗಿತ್ತು. ಈ ಮಾತಿಗೆ ಸ್ವಲ್ಪಮಟ್ಟಿಗಿನೊಂದು ಅಪವಾದವೆಂದರೆ, ಬಿ. ವಿ. ಕಾರಂತರು ಆಹೊತ್ತಿಗೆ ಭೋಪಾಲದಲ್ಲಿ ರೂಪಿಸಿದ್ದ ರಂಗಮಂಡಲದ ಕೆಲಸ ಮಾತ್ರ ಅನ್ನಬಹುದು. ಆದರೆ ಆ ರಂಗಮಂಡಲವು (ಕಾರಂತರ ಬೇರೆ ಅಂಥ ಕೆಲಸಗಳಂತೆ) ಆರಂಭಶೂರತ್ವವನ್ನು ಮೆರೆದು, ಬಹಳ ಬೇಗ ನಾಶವಾಯಿತು ಎಂದು ಹೇಳಿಕೊಳ್ಳುವಾಗ ಸಂಕಟವಾಗುತ್ತದೆ. ಆ ಮಾತು ಒತ್ತಟ್ಟಿಗಿರಲಿ. ಒಟ್ಟಿನಲ್ಲಿ, ಇವತ್ತು ನಾವು ಯಾವುದನ್ನು ಕನ್ನಡದ ಆಧುನಿಕ ರಂಗಭೂಮಿ ಎಂದು ಕರೆಯುತ್ತೇವೆಯೋ ಆ ರಂಗಭೂಮಿಗೆ ವೃತ್ತಿಪರತೆಯನ್ನೂ ವೃತ್ತಿನಿರತತೆಯನ್ನೂ ಮೊದಲು ನೀಡಿದ್ದು ನೀನಾಸಮ್ ತಿರುಗಾಟವೇ ಹೌದು. ದೇಶದ ಆಧುನಿಕ ರಂಗಭೂಮಿಯ ಮಟ್ಟಿಗೆ, ನೀನಾಸಮ್ ತಿರುಗಾಟವು ಹುಟ್ಟುವ ಮುಂಚಿನಿಂದಲೇ, ರಾಷ್ಟ್ರೀಯ ನಾಟ್ಯವಿದ್ಯಾಲಯದ (ರಾನಾವಿಯ) ರೆಪರ್ಟರಿಯಂಥ ಸಂಸ್ಥೆಯೊಂದಿತ್ತು, ನಿಜ. ಆದರೆ, ಕನ್ನಡನಾಡಿನ ಜನರೊಂದಿಗೆ ಮತ್ತು ಅವರ ಜೀವನದೊಂದಿಗೆ ನೀನಾಸಮ್ ತಿರುಗಾಟಕ್ಕೆ ಇರುತ್ತಬಂದಿರುವ ಸತತ ಸಂಬಂಧವು ಈ ದೇಶದ ಜನ ಮತ್ತು ಅವರ ಜೀವನದೊಂದಿಗೆ ರಾಷ್ಟ್ರೀಯ ನಾಟಕಶಾಲೆಯ ಆ ರೆಪರ್ಟರಿಗೆ ಎಂದೂ ಇರಲಿಲ್ಲ; ನಮ್ಮ ಜನ ಮತ್ತು ಅವರ ಜೀವನಕ್ಕೆ ನೀನಾಸಮ್ ತಿರುಗಾಟವು ಪ್ರಸ್ತುತವಾಗುತ್ತ ಬಂದಿರುವಂತೆ, ರಾನಾವಿಯ ಆ ರೆಪರ್ಟರಿಯು ಎಂದೂ ಪ್ರಸ್ತುತವಾಗಿಲ್ಲ. ಆ ರೆಪರ್ಟರಿಗೆ ಕೇಂದ್ರ ಸರಕಾರದ ತುಂಬ ದೊಡ್ಡ ಅನುದಾನವಿದೆ ಮತ್ತು ಬೇರೆ ಯಾವ ನಾಟಕ ಸಂಸ್ಥೆಗೂ ಸಿಕ್ಕದ ಹಲವು ಬಹುದೊಡ್ಡ ಸವಲತ್ತುಗಳಿವೆಯಾದರೂ ಆ ಸಂಸ್ಥೆಯು ಹೆಚ್ಚುಕಡಿಮೆ ಪೂರ್ತಿಯಾಗಿ ದೆಹಲಿಗೆ



ಮಾತ್ರ ಕಟ್ಟುಬಿದ್ದ ಸಂಸ್ಥೆಯಾಗಿದೆ. ಆದರೆ, ಕನ್ನಡದ ನೀನಾಸಮ್ ತಿರುಗಾಟದಿಂದಾಗಿ ಶೇಕ್ಸ್ಪಿಯರ್, ಜಿ. ಬಿ. ಜೋಷಿ, ಲಂಕೇಶ್, ದೇವನೂರ ಮಹಾದೇವ, ಕುವೆಂಪು, ಬೇಂದ್ರೆ, ಡೇರಿಯೋ ಫೋ, ಭಾಸ, ಕಾಳಿದಾಸ, ಶೂದ್ರಕ, ಪುತಿನ, ಗೊಗೋಲ್, ಚೆಕೊವ್ಫ್, ಯು. ಆರ್. ಅನಂತಮೂರ್ತಿ, ರವೀಂದ್ರನಾಥ ಠಾಕೂರ್, ಮೊಲಿಯೇರ್, ಕನ್ಹಾಯ್‌ಲಾಲ್, ಲೋರ್ಕ ಮುಂತಾದ ಅನೇಕಾನೇಕ ದೊಡ್ಡವರ ನಾಟಕಗಳು ಮತ್ತು ಕಾಣ್ಕೆಗಳು ಕನ್ನಡನಾಡಿನ ಮೂಲೆಮೂಲೆಯನ್ನು ತಲುಪಿವೆ.

ಮೊದಲ ಹದಿನೈದು ಹದಿನಾರು ವರ್ಷಗಳ ಕಾಲ, ಆಧುನಿಕ ಕನ್ನಡ ರಂಗಭೂಮಿಯಲ್ಲಿ ಆವರೆಗೆ ಕಾಣಿಸಿಕೊಳ್ಳದಿದ್ದ, ಮತ್ತು ಆಹೊತ್ತಿನ ಆಧುನಿಕ ಕನ್ನಡ ರಂಗಭೂಮಿಯಲ್ಲಿ ಬೇರೆಲ್ಲಿಯೂ ಕಂಡುಬಾರದಿದ್ದ, ವೃತ್ತಿಪರ ಪ್ರತಿಭೆ, ಪರಿಶ್ರಮ ಮತ್ತು ಚಾಕಚಕ್ಯತೆಗಳು ನೀನಾಸಮ್ ತಿರುಗಾಟದ ಸರಿಸುಮಾರು ಎಲ್ಲ ನಾಟಕ ಪ್ರಯೋಗಗಳಲ್ಲಿಯೂ ಇದ್ದುವು. ಇದು ಹೇಗಾಯಿತೆನ್ನುವುದು ನಿಚ್ಚಳವಾಗಿಯೇ ಇದೆ. ನೀನಾಸಮ್ ರಂಗಶಿಕ್ಷಣ ಕೇಂದ್ರದಲ್ಲಿ ಅಭ್ಯಾಸ ಮಾಡಿದವರು ಕನಿಷ್ಠ ಒಂದೆರಡು ವರ್ಷವಾದರೂ ರಂಗಭೂಮಿಯ ವೃತ್ತಿಯನ್ನು ಮೈಗೂಡಿಸಿಕೊಳ್ಳಲು ಅವಕಾಶ ದೊರೆಯುವಂತಾಗಬೇಕೆನ್ನುವುದು ಕೆ.ವಿ. ಸುಬ್ಬಣ್ಣನವರ ಮತ್ತು ನೀನಾಸಮ್ಮಿನ ಉಳಿದೆಲ್ಲ ಸದಸ್ಯರ ಆಶಯವಾಗಿತ್ತು. ನೀನಾಸಮ್ ತಿರುಗಾಟ ಮೈದಾಳಿ, ಪೂರೈಸತೊಡಗಿದ್ದು ಆವೊಂದು ಮಹದಾಶಯವನ್ನು.

ತೊಂದರೆ ಕಾಣಿಸಿಕೊಳ್ಳತೊಡಗಿದ್ದು ಹೊಸಶತಮಾನದ ತಿರುವಿನಲ್ಲಿ. ಇವತ್ತು ನಾವು ಖಾಸಗೀಕರಣ, ಉದಾರೀಕರಣ ಹಾಗೂ ಜಾಗತೀಕರಣ (ಖಾಉಜಾ) ಎಂದು ಕರೆಯುತ್ತೇವೆಯಲ್ಲ, ಅಂಥದು ಯಾವುದೂ ತಿರುಗಾಟವು ಶುರುವಾದ ಎಂಭತ್ತರ ದಶಕದ ಮಧ್ಯಭಾಗದಲ್ಲಿ ಬಹಳವಾಗಿ ಇರಲಿಲ್ಲ. ಆ ವೇಳೆಯಲ್ಲಿ, ನಮ್ಮ ದೇಶದಲ್ಲಿನ ಟಿವಿ ಮಾಧ್ಯಮವು ಇನ್ನೂ ಅಂಬೆಗಾಲಿಡುತ್ತಿತ್ತು; ಗಣಕಯಂತ್ರಗಳು, ಮೋಬೈಲುಫೋನುಗಳು, ಸಿ.ಡಿ. ಮತ್ತು ಡಿ.ವಿ.ಡಿಗಳು, ಖಾಸಗೀ ಎಫ್‌ಎಮ್ ರೇಡಿಯೋ ಕೇಂದ್ರಗಳು ಇರಲಿಲ್ಲ; ವಿಡಿಯೋ ಕ್ಯಾಸೆಟ್ಟಿನ ಸಂಸ್ಕೃತಿ ಕೂಡ ಆಗ ತೀರಹೊಸದೇ ಆಗಿದ್ದು, ಎಲ್ಲ ಕಡೆಯೇನೂ ಹರಡಿಕೊಂಡಿರಲಿಲ್ಲ. ಆದರೆ, ತೊಂಭತ್ತರ ದಶಕದಲ್ಲಿ ಖಾಉಜಾಗಳು ಬಂದಮೇಲೆ, ಹಲವು ಬಗೆಯ ಈ ತಾಂತ್ರಿಕತೆಗಳ ಪ್ರಮಾಣವು ಹತ್ತಾರು, ನೂರಾರು ಪಟ್ಟು ಹೆಚ್ಚುತ್ತ ಬಂದಿದೆಯಷ್ಟೇ ಅಲ್ಲ ಅವುಗಳ ಮೂಲಕ ಪ್ರಸಾರಗೊಳ್ಳುವ ಕಾರ್ಯಕ್ರಮಗಳ ಹಿಂದೆ ಬರಿಯ ಆರ್ಥಿಕಲಾಭದ ದೃಷ್ಟಿ ಮಾತ್ರ ಇದ್ದು ಬೇರೂರಿಬಿಟ್ಟಿದೆ. ತೀವ್ರವಾದ, ಆದರೆ ಕ್ಷಣಿಕವೂ ಆದ,

ಉದ್ರೇಕವನ್ನು ಉಂಟುಮಾಡಿ, ಆಮೂಲಕ ಸಂವಹನೆ ಮತ್ತು ಮನೋರಂಜನೆಯ ದೊಡ್ಡಭ್ರಾಂತಿಯನ್ನು ಹುಟ್ಟುಹಾಕಿ ಜನರ ಮನಸ್ಸನ್ನು ಸೂರೆಗೊಳ್ಳುತ್ತಿರುವ ಈ ಹಲಬಗೆಯ ತಾಂತ್ರಿಕತೆಗಳು ಮತ್ತು ಕಾರ್ಯಕ್ರಮಗಳು ಅವರ ಏಕಾಗ್ರತೆಯನ್ನು ಮೊಂಡಾಗಿಸಿವೆ; ಆಳವಿಲ್ಲದ, ದಿಟವಲ್ಲದ ಗ್ರಹಿಕೆ ಮತ್ತು ಸಂವೇದನೆಗೆ ಎಡೆಮಾಡಿಕೊಡುತ್ತಿವೆ. ಇದು ನಾವೆಲ್ಲ ಬಲ್ಲ ಸಂಗತಿಯೇ ಆದರೂ ಇದನ್ನು ಕುರಿತು ನಾಲ್ಕು ಮಾತಾಡುತ್ತೇನೆ. ಯಾಕೆಂದರೆ, ತಿರುಗಾಟಕ್ಕೆ (ಮತ್ತು ಒಟ್ಟಂದದಲ್ಲಿ ರಂಗಭೂಮಿಗೆ) ಒದಗಿಬಂದಿರುವ ಬಿಕ್ಕಟ್ಟನ್ನು ನಾವು ಕಾಣಬೇಕಾಗಿರುವುದು ಲೋಕವು ಬದಲಾಗಿರುವುದರ ಈ ಹಿನ್ನೆಲೆಯಲ್ಲಿ.

ಎಂಭತ್ತರ ದಶಕದಲ್ಲಿ ಒಂದು ಚಲನಚಿತ್ರವನ್ನು ನಿರ್ಮಿಸಲು, ಅದು ವ್ಯಾಪಾರೀ ಚಲನಚಿತ್ರವೇ ಆಗಿದ್ದರೂ, ಸುಮಾರು ಮೂವತ್ತರಿಂದ ಐವತ್ತು ಲಕ್ಷ ರೂಪಾಯಿಗಳು ಸಾಕಾಗುತ್ತಿದ್ದುವು. ಆದರೆ ಇವತ್ತು ಕನ್ನಡದ ಅತಿಸಾಧಾರಣ ವ್ಯಾಪಾರೀ ಚಲನಚಿತ್ರವೊಂದರ ನಿರ್ಮಾಣಕ್ಕೆ ಕೂಡ, ಏನಿಲ್ಲವೆಂದರೂ, ಎರಡು–ಮೂರು ಕೋಟಿ ರೂಪಾಯಿಗಳೇ ಬೇಕಾಗುತ್ತವೆ. ಹಿಂದಿ ಮತ್ತು ತಮಿಳು ಮುಂತಾದ ಭಾಷೆಗಳಲ್ಲಿ ಈ ಮೊತ್ತ ಇವತ್ತು ಇಪ್ಪತ್ತು, ಮೂವತ್ತು ಕೋಟಿಗಳಿಂದ ಮೊದಲುಗೊಂಡು, ನೂರಿಪ್ಪತ್ತು ಕೋಟಿ ರೂಪಾಯಿಗಳನ್ನು ದಾಟುತ್ತಿದೆ. ಈ ಮೊತ್ತವು ನಟನಟಿಯರ ಸಂಭಾವನೆಯನ್ನಲ್ಲದೆ, ಆಯಾ ಸಿನೆಮಾದಲ್ಲಿ ಕಂಡುಬರುವ ಥರಾವರಿ ಎಫೆಕ್ಟ್‌ಗಳಿಗೆ ತಗುಲುವ ಖರ್ಚನ್ನೂ ಒಳಗೊಂಡಿದೆ. ನಮ್ಮ ಸಿನೆಮಾಗಳು ತಮ್ಮ ಈ ಪರಿಯ ಖರ್ಚು ಮತ್ತು ಭ್ರಮಾಸೃಷ್ಟಿಯ ತಂತ್ರಗಾರಿಕೆಯಿಂದಾಗಿ ಜನರ ಕಣ್ಮನಗಳನ್ನು ಸಂಪೂರ್ಣ ಸೆಳೆದುಕೊಂಡು, ಸೂರೆಗೊಳ್ಳುತ್ತಿವೆ. ಮೇಲಾಗಿ, ಇಂಥ ಸಿನೆಮಾಗಳು, ಮತ್ತು ಇತರ ಬಗೆಯ ಮನೋರಂಜನೆಯ ಸರಕುಗಳು, ಇವತ್ತು ಎಲ್ಲ ಕಡೆಯೂ ಅಂಗಡಿಗಳಲ್ಲಿ, ಬೀದಿಗಳಲ್ಲಿ, ಅಂತರಜಾಲದಲ್ಲಿ – ಯಥೇಚ್ಛವಾಗಿ ಸಿಕ್ಕುತ್ತವೆ, ಮತ್ತು ಅಗ್ಗದ ಬೆಲೆಗೆ ಸಿಕ್ಕುತ್ತವೆ: ಕಾನೂನುಬದ್ಧವಾಗಿಯೇ ಮಾರಾಟ ವಾಗುವ 'ಅಸಲೀ' ಮಾಲಾಗಿ, ಮತ್ತು ಪೈರೇಟ್ ಆಗಿರುವ 'ನಕಲಿ' ಮಾಲಾಗಿ. ಭ್ರಮಾತ್ಮಕ ಮನೋರಂಜನೆಯ ಮಾಲು ಸಲೀಸಾಗಿ ಸಿಕ್ಕುವಂತಾದಾಗ, ಪ್ರೇಕ್ಷಕರು ಬೇಕಾದಲ್ಲಿ, ಬೇಕಾದಾಗ ಅದನ್ನು ನೋಡುತ್ತ ಭ್ರಮೆಯ ಸಂತೋಷದಲ್ಲಿ, ಸಂತೋಷದ ಭ್ರಮೆಯಲ್ಲಿ ಸದಾ ತೇಲಾಡುತ್ತಿರಬಹುದು. ಇದು ನಮ್ಮೆಲ್ಲರಿಗೆ ಗೊತ್ತಿರುವ ವಿಷಯ.

ಇಂಥ ಪರಿಸ್ಥಿತಿಯಲ್ಲಿ, ಸಿನೆಮಾವೊಂದು ತೋರಿಸುವಂಥ ಎಫೆಕ್ಟುಗಳನ್ನೇ ರಂಗಭೂಮಿಯೂ ತೋರಿಸಬೇಕೆಂದು ಹಲಕೆಲವು ಪ್ರೇಕ್ಷಕರು ಬಯಸಬಹುದು. ಆದರೆ, ಆ ನಿಟ್ಟಿನಲ್ಲಿ ರಂಗಭೂಮಿಯು ತಾನೇನು ಮಾಡಿದರೂ, ಎಷ್ಟು ಮಾಡಿದರೂ ಒಂದು ಸಿನೆಮಾ ಬೀರುವ ಪರಿಣಾಮವನ್ನು ಸರಿಗಟ್ಟುವುದು



ಆಗದ ಕೆಲಸ ಮಾತ್ರವಲ್ಲ ಅಂಥ ಆ ಬಯಕೆಯನ್ನು ತಣಿಸಲು ಹೊರಟರೆ, ಅದು – ರಂಗಭೂಮಿಯು – ತನ್ನ ಅಂತಸ್ಸತ್ತ್ವವನ್ನೇ ಕಳೆದುಕೊಂಡುಬಿಡುತ್ತದೆ. ನಿಜವಾದ ರಂಗಭೂಮಿ ಅದನ್ನೆಲ್ಲ ಮಾಡಬೇಕಾಗಿಯೇ ಇಲ್ಲ. ಸಿನೆಮಾದ ಯಥಾರ್ಥ–ವಾಸ್ತವತಾವಾದೀ ಎಫೆಕ್ಟುಗಳನ್ನು ಅನುಕರಿಸಹೊರಟು ನಮ್ಮ ಕಂಪನಿರಂಗಭೂಮಿಯು ನಾಶವಾದುದನ್ನು ನಾವು ಮರೆಯಬಾರದು.

ಇನ್ನು, ಹಲಕೆಲವು ಪ್ರೇಕ್ಷಕರು ಮತ್ತು ಸಾಮಾಜಿಕರು ಯಾವ ಸಿನೆಮಾ ನೋಡಿದರೂ ಸಿಕ್ಕದ, ನಾಟಕವೊಂದನ್ನು ನೋಡಿದಾಗ ಮಾತ್ರ ಆಗುವ, ಅನುಭವವನ್ನು ಅರಸಿ ನಮ್ಮತ್ತ ಬರಬಹುದು; ಹಾಗೆ ಬರುತ್ತಾರೆ ಕೂಡ. ಅಂಥವರ ನಿರೀಕ್ಷೆಯಿದೆಯಲ್ಲ, ಅದೀಗ ಸರಿಯಾದ್ದು. ನಾಟಕದ ಜನರಾದ ನಾವು ಅಂಥ ಪ್ರೇಕ್ಷಕರಿಗೆ ಉಣಬಡಿಸಬೇಕಾದ್ದು ಅವರು ಅರಸುತ್ತಿರುವ, ನಾವು ಸ್ವತಃ ಅರಸಿ, ಗಳಿಸಿ, ಅರಗಿಸಿಕೊಂಡ, ರಂಗಭೂಮಿಯ ಆ ಅನನ್ಯ ಅಂತಸ್ಸತ್ತ್ವವುಳ್ಳ ಆಟಗಳನ್ನು.

ರಂಗಭೂಮಿಯ ಆ ಸತ್ತ್ವವೆಂದರೆ, ಜೀವಂತವಾಗಿ, ಪ್ರತ್ಯಕ್ಷವಾಗಿ ಪ್ರೇಕ್ಷಕರ ಎದುರು ನಟಿಸುವ ನಟನಟಿಯರ ಎಡೆಬಿಡದೆಚ್ಚರದ ಕಲಾವಂತಿಕೆಯೇ, ಆ ಕಲಾವಂತಿಕೆಯ ಕುಂದಿಲ್ಲದ ಗುಣಮಟ್ಟವೇ. ಅಂಥ ಅಂತಸ್ಸತ್ತ್ವವಿದ್ದಲ್ಲಿ, ಸಿನೆಮಾ ಮುಂತಾದ್ದರಿಂದ ಭ್ರಮಿತರಾಗಿರುವ ಪ್ರೇಕ್ಷಕರೂ ನಾಟಕವೆಂದರೆ ತಲೆದೂಗಿ, ರಂಗಭೂಮಿಗೆ ಒಲಿಯುತ್ತಾರೆ. ಇದಕ್ಕೆ ಸಂಶಯ ಬೇಡ. ಈಗ, ತಿರುಗಾಟವು ಈಚಿನ ಒಂದೂವರೆ ದಶಕದಲ್ಲಿ ಬಿಕ್ಕಟ್ಟು ಎದುರಿಸುತ್ತಿರುವುದು ಆ ಅಂಥ ಅಂತಸ್ಸತ್ತ್ವ ಮತ್ತು ಗುಣಮಟ್ಟವನ್ನು ಕಾಯ್ದುಕೊಳ್ಳುವುದರಲ್ಲಿ ಮತ್ತು ಹೆಚ್ಚಿಸಿಕೊಳ್ಳುವುದರಲ್ಲಿ. ಹಾಗೆ ಯಾಕಾಗುತ್ತಿದೆ ಅನ್ನುವುದು ನನ್ನನ್ನು ತುಂಬ ಕಾಡುತ್ತಲೇ ಬಂದಿದ್ದು, ಅದಕ್ಕೆ ಉತ್ತರ ಕಂಡುಕೊಳ್ಳುವ ಪ್ರಯತ್ನ ಮಾಡುತ್ತೇನೆ.

ಆಗಲೇ ಹೇಳಿದ ಅಂತಸ್ಸತ್ತ್ವವು ನಾಟಕದ ಜನರಾದ ನಮ್ಮೊಳಗೆ ಉಕ್ಕುತ್ತಿರಬೇಕು, ಬತ್ತದೆಯೇ ಇರಬೇಕು ಎಂದಾದರೆ, ನಿರಂತರವಾದ ಕಲಾತ್ಮಕ ಪರಿಶ್ರಮ ಬೇಕು; ಆ ಪರಿಶ್ರಮಕ್ಕೆ ತಕ್ಕ ವಿರಾಮ ಬೇಕು; ತಕ್ಕಮಟ್ಟಿಗೆ ಒಳ್ಳೆಯದಾದ ಆಹಾರ ಬೇಕು; ಓದು, ಚಿಂತನೆ ಬೇಕು; ಮತ್ತು ವಯಸ್ಸು, ರಂಗಾನುಭವ ಹಾಗೂ ಜೀವನಾನುಭವಗಳಿಂದ ಮಾತ್ರ ಬರುವ ಅರಿವು, ಮಾಗುವಿಕೆಗಳು ಬೇಕು. ಇದನ್ನು ನಾವೆಲ್ಲ ಬಲ್ಲೆವಷ್ಟೆ. ಇದನ್ನು ಮನಸ್ಸಿನಲ್ಲಿಟ್ಟುಕೊಂಡು ಇಂದಿನ ತಿರುಗಾಟದ ಸ್ಥಿತಿಗತಿಯನ್ನು ನೋಡೋಣ.

ತಿರುಗಾಟದ ನಟನಟಿಯರೆಲ್ಲ ನೀನಾಸಮ್ ರಂಗಶಿಕ್ಷಣ ಕೇಂದ್ರದ ಪದವೀಧರರೇ ಆಗಿರುತ್ತಾರೆ ತಾನೆ? ಅವರ ವಯಸ್ಸು, ಸರಾಸರಿ ಇಪ್ಪತ್ತು, ಚಿಕ್ಕದು; ಜೀವನಾನುಭವ, ರಂಗಾನುಭವ ಚಿಕ್ಕದು. ಅವರಲ್ಲಿ, ಹೆಚ್ಚಿನವರು,

ತಾವು ರಂಗಶಿಕ್ಷಣ ಕೇಂದ್ರಕ್ಕೆ ಸೇರುವವೇಳೆಗೆ ಹತ್ತನೆಯ ತರಗತಿ ಇಲ್ಲವೇ ಪಿಯುಸಿಯವರೆಗೆ ಮಾತ್ರ ಓದಿರುತ್ತಾರೆ; ಕೇಂದ್ರದಲ್ಲಿ ಒಂದು ವರ್ಷದ ಓದು ಮುಗಿಸಿದ ಕೂಡಲೇ ತಿರುಗಾಟಕ್ಕೆ ಸೇರುತ್ತಾರೆ. ತಿರುಗಾಟದಲ್ಲಿ ಅವರು ಮಾಡಬೇಕಾದ ಕೆಲಸವು, ಬೇರೆ ಯಾವ ಉದ್ಯೋಗದಲ್ಲಿನ ಕೆಲಸಕ್ಕೆ ಹೋಲಿಸಿನೋಡಿದರೂ, ತುಂಬ ಜಾಸ್ತಿ. ಇಂಥ ತಂಡದಲ್ಲಿ, ನಟನಟಿಯರು ಕಲಾವಿದರಾಗಿರಬೇಕು; ಅವರು ಹಾಡಬೇಕು, ಕುಣಿಯಬೇಕು, ನಟಿಸಬೇಕು; ಬುದ್ಧಿಜೀವಿಗಳಾಗಿರಬೇಕು; ತಾವು ವಹಿಸುತ್ತಿರುವ ಪಾತ್ರಗಳು, ಆಡುತ್ತಿರುವ ನಾಟಕಗಳು, ಹಾಗೂ ಸುತ್ತಲಿನ ಸಮಾಜದ ಜೊತೆಗಿನ, ಮತ್ತು ಒಟ್ಟು ರಂಗಭೂಮಿಯ ಜೊತೆಗಿನ, ತಮ್ಮ ಸಂಬಂಧವನ್ನು ಆಳವಾಗಿ ಪರಿಭಾವಿಸುತ್ತಿರಬೇಕು; ರಂಗತಂತ್ರಜ್ಞರೂ ಬೆಳಕಿನ ತಂತ್ರಜ್ಞರೂ ಆಗಿರಬೇಕು; ಇವೆಲ್ಲದರ ಜೊತೆಗೆ ಕೂಲಿಕೆಲಸವನ್ನೂ ಮಾಡಬೇಕು. ಪ್ರತಿದಿನವೂ ಅವರೇ ಲೋಡುಗಟ್ಟಳೆ ರಂಗಪರಿಕರಗಳನ್ನು, ಬೆಳಕಿನ ಸಾಮಾನನ್ನು, ರಂಗಸಜ್ಜಿಕೆಗೆ ಬೇಕಾಗುವ ಸಾಮಗ್ರಿಗಳನ್ನು ಬಸ್ಸಿನಿಂದ ಇಳಿಸಿಕೊಳ್ಳಬೇಕು. ಎಷ್ಟೋ ಬಾರಿ, ಆಟವು ಬಯಲುಜಾಗದಲ್ಲಿರುತ್ತದೆಯಾದ್ದರಿಂದ, ಇಡೀ ದಿನ ಬಿರುಬಿಸಿಲಿನಲ್ಲಿ ರಂಗವನ್ನು ಸಜ್ಜುಗೊಳಿಸಿ, ರಂಗಸ್ಥಳಕ್ಕೆ ವಿದ್ಯುದ್ದೀಪಗಳ ವ್ಯವಸ್ಥೆಮಾಡಿ, ಸಂಜೆಯ ಹೊತ್ತಿಗೆ ರಂಗಪ್ರವೇಶಮಾಡಿ, ನಾಟಕವಾಡಬೇಕು. ಹಲವು ಕಡೆ, ರಂಗಮಂದಿರ ಮತ್ತು ಅದರ ಆವರಣ, ರಂಗಸ್ಥಳ ಹಾಗೂ ನೇಪಥ್ಯದ ಕೋಣೆಗಳು ಹಾಗೂ, ಕಡೆಗೆ, ಕೆಲವು ಊರುಗಳಲ್ಲಿಯಾದರೂ, ಕಕ್ಕಸುಬಚ್ಚಲುಮನೆ ಗಳನ್ನೊಳಗೊಂಡಂತೆ ತಾವು ತಂಗುವ ಜಾಗವನ್ನು ಕೂಡ ಅವರೇ ಚೊಕ್ಕಮಾಡಿ ಕೊಳ್ಳಬೇಕು! ಸಂಜೆಯ ಆಟ ಶುರುವಾಗಲು ಕೆಲವೇ ನಿಮಿಷಗಳ ಮುಂಚಿನತನಕ ಈಯೆಲ್ಲ ತಯಾರಿಯನ್ನು ಮಾಡಿಕೊಂಡು, ಆಮೇಲೆ ಐದುಹತ್ತು ನಿಮಿಷದಲ್ಲಿ ಪ್ರಸಾದನಮಾಡಿಕೊಂಡು, ನಾಟಕದ ಉಡುಗೆತೊಡುಗೆ ಉಟ್ಟುತೊಟ್ಟು ನಾಟಕವಾಡತೊಡಗಬೇಕು ಅವರು. ಎಷ್ಟೋ ವೇಳೆ, ಉಸಿರಾಡಲೂ, ಕೆರಕೊಳ್ಳಲೂ ಸಮಯವಿರುವುದಿಲ್ಲ, ಅಂಥ ಒತ್ತಡದಲ್ಲಿ ಕೆಲಸಮಾಡ ಬೇಕಾಗುತ್ತದೆ ಅವರು. ಮುಂದುವರಿದು, ಪ್ರತಿ ಎರಡನೆಯ ದಿನ ಅಂದಿನ ಆಟವನ್ನು ಆಡಿ ಅವರು, ಕ್ಯಾಂಪನ್ನು ಮುಗಿಸಿದಮೇಲೆ, ರಂಗಸಜ್ಜಿಕೆ, ಬೆಳಕಿನ ಸಾಮಾನು, ಪರಿಕರ, ಉಡುಗೆತೊಡುಗೆಯ ಪೆಟ್ಟಿಗೆಗಳು ಮುಂತಾದ್ದೆಲ್ಲವನ್ನೂ ಬಿಚ್ಚಿ, ಕಟ್ಟಿ ಬಸ್ಸಿನ ಒಳಕ್ಕೆ, ಮೇಲಕ್ಕೆ ಏರಿಸಿ ಬಂದೋಬಸ್ತುಮಾಡುವ ಹೊತ್ತಿಗೆ ರಾತ್ರಿ ಒಂದುಗಂಟೆಯಾಗಿರುತ್ತದೆ. ಕೆಲಸ ಮುಗಿವತನಕ ಊಟಮಾಡಲೊಲ್ಲದ ಆ ಹುಡುಗಹುಡುಗಿಯರು, ಆ ನಟ್ಟಿರುಳಿನಲ್ಲಿ ಊಟಮಾಡಿ, ನಿದ್ದೆಯ ಶಾಸ್ತ್ರ ಮುಗಿಸಿ, ಬೆಳಿಗ್ಗೆ ಏಳುಗಂಟೆಗೆ ಮತ್ತೆ ಬಸ್ಸು ಹತ್ತಿ ಕೂತು, ಮುಂದಿನ ಊರಿನತ್ತ ಹೊರಡಬೇಕು. ಅಲ್ಲಿ ಮತ್ತೆ ಎಲ್ಲ ಶುರು. ಇದನ್ನೆಲ್ಲ ನಾನು ಕಣ್ಣಾರೆ



ನೋಡಿದ್ದೇನೆ; ಈ ಕೆಲಸದಲ್ಲಿ ಅವರೊಂದಿಗೆ ಕೈಜೋಡಿಸಿದ್ದೇನೆ. ಇಂಥದನ್ನು ಅವರು ಮಾಡಬೇಕಾಗಿರುವುದು ಒಂದೆರಡು ದಿನವಲ್ಲ; ಒಂದು ಊರು, ಒಂದು ಜಾಗದಲ್ಲಿ ಅಲ್ಲ; ಐದಾರು ತಿಂಗಳ ಕಾಲ, ಊರಿಂದೂರಿಗೆ ಪ್ರಯಾಣಮಾಡುತ್ತ, ಒಟ್ಟು ಸುಮಾರು ಐವತ್ತು ಊರು ಸುತ್ತುತ್ತ, ಪ್ರತಿ ಎರಡು ದಿನಕ್ಕೊಮ್ಮೆ ಇಷ್ಟನ್ನೆಲ್ಲ ಮಾಡಬೇಕು. ಹಾಗಾಗಿ ಅವರು ಸಂಜೆಯ ಆಟದಹೊತ್ತಿಗೆ ಎಷ್ಟು ದಣಿದಿರುತ್ತಾರೆ ಎಂದರೆ, ಎಷ್ಟೋ ವೇಳೆ ಅಂದಿನ ಆಟವು ಕಳೆಗಟ್ಟುವುದಿಲ್ಲ. ಎಷ್ಟೋ ವೇಳೆ, ತಮಗೆ ಸುಸ್ತಾಗಿದೆ ಅನ್ನುವುದು ಕೂಡ ಈ ಹುಡುಗಹುಡುಗಿಯರಿಗೆ ತಿಳಿಯುವುದಿಲ್ಲ. ತನಗೆ ಸುಸ್ತಾಗಿದೆ ಎಂದು ಅರಿಯಲೂ, ಒಬ್ಬರು, ಒಂದು ವಯಸ್ಸಿಗೆ ಬಂದಿರಬೇಕು. ಚಿಕ್ಕವಯಸ್ಸಿ ನಲ್ಲಿ ಅದು ತಿಳಿಯುವುದಿಲ್ಲ; ಆದರೆ ಮೈಮನಸ್ಸಿಗಾದ ಆ ದಣಿವಿನಿಂದ ಅಂದಿನ ಆಟಕ್ಕಂತೂ ಪೆಟ್ಟುಬಿದ್ದಿರುತ್ತದೆ.

ಇದನ್ನೆಲ್ಲ ನಾನು ಅವರಲ್ಲಿ ಒಬ್ಬನಾಗಿದ್ದು ಕಂಡುಂಡಿದ್ದೇನೆ. ಅನುಭವದಿಂದ ಬಂದ ಮಾತಿದು, ಸಿದ್ಧಾಂತದಿಂದ ಬಂದುದಲ್ಲ. ಆದರೆ, ಇಷ್ಟೆಲ್ಲಮಾಡಿದರೂ, ಬೇರೆ ಉದ್ಯೋಗಗಳಲ್ಲಿರುವವರಿಗೆ ಸಿಕ್ಕುವ ಸಂಬಳಕ್ಕೆ ಹೋಲಿಸಿದರೆ, ತಿರುಗಾಟದ ಈ ಹುಡುಗಹುಡುಗಿಯರಿಗೆ ಸಿಕ್ಕುವ ಸಂಬಳ ತುಂಬ ಅಂದರೆ ತುಂಬ ಕಮ್ಮಿ.

ಈ ಮಾತಿಗೆ, ‘ಈ ನಟನಟಿಯರೆಲ್ಲ ಚಿಕ್ಕವರು. ತಿರುಗಾಟವು ನೂರಕ್ಕೆ ನೂರು ನುರಿತ ಕಲಾವಿದರ ತಂಡವಲ್ಲ. ಅದು, ಆ ಎಳೆಯರಿಗೆ ವೃತ್ತಿನಿರತ, ವೃತ್ತಿಪರ ರಂಗಭೂಮಿಯ ಅನುಭವವನ್ನು ಕೊಡಲು ಇರುವ ತಂಡ; ಒಂದು ಬಗೆಯಲ್ಲಿ, ಅಪ್ರೆಂಟಿಸ್‌ಗಳ ತಂಡ, ಅಷ್ಟೇ. ಆ ಹುಡುಗರಿಗೆ ಕೊಡುವ ಹಣವು ಸಂಬಳವಲ್ಲ; ಒಂದು ಬಗೆಯ ಸ್ಟೈಪೆಂಡ್ ಅದು’ ಎಂಬ ಸಮಾಧಾನ ವನ್ನು ಹೇಳಿಕೊಳ್ಳಬಹುದು, ನಿಜವೇ. ಆದರೆ, ಕನ್ನಡದ ರಂಗಪ್ರೇಮಿಗಳು ತಿರುಗಾಟವನ್ನು ಒಂದು ವೃತ್ತಿನಿರತ ತಂಡವೆಂದಾಗಿ ನೋಡುತ್ತಿದ್ದಾರೆಯೇ ಹೊರತು, ಅಪ್ರೆಂಟಿಸ್‌ಗಳ ತಂಡವೆಂದಲ್ಲ ಅನ್ನುವುದನ್ನು ಇಲ್ಲಿ ನೆನೆಯಬೇಕು. ಅದು ಬರಿಯ ಅಪ್ರೆಂಟಿಸ್‌ಗಳ ತಂಡವೆಂದು ನೀನಾಸಮ್ ಸಂಸ್ಥೆ ಕೂಡ ಎಂದೂ ಅಧಿಕೃತವಾಗಿ ಹೇಳಿಲ್ಲ. ಹಾಗೆ ಅದು ಹೇಳಿದ್ದಿದ್ದರೆ, ತಿರುಗಾಟದ ನಮ್ಮ ಪ್ರಯೋಗಗಳನ್ನು ಜನರು ತಕ್ಕ ರಿಯಾಯಿತಿಕೊಟ್ಟು ನೋಡುತ್ತಿದ್ದರು! ಆದರೆ, ವಸ್ತುಸ್ಥಿತಿ ಹಾಗಿಲ್ಲ. ಜನರು, ತಿರುಗಾಟವು ಪೂರ್ಣಪ್ರಮಾಣದ ವೃತ್ತಿನಿರತ ತಂಡವೆಂದೇ ಎಣಿಸುತ್ತಿದ್ದಾರೆ; ಅದರಿಂದ ಪ್ರೌಢವಾದ ರಂಗಪ್ರಯೋಗ ಮತ್ತು ಅಭಿನಯವನ್ನೇ ಎದುರುನೋಡುತ್ತಾರೆ.

ಇಷ್ಟಾಗಿ, ತಿರುಗಾಟವು ಬರುಬರುತ್ತ ನಿಜಕ್ಕೂ ಅಪ್ರೆಂಟಿಸ್‌ಗಳ ತಂಡವೇ ಆಗಿಬಿಟ್ಟಿದೆ. ಅಪ್ರೆಂಟಿಸ್‌ತನವೆಂದರೆ ಒಂದೆರಡು ವರ್ಷಗಳ ಅವಧಿಯ ಅವಸ್ಥೆ ಮಾತ್ರ ತಾನೆ? ಈಚಿನ ಹಲವು ವರ್ಷಗಳಲ್ಲಿ ತಿರುಗಾಟದಲ್ಲಿ ಈ

ಎಳೆಯರು ಯಾರೂ ಒಂದು, ಅಥವಾ ಹೆಚ್ಚೆಂದರೆ ಎರಡು, ವರ್ಷಕ್ಕಿಂತ ಹೆಚ್ಚಿನ ಕಾಲ ಕೆಲಸಮಾಡುತ್ತಿಲ್ಲ. ಹಾಗಾಗಿಯೇ, ತಿರುಗಾಟದವರ ನಟನೆಯಲ್ಲಿ ಅನುಭವದ ಕೊರತೆ ಎದ್ದುಕಾಣಿಸುತ್ತಿದೆ; ತಂಡವು ಬರಿಯ ಅಪ್ರೆಂಟಿಸ್‌ಗಳ ತಂಡವೇ ಆಗಿಬಿಟ್ಟಿದೆ.

ಆದರೆ ಹಿಂದೆ ಒಂದು ಕಾಲವಿತ್ತು. ಆಗ, ಹಲವು ನಟನಟಿಯರು ಐದು, ಆರು ಅಥವಾ ಇನ್ನೂ ಹೆಚ್ಚುವರ್ಷಗಳ ಕಾಲ ತಿರುಗಾಟದಲ್ಲಿಯೇ ಉಳಿಯುತ್ತಿದ್ದರು; ತಾವೂ ಬೆಳೆಯುತ್ತಿದ್ದರು; ತಂಡದಲ್ಲಿನ ಎಳೆಯರನ್ನೂ ಬೆಳಸುತ್ತಿದ್ದರು. ಇದೊಂದು ಮುಖ್ಯವಾದ ವಿಷಯ. ವಿದ್ಯಾರ್ಥಿಗಳಿಗೆ ನಾವು ಮೇಷ್ಟರುಗಳು ಎಷ್ಟೇ ಮುತುವರ್ಜಿಯಿಂದ ಪಾಠಮಾಡಿದರೂ, ನಟನಟಿಯರಿಗೆ ನಾವು ನಿರ್ದೇಶಕರುಗಳು ಎಷ್ಟೇ ಆಳವಾದ, ನಿಖರವಾದ ನಿರ್ದೇಶನವನ್ನು ಕೊಟ್ಟರೂ ಅವರು, ತಮಗೆ ಅನುಕರಣಯೋಗ್ಯರು ಅನ್ನಿಸಿದ, ತಮಗಿಂತ ತುಸು ಹಿರಿಯರಾದ ವಿದ್ಯಾರ್ಥಿಗಳನ್ನು, ನಟನಟಿಯರನ್ನು ನೋಡುತ್ತ, ಅನುಕರಿಸುತ್ತ ಕೂಡ ಕಲಿಯುತ್ತಾರೆ. ಹಾಗಾಗಿಯೇ, ಹಿಂದೆ ತಿರುಗಾಟದಲ್ಲಿ ಇದ್ದ ಹಿರಿಯರಾದ, ಹೆಚ್ಚು ಪಳಗಿದ ನಟರನ್ನು ನೋಡುತ್ತ, ಅನುಕರಿಸುತ್ತ ಕೂಡ ತಿರುಗಾಟದ ಕಿರಿಯ ನಟರು ಬಹಳ ಕಲಿಯುತ್ತಿದ್ದರು. ಅಷ್ಟೇ ಅಲ್ಲ, ತಿರುಗಾಟದ ಆ ಹಿರಿಯರನ್ನು ನೋಡಿ, ಶಿಕ್ಷಣಕೇಂದ್ರದ ಆಯಾ ವರ್ಷದ ವಿದ್ಯಾರ್ಥಿಗಳೂ ಕಲಿಯುತ್ತಿದ್ದರು. ಆದರೆ, ಈಗ ಏನಾಗಿದೆ ನೋಡಿ. ಈಚೆಗೆ, ತುಂಬ ವರ್ಷಗಳಿಂದ, ತಂಡದಲ್ಲಿರುವವರೆಲ್ಲರೂ ಹೆಚ್ಚುಕಡಿಮೆ ಒಂದೇ ಮಟ್ಟದ ಅನುಭವ ಮತ್ತು ಪಕ್ವತೆ (ಅಥವಾ ಅಪಕ್ವತೆ) ಹೊಂದಿರುವವ ರಾಗಿರುತ್ತಾರೆ. ಇದರಿಂದ, ಇಲ್ಲಿನ ಕಿರಿಯರಿಗೆ ಅನುಕರಣಯೋಗ್ಯರಾದ ಹಿರಿಯ ಸಹೋದ್ಯೋಗಿಗಳಿಲ್ಲದಂತಾಗಿದೆ. ಹಾಗಾದರೆ, ಈಚೆಗೆ, ತಿರುಗಾಟದಲ್ಲಿ ನಟನಟಿಯರೇಕೆ ಹೆಚ್ಚುಕಾಲ ನಿಲ್ಲುತ್ತಿಲ್ಲ? ಈ ಪ್ರಶ್ನೆಗೆ ಉತ್ತರ ಹೇಳಿಯಾಗಿದೆ: ಇಲ್ಲಿ ಕೊಡುವ ಸಂಬಳ ಕಮ್ಮಿ, ಕೆಲಸ ಹೆಚ್ಚು. ಹಾಗಾಗಿ ಆ ಎಳೆಯರು ಯಾರೂ ಇಲ್ಲಿ ಒಂದೆರಡು ವರ್ಷಕ್ಕಿಂತ ಹೆಚ್ಚಿನ ಕಾಲ ನಿಲ್ಲುತ್ತಿಲ್ಲ. ಇಂದಿನ ಜೀವನದ ಒತ್ತಡವೇ ಹಾಗಿದೆ. ಮೇಲಾಗಿ, ಅವರಲ್ಲಿ ಹೆಚ್ಚಿನ ಜನ, ತಿರುಗಾಟವನ್ನು ಬಿಟ್ಟಮೇಲೆ, ಬೆಂಗಳೂರೆಂಬ ರಕ್ಕಸಿಯ ತೆಕ್ಕೆಯನ್ನು ಸೇರಿ, ಟಿವಿಗೆ ತುತ್ತಾಗುವುದನ್ನು ನಾವು ನೋಡುತ್ತಲೇ ಇದ್ದೇವೆ.

ಈಗ, ಮತ್ತೊಂದು, ಬಹುಮುಖ್ಯವಾದ, ವಿಷಯ. ಇಪ್ಪತ್ತು ವರ್ಷದ ಹಿಂದೆ ತಿರುಗಾಟದ ಒಂದು ನಾಟಕದ ತಾಲೀಮು ಸರಿಯಾಗಿ ಒಂದು ತಿಂಗಳ ಕಾಲ, ದಿನವೂ ಬೆಳಗಿನಿಂದ ಸಂಜೆಯತನಕ, ನಡೆಯುತ್ತಿತ್ತು. ಇವತ್ತು ಕೂಡ ತಾಲೀಮು ಒಂದು ತಿಂಗಳಕಾಲ ಮಾತ್ರ ನಡೆಯುತ್ತದೆ. ಆದರೆ, ಈ ಇಪ್ಪತ್ತು ವರ್ಷದಲ್ಲಿ, ಒಟ್ಟು ಪ್ರಪಂಚವೇ ಬದಲಾಗಿದೆ; ಸಂಗಣಕ, ಟಿವಿ



ಮುಂತಾದುವುಗಳಿಂದಾಗಿ ಹೊಸಬಗೆಯ ಪ್ರದರ್ಶನ ಸಂಸ್ಕೃತಿ ಬಂದಿದೆ; ಪ್ರೇಕ್ಷಕರ ನಿರೀಕ್ಷೆಗಳು ಹೆಚ್ಚಿವೆ, ಅಥವಾ ಬದಲಾಗಿವೆ. ಇದನ್ನೆಲ್ಲ ಈಹಿಂದೆಯೇ ಮಾತನಾಡಿಕೊಂಡಿದ್ದೇವೆ. ಹಾಗಾಗಿ, ಈ ಇಂಥದ್ದನ್ನು ನಮ್ಮ ರಂಗಕಲೆಯು ಮೆಟ್ಟಿನಿಲ್ಲಬೇಕಾದರೆ, ಇವತ್ತು ತಾಲೀಮಿನ ಅವಧಿ ಕೂಡ ಹೆಚ್ಚಾಗಬೇಕು.

ದೀರ್ಘವಾದ ತಾಲೀಮು ಮತ್ತು ಸತತವಾದ ಅಧ್ಯಯನ–ಅನ್ವೇಷಣೆ ಯಿಲ್ಲದೆ ಯಾವ ನಟ, ಅಥವಾ ನಟಿಯೂ, ನಿರ್ದೇಶಕ, ಅಥವಾ ನಿರ್ದೇಶಕಿಯೂ, ಬೆಳೆಯಲಾಗದು, ಯಾವ ರಂಗಪ್ರಯೋಗವೂ ಆಳವನ್ನು ಪಡೆದುಕೊಳ್ಳಲಾರದು. ಹಾಗೆ ನೋಡಿದರೆ, ತಿರುಗಾಟದ ಶುರುವಿನ ವರ್ಷಗಳಲ್ಲಿ ಮೂರುಮೂರೂವರೆ ತಿಂಗಳ ಕಾಲ ಒಟ್ಟೊಟ್ಟಿಗೆ ನಾಲ್ಕು ನಾಟಕಗಳ ತಾಲೀಮು ನಡೆಯುತ್ತಿತ್ತು. ಆಗ ತಿರುಗಾಟವು ದೊಡ್ಡವರಿಗಾಗಿ ಮೂರು ನಾಟಕ ಆಡುತ್ತಿತ್ತು, ಮಕ್ಕಳಿಗಾಗಿ ಒಂದು ನಾಟಕ ಆಡುತ್ತಿತ್ತು. ಯಾವುದೇ ಒಂದು ದಿನದಲ್ಲಿ, ಬೆಳಿಗ್ಗೆ ಒಂದು ನಾಟಕದ ತಾಲೀಮು, ಮಧ್ಯಾಹ್ನ ಮತ್ತೊಂದು ನಾಟಕದ ತಾಲೀಮು, ಸಂಜೆ ಮಗುದೊಂದು ನಾಟಕದ ತಾಲೀಮು –– ದೊಡ್ಡವರಿಗಾಗಿ ಆಡುತ್ತಿದ್ದ ನಾಟಕಗಳ ತಾಲೀಮು ಹೆಚ್ಚುಕಡಿಮೆ ಮೂರು ತಿಂಗಳ ಕಾಲ ನಡೆಯುತ್ತಿದ್ದುದು –– ಹೀಗೆ. ಇವುಗಳ ನಡುವೆಯೇ ಚಿಕ್ಕವರಿಗಾಗಿ ಆಡಬೇಕಾಗಿದ್ದ ಒಂದು ಚಿಕ್ಕ ನಾಟಕದ ತಾಲೀಮು ಕೂಡ ನಡೆಯುತ್ತಿತ್ತು. ಹೀಗಾಗಿ, ಆಗಲೂ, ಯಾವುದೇ ಒಂದು ನಾಟಕದ ತಾಲೀಮಿಗೆ ಒಟ್ಟು ಎಷ್ಟು ಗಂಟೆಗಳನ್ನು ಮೀಸಲಿಡಲಾಗುತ್ತಿತ್ತು ಎಂಬುದನ್ನು ನೋಡಿದರೆ, ಅದು ಇವತ್ತಿನ ಲೆಕ್ಕದಲ್ಲಿ, ಸುಮಾರು ಒಂದು ತಿಂಗಳ ಅವಧಿಯಷ್ಟೇ ಆಗುತ್ತಿತ್ತು ಎಂದಾದರೂ, ಆಗ ಯಾವುದೇ ಒಂದು ನಾಟಕವನ್ನು ಮೂರುತಿಂಗಳ ಕಾಲ ಅಭ್ಯಾಸಮಾಡುತ್ತ, ನಿಧಾನವಾಗಿ ಬೆಳಸಲಾಗುತ್ತಿತ್ತು ಅನ್ನುವುದನ್ನು ನೆನೆಯಬೇಕು. ಮತ್ತು, ಅದರಿಂದಾಗಿ, ಆಗ ನಟರಿಗೆ ಆಯಾ ನಾಟಕದಲ್ಲಿನ ತಮ್ಮ ನಟನೆಯನ್ನು ಇವತ್ತಿಗಿಂತ ಹೆಚ್ಚು ವ್ಯವಧಾನದಿಂದ ಬೆಳಸಿಕೊಳ್ಳಲು ಆಗುತ್ತಿತ್ತು ಅನ್ನುವುದನ್ನು ನೆನೆಯಬೇಕು. ಇವತ್ತು ಹಾಗೆಮಾಡುವುದು ಸಾಧ್ಯವೇ ಎಂದು ಕೇಳಿಕೊಂಡರೆ, ತಿರುಗಾಟಕ್ಕೆ ನಾಟಕನಿರ್ದೇಶನಮಾಡಲು ಬರುವವರು ಇವತ್ತು ಮೂರುಮೂರು ತಿಂಗಳಕಾಲ ಇರಲು ಒಪ್ಪಿಯಾರೇ ಎಂಬ ಪ್ರಶ್ನೆ ಎದುರಾಗುತ್ತದೆ! ಒಂದೊಮ್ಮೆ ಅವರು ಒಪ್ಪಿಕೊಂಡರೂ, ಅವರಿಗೆ ಕೊಡುವ ಸಂಭಾವನೆಯು ಆಗ ಮೂರುಪಟ್ಟು ಹೆಚ್ಚಬೇಕು ಅನ್ನುವ ಸಮಸ್ಯೆಯೂ ಇದೆ! ಈ ಸಮಸ್ಯೆಯನ್ನು ಗುರುತಿಸಿಯೂ, ನನ್ನ ಆಲೋಚನೆಯ ಸಾರಾಂಶವನ್ನು ಮುಂದಿಡುತ್ತೇನೆ: ಇವತ್ತು ಒಂದು ನಾಟಕಕ್ಕೆ ಒಂದು ತಿಂಗಳ, ದಿನದಿನವೂ ಎಂಟು ಗಂಟೆಯ, ಅಥವಾ ಮೂರುತಿಂಗಳ, ದಿನದಿನವೂ ಮೂರುಗಂಟೆಯ, ತಾಲೀಮು ಏನೇನೂ ಸಾಲದು. ಆಗಲೇ ಹೇಳಿದಂತೆ, ಈ ಖಾಉಜಾ ಯುಗದ ವ್ಯಾಪಾರೀ

ಮಾಧ್ಯಮಗಳ ಪ್ರಭಾವಕ್ಕೆ ಸವಾಲನ್ನೊಡ್ಡಬೇಕಾದರೆ, ನಾಟಕ ಪ್ರಯೋಗವೊಂದರಲ್ಲಿನ ಅಭಿನಯ, ಸಂಗೀತ, ಅದರ ವಿನ್ಯಾಸ ಮುಂತಾದ್ದೆಲ್ಲವೂ ಕಲಾತ್ಮಕವಾದ ಆಳ ಹಾಗೂ ನಿಷ್ಕೃಷ್ಟತೆ ಗಳುಳ್ಳದ್ದಾಗಿದ್ದು, ನೂರಕ್ಕೆ ನೂರು ವೃತ್ತಿನೈಪುಣ್ಯವನ್ನು ಮೆರೆಯಲು ಹವಣಿಸಬೇಕು. ಅದು ದೀರ್ಘವಾದ ರಿಯಾಜ಼ು ತಾಲೀಮುಗಳಿಲ್ಲದೆ ಆಗದ ಕೆಲಸ. ಹಾಗಾಗಿ, ಇವತ್ತು, ಎರಡೆರಡೂವರೆ ಗಂಟೆಯ ಅವಧಿಯ ಒಂದು ರಂಗಪ್ರಯೋಗದ ತಾಲೀಮು ಮೂರು ತಿಂಗಳ ಪರ್ಯಂತ, ದಿನಕ್ಕೆ ಎಂಟರಿಂದ ಹತ್ತು ಗಂಟೆಗಳ ಕಾಲ, ನಡೆಯಬೇಕು. ಅದಕ್ಕೆ ತಗುಲಬಹುದಾದ ಖರ್ಚುವೆಚ್ಚ, ಸಂಘಟನಾಶಕ್ತಿಯ ಮಿತಿಗಳು ಮುಂತಾದ್ದನ್ನೆಣಿಸಿ ನೋಡಿದಾಗ, ಮೂರು ತಿಂಗಳ ತಾಲೀಮು ಮಾಡುವುದು ಅಸಾಧ್ಯವೆನ್ನಿಸಿದರೆ, ಕನಿಷ್ಠ ಎರಡು ತಿಂಗಳ ಕಾಲ ತಾಲೀಮು ಮಾಡಬೇಕು. ಅದೂ ಆಗದು ಎಂದರೆ, ತಿರುಗಾಟದ ಒಂದು ಪ್ರಯೋಗದ ತಾಲೀಮು, ಸದ್ಯ, ಕಡಿಮೆಯೆಂದರೆ ಒಂದೂವರೆ ತಿಂಗಳ ಕಾಲವಾದರೂ ನಡೆಯುವಂತಾಗಬೇಕು. ತಿರುಗಾಟವೂ ರಂಗಭೂಮಿಯೂ ಉಳಿದುಬೆಳೆಯಲಿರುವ ಮಾರ್ಗ ಇದೊಂದೇ.

ಇನ್ನು ಇದೆಲ್ಲದರಷ್ಟೇ, ಅಥವಾ ಇದೆಲ್ಲಕ್ಕಿಂತಲೂ, ಮುಖ್ಯವಾದುದು ಅಭಿನಯದ ಪಕ್ವತೆ ಮತ್ತು ತಾಜಾತನ, ಹಾಗೂ ನಟನಟಿಯರ ಮೈಮನಸ್ಸುಗಳ ಸಂಸ್ಕಾರದ ಪ್ರಶ್ನೆ. ಈ ಪ್ರಶ್ನೆಗೊಂದು ಉತ್ತರ ಕಂಡುಕೊಳ್ಳಲು ನಾವು ನೀನಾಸಮ್ ರಂಗಶಿಕ್ಷಣ ಕೇಂದ್ರದತ್ತ ಹೊರಳಬೇಕು. ಅತ್ತ ಹೊರಳುವ ಮುನ್ನ, ಇಲ್ಲಿಯತನಕದ ನನ್ನ ಮಾತಿನ ತಾತ್ಪರ್ಯ ಹೇಳಿಬಿಡುತ್ತೇನೆ: ತಿರುಗಾಟದ ಒಟ್ಟು ಆಯೋಜನೆ, ಸಂರಚನೆ ಮತ್ತು ರೂಪುರೇಷೆಯಲ್ಲಿ ಮಹತ್ತರವಾದ ಬದಲಾವಣೆ ಆಗಲೇಬೇಕು. ನಟನಟಿಯರ ಮೇಲಿನ ಕೂಲಿಕೆಲಸದ ಹೊರೆ ಕಡಿಮೆಯಾಗಬೇಕು; ಅವರು ಅವೇಳೆಯಲ್ಲಿ ಉಂಡುಮಲಗೇಳುವುದು ತಪ್ಪುವಂತೆ ಅವರ ದಿನಚರಿಯಲ್ಲಿ ಬದಲಾವಣೆಯಾಗಬೇಕು; ಅವರ ಸಂಬಳ ಹೆಚ್ಚಬೇಕು.

ಸಂಬಳವನ್ನು ಕುರಿತಂತೆ ಕಡೆಯ ಒಂದು ಮಾತು. ಕೇಂದ್ರ ಸರಕಾರದ ಸಂಸ್ಕೃತಿ ಸಚಿವಾಲಯವು, ಬೇರೆ ಹಲವು ರಂಗತಂಡಗಳಿಗೆ ಕೊಡುವಂತೆ, ನಟನಟಿಯರ ಸಂಬಳ ಎಂಬ ಹೆಸರಿನಲ್ಲಿ ನೀನಾಸಮ್ ತಿರುಗಾಟಕ್ಕೆ ಕೂಡ ಅನುದಾನವನ್ನು ಕೊಡುತ್ತದೆ. ತಿರುಗಾಟವು ತಂಡದ ಪ್ರತಿಯೊಬ್ಬರಿಗೂ ಆ ನಿಯಮದಂತೆಯೇ ಸಂಬಳವನ್ನು ನೀಡುತ್ತಬಂದಿದೆ. ಜೊತೆಗೆ, ತಿರುಗಾಟದ ಕೊನೆಗೆ ಒಂದಷ್ಟು ಮೊತ್ತದ ಬೋನಸ್ ಕೂಡ ಕೊಡುತ್ತಬಂದಿದೆ. ಆದರೆ, ಈಗಾಗಲೇ ಹೇಳಿದ ಕಾರಣಗಳಿಂದಾಗಿ, ನಟನಟಿಯರಿಗೆ ಸಿಕ್ಕುತ್ತಿರುವ ಸಂಬಳವು ತುಂಬ ಕಮ್ಮಿಯಾದ್ದು. ತಾವು, ದಯವಿಟ್ಟು ಕೇಂದ್ರ ಸರಕಾರವು ಕೊಡುತ್ತಿರುವ ತಿಂಗಳ ಸಂಬಳದ ಮೊತ್ತಕ್ಕೆ ಒಂದಷ್ಟನ್ನು ಸೇರಿಸಿ, ಸಂಬಳವನ್ನು ಹೆಚ್ಚಿಸಬೇಕು,



ಹಾಗೆ ಮಾಡಲುಬೇಕಾದ ದಾರಿಯನ್ನು ಹುಡುಕಬೇಕು ಎಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಸಂಬಳದ ಹೆಚ್ಚಳ, ತಾಲೀಮಿನ ಅವಧಿಯ ಹೆಚ್ಚಳ, ತಿರುಗಾಟದ ಒಟ್ಟು ರೂಪುರೇಷೆಯಲ್ಲಿ ಬದಲಾವಣೆ ತರುವುದು––ಇಂಥದೆಲ್ಲ ದೊಡ್ಡಮಟ್ಟದ ಖರ್ಚುವೆಚ್ಚವನ್ನು ಬೇಡುತ್ತದೆ, ಅದಕ್ಕಾಗಿ ತುಂಬ ಹಣಬೆಂಬಲ ಬೇಕಾಗುತ್ತದೆ ಅನ್ನುವುದನ್ನು ಬಲ್ಲೆ. ಆದರೆ, ಕನ್ನಡನಾಡು ಮತ್ತು ದೇಶವಿದೇಶಗಳಲ್ಲಿ ನೀನಾಸಮ್ ಸಂಸ್ಥೆಯು ಗಳಿಸಿರುವ ಪ್ರೀತಿಗೌರವಖ್ಯಾತಿಗಳಿಂದಾಗಿ ಅಂಥ ಬೆಂಬಲ ದೊರಕುವುದು ತೀರ ಕಷ್ಟವಾಗಲಾರದು. ನೀನಾಸಮ್ ಸಂಸ್ಥೆಯವರು ಅತ್ತ ಮನಸ್ಸುಮಾಡಬೇಕೆಂದೂ ತಿರುಗಾಟದಲ್ಲಿ ದೊಡ್ಡ ಬದಲಾವಣೆಯನ್ನು ತರಬೇಕೆಂದೂ ಬೇಡಿಕೊಳ್ಳುತ್ತೇನೆ. ಅಂಥ ಬದಲಾವಣೆಯನ್ನು ತರುವಲ್ಲಿ ನಿಮ್ಮೊಡನೆ ನಿಲ್ಲಲು, ನನ್ನ ಕೈಲಾದ್ದನ್ನು ಮಿಕ್ಕುಮೀರಿಮಾಡಲು, ಸಿದ್ಧನಿದ್ದೇನೆ.

••• ••• •••

ನೀನಾಸಮ್ ಸಂಸ್ಥೆಯ ಮತ್ತೊಂದು ಮುಖ್ಯಾಂಗವೆಂದರೆ ನೀನಾಸಮ್ ರಂಗಶಿಕ್ಷಣ ಕೇಂದ್ರ (ಅಥವಾ, ಸರಳವಾಗಿ, ಶಾಲೆ). ಆಧುನಿಕ ಭಾರತೀಯ ರಂಗಭೂಮಿಯ ಬಹುಮುಖ್ಯವಾದ ಭಾಗ, ನೀರಂಕೇ. ಈ ಶಾಲೆಯು ಕನ್ನಡ ಸಂಸ್ಕೃತಿ ಮತ್ತು ರಂಗಭೂಮಿಗೆ, ಹಾಗಾಗಿ ಭಾರತದ ಮತ್ತು ವಿಶ್ವದ ಸಂಸ್ಕೃತಿ ಮತ್ತು ರಂಗಭೂಮಿಗೆ ಎಂಥ ಹಿರಿದಾದ ಕೊಡುಗೆಯನ್ನು ಕೊಟ್ಟಿದೆ ಎಂದು ಹೇಳಬೇಕಾಗಿಯೇ ಇಲ್ಲ.* ಲೋಕಕ್ಕೇ ಗೊತ್ತಿರುವ ವಿಷಯವದು. ಶಾಲೆಯ ವಿಷಯದಲ್ಲಿ, ಸದ್ಯ ಎಲ್ಲಕ್ಕಿಂತ ಮುಖ್ಯವಾದುವೆಂದು ತೋರುತ್ತಿರುವ ಮೂರು ಸಂಗತಿಗಳನ್ನು ಹಂಚಿಕೊಳ್ಳುತ್ತೇನೆ.

ಒಂದನೆಯದು ಸಾಮಾಜಿಕ ಕಾಳಜಿಯನ್ನು ಕುರಿತದ್ದು. ಇಲ್ಲಿ, ಸಾಮಾಜಿಕ ಕಾಳಜಿ ಎಂದರೆ ಸಮಾಜವಾದೀ ಕಾಳಜಿ ಎಂದು ಬೇರೆಯಾಗಿ ಹೇಳ ಬೇಕಾಗಿಲ್ಲವಷ್ಟೇ. ಈಚಿನ ಕೆಲವು ವರ್ಷಗಳಲ್ಲಿ, ಈ ಶಾಲೆಯ ವಿದ್ಯಾರ್ಥಿಗಳಲ್ಲಿ ನಾಟಕದವರಿಗಿರಬೇಕಾದ ಅಂಥ ಕಾಳಜಿಯ ಕೊರತೆ ಕಾಣಿಸುತ್ತಿದೆ. ಇದು ನೀರಂಕೇವಿನ ವಿದ್ಯಾರ್ಥಿಗಳಲ್ಲಿ ಮಾತ್ರವಲ್ಲ, ಎಲ್ಲೆಡೆಯೂ, ಬಹುತೇಕ

---

* ಕನ್ನಡದಲ್ಲಿ ಆದೊಂದು ದೊಡ್ಡ ಕೆಲಸ ದೇಶ–ವಿಶ್ವಗಳಮಟ್ಟಿಗೆಯೇ ದೊಡ್ಡದಾದುದು. ಕನ್ನಡದ ಒಬ್ಬ ದೊಡ್ಡ ಕವಿ, ಕಲಾವಿದ ಅಥವ ಕಲಾವಿದೆ ವಿಶ್ವದ ದೊಡ್ಡಕವಿ, ಕಲಾವಿದ, ಕಲಾವಿದೆ... ಅಷ್ಟೇ.

ಶಾಲಾಕಾಲೇಜುಗಳ ವಹಿವಾಟು, ಧೋರಣೆ, ಹಾಗೂ ಅವುಗಳಲ್ಲಿನ ಬೋಧನೆಯಲ್ಲಿ--ಅಷ್ಟೇಕೆ, ಒಟ್ಟು ಜನಜೀವನದಲ್ಲಿಯೇ--ಎದ್ದುಕಾಣಿಸುತ್ತಿರುವ ಕೊರತೆಯಾಗಿದೆ. ಸಾಮಾನ್ಯವಾಗಿ, ಸಮಾಜವಾದದ ಮಾತು ಇವತ್ತು ಯಾರಿಗೂ--ಅದರಲ್ಲಿಯೂ ಅಧಿಕಾರಸ್ಥರಿಗೆ--ಬೇಡವಾದ್ದೇ ಆಗಿದೆ. ಇಂಥ ವೇಳೆಯಲ್ಲಿ, ಸಮಾಜವಾದೀ ಕಾಳಜಿಯ ಬೀಜವನ್ನು ವಿದ್ಯಾರ್ಥಿಗಳಲ್ಲಿ ಬಿತ್ತುವ, ಅದನ್ನು ಅವರಲ್ಲಿ ತಟ್ಟಿ, ಎಬ್ಬಿಸುವ ಕೆಲಸದತ್ತ ಈ ನಮ್ಮ ಶಾಲೆಯಲ್ಲಿ ಪಾಠಮಾಡುವ ನಾವೆಲ್ಲ ಹೆಚ್ಚಿನ ಒತ್ತುಕೊಡಬೇಕು. ರಂಗಭೂಮಿಯ ಇತಿಹಾಸ, ಸಾಹಿತ್ಯದ ಇತಿಹಾಸ, ರಂಗವಿನ್ಯಾಸ, ನಿರ್ದೇಶನ ಮತ್ತು ಅಭಿನಯದ ಬಗೆಗಳ ಅಭ್ಯಾಸ ಹಾಗೂ ಪಾಠ -- ಎಲ್ಲ ಸಂದರ್ಭಗಳಿಗೂ ಈ ಮಾತನ್ನು ಅನ್ವಯಿಸಿಕೊಳ್ಳಬೇಕು.

ನಾಟಕವೊಂದರ ರಂಗತಾಲೀಮಿನ ವೇಳೆಯಲ್ಲಿ, ವಿದ್ಯಾರ್ಥಿಗಳೊಂದಿಗೆ ಕೂಡಿ, ಮತ್ತು ಅವರಿಗಾಗಿ, ಆ ನಾಟಕವು (ಅಥವಾ ಪ್ರಯೋಗವು) ಹೇಳುವ ಜೀವನಮೌಲ್ಯಗಳ ವಿವೇಚನೆಯನ್ನು ನಾವೀಗ ಮಾಡುತ್ತಬಂದಿರುವುದಕ್ಕಿಂತ ಹೆಚ್ಚು ವಿಶದವಾಗಿ, ಹರಿತವಾಗಿ ಮಾಡಬೇಕು ನಾವು. ಹಲವು ವೇಳೆ, ಒಂದು ನಾಟಕದ ಪಠ್ಯವೊಂದು ಹೇಳುತ್ತಿರುವುದಕ್ಕೂ (ಅಥವಾ ಅದು ಹೇಳುತ್ತಿದೆ ಎಂದು ನಮಗೆ ತೋರುತ್ತದೆಯಲ್ಲ, ಅದಕ್ಕೂ) ಅದರ ರಂಗಪ್ರಯೋಗವೊಂದು ಹೇಳಲು ಹೊರಟಿರುವುದಕ್ಕೂ ವ್ಯತ್ಯಾಸವಿರುತ್ತದೆ; ಕೆಲವೊಮ್ಮೆ ವಿರೋಧವೂ ಇರಬಹುದು. ಅಂಥಲ್ಲೆಲ್ಲ, ಅದರ ಯಾಕೆ–ಹೇಗೆಗಳನ್ನು ವಿದ್ಯಾರ್ಥಿಗಳಿಗೆ ಸರಿಯಾಗಿ ತಿಳಿಸಿಕೊಡಲು, ಅವರೊಂದಿಗೆ ಚರ್ಚಿಸಲು ನಾವು ಇನ್ನಷ್ಟು ಪ್ರಯತ್ನಮಾಡಬೇಕು.

ನೀನಾಸಮ್ಮಿನಲ್ಲಿ ಸಂಸ್ಕೃತಿ ಶಿಬಿರದಲ್ಲಿ ನಡೆಯುವ ಗೋಷ್ಠಿಗಳಲ್ಲದೇ ಬೇರೆ ಹಲವು ಬಗೆಯ ಗೋಷ್ಠಿಗಳು, ಚರ್ಚೆಗಳು ಕಾಲಕಾಲಕ್ಕೆ ನಡೆಯುತ್ತಿರುತ್ತವೆ. ಅಂಥ ವೇಳೆಯಲ್ಲಿ, ಇಲ್ಲಿನ ವಿದ್ಯಾರ್ಥಿಗಳು ಅಲ್ಲಿ ಆಗುವುದನ್ನೆಲ್ಲ ಮೂಕವಾಗಿ ಕೇಳುತ್ತಿರುತ್ತಾರೆ, ನೋಡುತ್ತಿರುತ್ತಾರೆ, ಅಷ್ಟೇ. ಪ್ರೌಢವಾದ ಇಂಗ್ಲಿಶಿನಲ್ಲಿ ನಡೆಯುವ ಗೋಷ್ಠಿಗಳಲ್ಲಿನ ಕಲಾಪವಂತೂ ಅವರಿಗೆ ಏನೇನೂ ಅರ್ಥವಾಗುವುದಿಲ್ಲ. ಈ ಕೊರತೆಯನ್ನು ನಾವು ತುಂಬಬೇಕು. ಗೋಷ್ಠಿಗಳು ಇಂಗ್ಲಿಶಿನಲ್ಲಿ ನಡೆಯಲಿ, ಕನ್ನಡದಲ್ಲಿ ನಡೆಯಲಿ, ನಾವು ಅವುಗಳ ಸಾರವನ್ನು ವಿದ್ಯಾರ್ಥಿಗಳಿಗೆ ತಿಳಿಯಾದ ಕನ್ನಡದಲ್ಲಿ ತಿಳಿಸಿಕೊಡುವ, ಅವರೊಂದಿಗೆ ಚರ್ಚಿಸುವ ಪ್ರಯತ್ನವನ್ನು ಮಾಡಬೇಕು.

ಎರಡನೆಯದು ಈ ಶಾಲೆಗೆ ಸೇರಿಕೊಳ್ಳುವಾಗ ವಿದ್ಯಾರ್ಥಿಗಳಿಗೆ ಎಷ್ಟು ವಯಸ್ಸಾಗಿರುತ್ತದೆ, ಅವರು ಏನು ಓದಿರುತ್ತಾರೆ ಅನ್ನುವುದನ್ನು ಕುರಿತದ್ದು. ನೀರಂಕೇವಿಗೆ ಸೇರಲು ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಓದಿದ್ದರೆ ಸಾಕೆಂಬ ನಿಯಮವಿದೆಯಲ್ಲವೇ? ಇದರಿಂದಾಗಿ, ಇಲ್ಲಿನ ಹೆಚ್ಚಿನ ವಿದ್ಯಾರ್ಥಿಗಳ ವಯಸ್ಸು



ಹತ್ತೊಂಭತ್ತು–ಇಪ್ಪತ್ತರ ಆಸುಪಾಸಿನದ್ದು. ಕೆಲವರ ವಯಸ್ಸು ಇನ್ನೂ ಚಿಕ್ಕದು, ಹದಿನೈದು–ಹದಿನಾರು! ಈ ವಯಸ್ಸಿನವರಿಗೆ ಲೋಕಾನುಭವ, ರಂಗಾನುಭವ, ಓದು ಎಲ್ಲವೂ ತೀರ ಕಮ್ಮಿ ಇರುತ್ತದೆ. ಆದರೆ, ನಾವು ಇಲ್ಲಿ ಪ್ರಯೋಗಮಾಡಲು ಕೈಗೆತ್ತಿಕೊಳ್ಳುವುದೋ ಉದ್ದಾಮರು ಬರೆದ, ಉದ್ದಾಮ ನಾಟಕಗಳನ್ನು! ಆ ನಾಟಕಗಳಲ್ಲಿ, ಎಷ್ಟೋ ವೇಳೆ, ಪ್ರೌಢವಾದ ಲೈಂಗಿಕತೆಯ, ಅಥವಾ ಮನಸ್ಸಿನ, ಬದುಕಿನ ಬೇರೆ ಸಂಕೀರ್ಣ ವ್ಯಾಪಾರಗಳ ಸಂಕೀರ್ಣ ಚಿತ್ರಣವಿರುತ್ತದೆ. ಅಂಥದನ್ನೆಲ್ಲ, ಈ ಕಿರಿಯರಿಗೆ ಸರಿಯಾಗಿ ಅರುಹಿ, ಅದನ್ನು ಅವರು ಅಭಿನಯಿಸುವಂತೆ ಮಾಡುವುದು ಬಲುಕಷ್ಟದ ಕೆಲಸವಾಗುತ್ತದೆ. ಮತ್ತು, ಅದನ್ನೆಲ್ಲ ಮಾಡದೇ ನಾಟಕವನ್ನು ಆಡುವುದು ಆಗದ ಕೆಲಸ. ನಾವು ಮಾಡುವುದು ಬರಿಯ ಸಾಹಿತ್ಯದ ಪಾಠವಲ್ಲ, ನೋಡಿ. ಪಾತ್ರವೊಂದರ ಅವಸ್ಥೆ, ಸನ್ನಿವೇಶವೊಂದರ ಮರ್ಮ ವಿದ್ಯಾರ್ಥಿನಟನಟಿಯರ ಒಳಗಿಳಿದು, ಅದನ್ನು ಅವರು ಜೀವಂತವಾಗಿ ಅಭಿನಯಿಸುವಂತೆ ಮಾಡುವುದು ನಮ್ಮ ಕೆಲಸ. ಈಚೆಗೆ, ತುಂಬ ಸಲ, ಆ ಕೆಲಸ ಮಾಡಹೊರಟು, ವಿದ್ಯಾರ್ಥಿಗಳಿಗೆ ಅಂಥದನ್ನು ತಕ್ಕ ತೀವ್ರತೆಯಲ್ಲಿ ಅರುಹಿ, ಅವರಿಂದ ಅಭಿನಯಮಾಡಿಸ ಹೊರಟಾಗ ನನಗೆ, ನನ್ನೊಳಗೇ, ತುಂಬ ಮುಜುಗರವಾಗಿದೆ, ಹಿಂಸೆಯಾಗಿದೆ; ಈ ಎಳೆಯರ ಮೇಲೆ ದೌರ್ಜನ್ಯ ಮಾಡುತ್ತಿದ್ದೇನೆ ಅನ್ನಿಸಿದೆ. ಅದರಿಂದಾಗಿ, ನಾನು ತುಂಬ ವ್ಯಥೆಪಟ್ಟಿದ್ದೇನೆ. ಇದು ನನ್ನೊಬ್ಬನ ಕಷ್ಟವಲ್ಲ, ಇಲ್ಲಿ ಪಾಠಮಾಡುವ, ನಾಟಕಕಲಿಸುವ ಎಲ್ಲರ ಕಷ್ಟವೂ ಹೌದು ಅಂದುಕೊಂಡಿದ್ದೇನೆ. ಇದಕ್ಕೆ ಪರಿಹಾರವನ್ನು ಕಂಡುಕೊಳ್ಳಬೇಕು. ಸಾಧ್ಯವಾದರೆ, ಈ ಶಾಲೆಗೆ ಸೇರಲು ಪಿಯುಸಿ ಓದಿರಬೇಕು ಅಥವಾ, ಇನ್ನೂ ಒಳಿತೆಂದರೆ, ಬಿಎ, ಬಿಎಸ್‌ಸಿ ಮುಂತಾದಂಥ ಪದವಿ ಓದಿರಬೇಕು ಅನ್ನುವುದಾಗಿ ಆ ನಿಯಮವನ್ನು ಬದಲಾಯಿಸಬೇಕು. ಆಗ, ಇಲ್ಲಿಗೆ ಬರುವ ವಿದ್ಯಾರ್ಥಿಗಳ ಮನಸ್ಸು ಈಗಿರುವ ವಿದ್ಯಾರ್ಥಿಗಳ ಮನಸ್ಸಿಗಿಂತ ಸ್ವಲ್ಪಹೆಚ್ಚು ಪಕ್ವವಾಗಿರುತ್ತದೆ ಎಂದು ಆಶಿಸಬಹುದು.

ಮೂರನೆಯದು ಸೂಕ್ಷ್ಮವಾದ, ಆದರೆ ಹೇಳಿಕೊಳ್ಳಲೇಬೇಕಾದ, ಸಂಗತಿ. ಇದನ್ನು, ನನಗೆ ನಾನೇ ಯಾವಾಗಲೂ ಹೇಳಿಕೊಳ್ಳುತ್ತಿರುತ್ತೇನೆ. ಈಗ, ಇಲ್ಲಿ, ಎಲ್ಲರಿಗೂ ಕೇಳಿಸುವಂತೆ, ಹೇಳಿಕೊಳ್ಳುತ್ತಿದ್ದೇನೆ, ಅಷ್ಟೇ.

ಒಬ್ಬ ಅಧ್ಯಾಪಕನಾಗಿ ನಾನು ನನ್ನ ಕರ್ತವ್ಯವನ್ನು, ಸರಿಯಾಗಿ, ನೂರಕ್ಕೆ ನೂರು, ಮಾಡುತ್ತಿದ್ದೇನೆಯೇ? ನನ್ನ ಕೆಲಸಕ್ಕೆ ಸಂಬಂಧಿಸಿದ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಮತ್ತು, ದಿನಗಳೆದಂತೆ, ಆ ಜ್ಞಾನವನ್ನು ವಿದ್ಯಾರ್ಥಿಗಳೊಂದಿಗೆ ಹೆಚ್ಚುಹೆಚ್ಚು ತಿಳಿಯಾಗಿ, ಹೃತ್ಪೂರ್ವಕವಾಗಿ ಹಂಚಿಕೊಳ್ಳಲು, ನಿರಂತರ ಪ್ರಯತ್ನಪಡುತ್ತಿದ್ದೇನೆಯೇ? ಅದಕ್ಕೆ ತಕ್ಕ ದಾರಿಗಳನ್ನು ಶಕ್ತಿಮೀರಿ ಹುಡುಕುತ್ತಿದ್ದೇನೆಯೇ? ಮೇಷ್ಟರಾದವನಿಗೆ ಗುರುತ್ವವೆನ್ನುವ ಭಾವವೂ ಸ್ಥಿತಿಯೂ

ಬರುವುದು ಒಳ್ಳೆಯದಾಗಿ ಪಾಠವಮಾಡುವುದರಿಂದ, ತನ್ನ ತಾನು ಕೊಟ್ಟುಕೊಳ್ಳುವುದರಿಂದ ಮಾತ್ರ. ಗುರುವಾಗಲು...ಲಘುವಾಗಬೇಕು; ಕೊಟ್ಟುಕೊಳ್ಳಬೇಕು. ಈ ಎಚ್ಚರ ನನಗೆ ಸದಾ ಇರಲಿ, ಲೋಕಗುರುವೇ. ಸಹನಾವವತು, ಸಹನೌಭುನಕ್ತು...

••• ••• •••

ನೀನಾಸಮ್ ಸಂಸ್ಥೆಯ ಒಳಗೆ ಕೆಲಸ ಮಾಡುವವರನ್ನು, ಮತ್ತು ಈ ಸಂಸ್ಥೆಯ ಚಟುವಟಿಕೆಗಳಲ್ಲಿ ಸ್ವಯಂಪ್ರೇರಣೆಯಿಂದ ಪಾಲ್ಗೊಳ್ಳುತ್ತ ಬಂದಿರುವ ಈ ಸುತ್ತಿನ ಜನರನ್ನು, ನಾವು ನೀನಾಸಮ್ ಬಳಗ ಎಂದು ಕರೆಯುತ್ತೇವೆಯಷ್ಟೇ. ಇವರಲ್ಲಿ ಹೆಚ್ಚಿನ ಜನರು, ವರ್ಷಕ್ಕೊಮ್ಮೆ ಸೇರಿ ಆಡುವ ನಾಟಕವನ್ನು ನಾವು ಬಳಗದ ನಾಟಕ ಎಂದು ಕರೆಯುತ್ತೇವೆಯಷ್ಟೇ. ಇಂಥ ಈ ಬಳಗದವರಿಗೆ ನಾನು ಸಾಕಷ್ಟು ಆತ್ಮೀಯನಾಗಿದ್ದೇನೆ, ಮತ್ತು ಅವರೊಂದಿಗೆ ರಂಗಪ್ರಯೋಗ ವೊಂದನ್ನು ಕೂಡ ಈಚಿನ ವರ್ಷಗಳಲ್ಲಿ ಮಾಡಿದ್ದೇನೆ. ಆ ಬಳಗವನ್ನು ಕುರಿತ ಕೆಳೆತನ–ಕಳಕಳಿಯ ಒಂದು ಮಾತು.

ನೀನಾಸಮ್ ಸಂಸ್ಥೆಯು ಒಟ್ಟಂದದಲ್ಲಿ ಸಮಾಜವಾದೀ ದೃಷ್ಟಿಕೋನವುಳ್ಳದ್ದು. ಸಂಸ್ಥೆಯ ಕೆಲಸಗಳಲ್ಲಿ ಪಾಲ್ಗೊಳ್ಳುತ್ತಿರುವ, ಮತ್ತು ಇನ್ನು ಮುಂದೆ ಪಾಲ್ಗೊಳ್ಳಬೇಕಾದ, ಹೊಸ ಪೀಳಿಗೆಯ ಜನರು ಇಲ್ಲಿ ನಡೆಯುವ ಹಲವು ಗೋಷ್ಠಿ–ಚರ್ಚೆಗಳ ಸಾರವನ್ನು ತಿಳಿದು, ಉತ್ಕಟವಾಗಿ ಚರ್ಚಿಸಿ, ಮನಸ್ಸಿಗೆ ತಂದುಕೊಳ್ಳದಿದ್ದರೆ ಸಂಸ್ಥೆಯ ಆಶಯವು ಮುಕ್ಕಾದಂತೆ. ಉದಾಹರಣೆಗೆ, ಬಳಗಕ್ಕೆ ನಾನು ನಿರ್ದೇಶಿಸಿದ ಪ್ರಯೋಗದಲ್ಲಿ ಮುಖ್ಯಪಾತ್ರವೊಂದನ್ನು ವಹಿಸಿದ ಒಬ್ಬ ಯುವಕ –– ಆಗಲೇ ಮದುವೆಯಾಗಿ, ಪುಟ್ಟ ಸಂಸಾರವನ್ನೂ ನಡೆಸುತ್ತಿದ್ದವನು –– ಚಿಕ್ಕಂದಿನಿಂದಲೂ, ಒಂದು ಕಾದಂಬರಿ, ಒಂದು ಸಣ್ಣಕತೆ, ಒಂದು ಪುರಾಣಕತೆ, ಕಡೆಗೆ ದಿನಪತ್ರಿಕೆ, ಮ್ಯಾಗಝೀನ್ ಕೂಡ ಓದಿದವನಾಗಿರಲಿಲ್ಲ. ದೊಡ್ಡವನಾದಮೇಲೆಯೂ ಒಂದು ಸಿನಿಮಾ, ಒಂದು ಟಿವಿ ಕಾರ್ಯಕ್ರಮ, ಒಂದು ಸಂಗೀತಕಚೇರಿ, ಕಡೆಗೆ ಯಕ್ಷಗಾನದ ಒಂದು ಆಟ, ಒಂದು ತಾಳಮದ್ದಳೆ, ಕಂಡವನಲ್ಲ, ಕೇಳಿದವನಲ್ಲ; ಆದರೆ, ಸಾಗರದ ತನ್ನ ಕಚೇರಿಯ ಕೆಲಸದಲ್ಲಿ ಜಾಣ! ಇದನ್ನು ಹೇಳುವಾಗ, ಈಗಲೂ, ಇದು ನನಗೇ ಒಂದು ಕೌತುಕವಾಗಿ ಕಾಣುತ್ತದೆ; ಅದಕ್ಕಿಂತ ಹೆಚ್ಚಾಗಿ, ಇಂದಿನ ಲೋಕಕ್ಕೆ, ಯುವಪೀಳಿಗೆಯ ಒಂದು ಭಾಗಕ್ಕೆ ಹಿಡಿದ ಕೈಗನ್ನಡಿಯಾಗಿಯೂ ಕಾಣುತ್ತದೆ. ಇಂಥ ಈ ಹುಡುಗನ ಕೈಯಲ್ಲಿ ಆ ಪಾತ್ರವನ್ನು ಮಾಡಿಸಬೇಕಾದರೆ, ನಾನು ಬಹಳ ಕಷ್ಟಪಡಬೇಕಾಯಿತು. ತೀರ ಆ ಹುಡುಗನಷ್ಟಲ್ಲದಿದ್ದರೂ, ಇಂದಿನ ತುಂಬ ಜನ ಹುಡುಗರು (ಮತ್ತು ಹಿರಿಯರು ಕೂಡ) ತಮ್ಮತಮ್ಮ



ಸಾಂಸಾರಿಕ ಬೇಕುಬೇಡಗಳ ಆಚೆಗಿನ ಯಾವುದನ್ನೂ ಹಚ್ಚಿಕೊಳ್ಳದೇ ಇರುತ್ತಾರೆ. ಹಾಗಾಗಿಯೇ ನೋಡಿ, ಹೊಸ ತಲೆಮಾರಿನ ಯುವಕ–ಯುವತಿಯರು ಹಲವರು ನಾಟಕಗಳಲ್ಲಿ ಪಾತ್ರವಹಿಸುತ್ತಾರೆಯಾದರೂ ಅವರಲ್ಲಿ ಸಂಸ್ಕೃತಿ ಶಿಬಿರದ ಗೋಷ್ಠಿಗಳೇ ಮೊದಲಾಗಿ ಇಲ್ಲಿ ನಡೆಯುವ ಗೋಷ್ಠಿಗಳಿಗೆ ಬಂದು ಚರ್ಚೆಗಳನ್ನು ಕೇಳಿಸಿಕೊಳ್ಳುವವರು ತುಂಬ ಕಮ್ಮಿ. ಅಂಥ ಗೋಷ್ಠಿಗಳಿಗೆ ಹೆಣ್ಣುಮಕ್ಕಳು ಕೆಲವರಾದರೂ ಬರುತ್ತಾರೆ, ಗಂಡುಮಕ್ಕಳು ಬರುವುದು ಇಲ್ಲವೇ ಇಲ್ಲ ಅನ್ನುವಷ್ಟು ಕಮ್ಮಿ. ಇದು ಒಳ್ಳೆಯದಲ್ಲ. ನೀನಾಸಮ್ ಸಂಸ್ಥೆ ಚೆನ್ನಾಗಿ ಬೆಳೆಯಬೇಕಾದರೆ ಬಳಗದ ಈ ಕಿರಿಯರು (ಮತ್ತು ಹಿರಿಯರು ಕೂಡ) ಇಂಥ ಗೋಷ್ಠಿಗಳಲ್ಲಿ ಪಾಲ್ಗೊಳ್ಳುವುದು ತೀರ ಮುಖ್ಯ. ಇಂಥಲ್ಲಿನ ಉಪನ್ಯಾಸ ಮತ್ತು ಚರ್ಚೆಗಳ ಸಾರವನ್ನು ನೀರಂಕೇವಿನ ವಿದ್ಯಾರ್ಥಿಗಳಿಗೆ ತಿಳಿಸಿ ಹೇಳಿದಂತೆಯೇ ಈ ಕಿರಿಯರಿಗೆ (ಮತ್ತು ಕೆಲವು ಹಿರಿಯರಿಗೆ ಕೂಡ) ತಿಳಿಯಹೇಳಬೇಕಾಗಿ ಬರಬಹುದು. ಅದನ್ನು ನಾವು ಅಗತ್ಯವಾಗಿ ಮಾಡಬೇಕು.

ಮೇಲಾಗಿ, ಸಂಸ್ಕೃತಿ ಶಿಬಿರದ ಹೊತ್ತಿನಲ್ಲಿ ಇಲ್ಲಿನ ಬಳಗದವರು, ಪಾಪ, ಶಿಬಿರಕ್ಕೆ ಬಂದವರ ಊಟೋಪಚಾರ, ವಸತಿ, ಸಾರಿಗೆ ಮುಂತಾದ ಸಂಘಟನೆಯ ವ್ಯವಸ್ಥೆಯ ಹತ್ತಾರು ಕೆಲಸಗಳನ್ನು ಮಾಡುತ್ತ ಹಗಲುರಾತ್ರಿ ದುಡಿಯುತ್ತಾರೆ. ಅದರಿಂದಾಗಿ, ಅವರಿಗೆ ಗೋಷ್ಠಿಗಳಲ್ಲಿ ಕೂರಲು ಆಗುವುದಿಲ್ಲ. ಹಾಗಾಗಿ, ಇಲ್ಲಿ, ಬೇರೆ ಸಮಯದಲ್ಲಿ, ನೀನಾಸಮ್ ಬಳಗದವರಿಗಾಗಿಯೇ ವಿಶೇಷವಾದ ಪಠ್ಯಾಭ್ಯಾಸದ ಶಿಬಿರಗಳು, ಚಿಂತನೆಯ ಗೋಷ್ಠಿಗಳು, ಚರ್ಚೆಗಳು ನಡೆಯಬೇಕು. ಕೋಮುವಾದ, ಮಾವೋವಾದ, ಜಾತಿವಾದ, ಖಾಉಜಾ ಮುಂತಾದ ಸಾಮಾಜಿಕ–ರಾಜಕೀಯ ವಿಷಯಗಳನ್ನು ಕುರಿತ ಈ ಚರ್ಚೆಗಳಲ್ಲಿ ಭಾಗವಹಿಸುವಂತೆ ಬಳಗದ ಮಂದಿಯನ್ನು ನಾವು ಪ್ರೀತಿಯಿಂದ ಒತ್ತಾಯಿಸಬೇಕು.

••• ••• •••

ಸಂಸ್ಕೃತಿ ಶಿಬಿರವನ್ನು ಕುರಿತು ಎರಡು ಮಾತು.

ಈಚಿನ ಕೆಲವರ್ಷ ನಾನು ಅದರಲ್ಲಿ ಪಾಲ್ಗೊಂಡಿಲ್ಲ.

ಶಿಬಿರದ ರೂಪುರೇಷೆ, ಅದು ನಡೆಯುವ ರೀತಿ, ಇವು ಬದಲಾಗಬೇಕು ಅನ್ನಿಸುತ್ತದೆ. ಏನೆಲ್ಲ, ಹೇಗೆಲ್ಲ ಬದಲಾಗಬೇಕು ಎಂದು ಹೇಳುವ ಅಧಿಕಪ್ರಸಂಗವನ್ನು ನಾನಿಲ್ಲಿ ಮಾಡುವುದಿಲ್ಲ.

ಸಂಸ್ಕೃತಿ ಶಿಬಿರವು ಕನ್ನಡನಾಡಿನಲ್ಲೇಕೆ, ದೇಶದಲ್ಲಿಯೇ ವಿಶಿಷ್ಟವಾದೊಂದು ಶಿಬಿರವಾಗಿದೆ; ಅದರಲ್ಲಿ ಅನ್ನ, ಮುದ್ದೆ, ರೊಟ್ಟಿ, ಕಾಯಿಪಲ್ಲೆಯಂಥವು ಹೆಚ್ಚಾಗಲಿ, ಸಮಾಜವಾದೀ ನಂದಾದೀಪಗಳು, ಹಣತೆಗಳು ಹೆಚ್ಚಾಗಿ ಬೆಳಗಲಿ.

••• ••• •••

ಶುರುವಿಗೇ ಹೇಳಿದ್ದೇನೆ: ನನಗೆ ತೋರುವಂತೆ, ನೀರಂಕೇ ಮತ್ತು ತಿರುಗಾಟಗಳೇ ನೀನಾಸಮ್ಮಿನ ಮುಖ್ಯವಾದ ಅಂಗಗಳಾಗಿವೆ. ಆದರೆ, ಈಚಿನ ವರ್ಷಗಳಲ್ಲಿ, ಹಲವು ತೆರನ ಸಭೆ, ಶಿಬಿರ ಮತ್ತು ಗೋಷ್ಠಿಗಳ ಸಂಘಟನೆಯ ಹೊರೆಯೇ ಹೆಚ್ಚಾಗಿ, ಅತಿಮುಖ್ಯವಾದ ಈ ಎರಡು ಅಂಗಗಳ ಆರೈಕೆ ಕಡಿಮೆಯಾಗಿದೆ, ಅವು ಸೊರಗುತ್ತಿವೆ ಅನ್ನಿಸಿದೆ. ಇದಕ್ಕೆ ಏನು ಮಾಡಬೇಕೆಂದು ತಾವೆಲ್ಲ ದಯವಿಟ್ಟು ಯೋಚಿಸಬೇಕು.

••• ••• •••

ಕಡೆಯದಾಗಿ, ನನಗೆ ನೀನಾಸಮ್‌ನ ಕೆಲಸಗಳಲ್ಲಿ ಬಹಳ ಇಷ್ಟವಾದ ಕೆಲಸವೆಂದರೆ, ಈಚೆಗೆ ಇಲ್ಲಿ ನಡೆಯುತ್ತಿರುವ ಊರುಮನೆ ಉತ್ಸವ. ಇದು ಸುತ್ತಮುತ್ತಲಿನ ಗ್ರಾಮದ ಜನರ ಹಾಡು, ಹಸೆ, ಕುಣಿತ, ನಾಟಕ, ಹಾಗೂ ಅವರ ಬೇರೆ ಹಲಬಗೆಯ ಪ್ರತಿಭೆಗೆ ವೇದಿಕೆಯನ್ನೊದಗಿಸಿದೆ. ನೀನಾಸಮ್‌ನ ಬಳಗದವರು ಸುತ್ತುಮುತ್ತಿನ ಗ್ರಾಮಗಳಿಗೆ ತೆರಳಿ ಅಲ್ಲಿನ ಜನರಿಗೆ ನಾಟಕ ಕಲಿಸುತ್ತಿರುವುದು, ಆ ನಾಟಕಗಳನ್ನು ಊರುಮನೆ ಉತ್ಸವದಲ್ಲಿ ಆಡುತ್ತಿರುವುದು, ಇದೆಲ್ಲ ತುಂಬ ಒಳ್ಳೆಯದು. ಈ ಸಮಾಜಮುಖೀಯತೆಯು ನಮ್ಮೆಲ್ಲರನ್ನು, ನಮ್ಮ ಸುತ್ತಿನವರನ್ನು, ನೈಜವಾದ ಸಮಾಜವಾದೀ ಸಮಾಜದತ್ತ ಕೊಂಡೊಯ್ಯುವಂತಾಗಲಿ. ಈ ಸಮಾಜವಾದ–ಸಮಾಜಮುಖೀಯತೆಯೇ ನೀನಾಸಮ್ಮಿನ ಬುನಾದಿಯಲ್ಲವೇ?

••• ••• •••

ಒಂದರ್ಥದಲ್ಲಿ ನಾನು ಕೂಡ ನೀನಾಸಮ್ ಬಳಗದವನೇ ಆಗಿದ್ದೇನೆ. ನಾನು ಹಲವು ದಶಕಗಳಿಂದ ಹಾಗಿರುವಂತೆ ತಾವೆಲ್ಲ ನೋಡಿಕೊಂಡಿದ್ದೀರಿ; ಈಗಿಷ್ಟುಹೊತ್ತೂ ನನ್ನ ಮಾತು ಕೇಳಿಸಿಕೊಂಡಿದ್ದೀರಿ. ತಮ್ಮೆಲ್ಲರ ಒಲುಮೆಗೆ, ತಾಳ್ಮೆಗೆ ಕೃತಜ್ಞನಾಗಿದ್ದೇನೆ.

•••

## ನೀನಾಸಮ್ ಸಂಸ್ಕೃತಿ ಶಿಬಿರದ ವರದಿ

ಈ ಸಾಲಿನ ಸಂಸ್ಕೃತಿ ಶಿಬಿರವು ಇದೇ 2012ರ ಅಕ್ಟೋಬರ್ 7ರಿಂದ 13ರವರೆಗೆ, ಡಾ. ಯು.ಆರ್. ಅನಂತಮೂರ್ತಿಯವರ ನಿರ್ದೇಶನದಲ್ಲಿ ನಡೆಯಿತು. 'ಸೀಮೋಲ್ಲಂಘನ' ಎನ್ನುವುದು ಈ ಶಿಬಿರದ ಮುಖ್ಯ ವಿಷಯವಾಗಿತ್ತು. ಈ ಒಂದು ವಾರ, ಇತ್ತೀಚಿನ ವರ್ಷಗಳಲ್ಲಿ ಸಾಹಿತ್ಯ, ಸಂಗೀತ, ನೃತ್ಯ, ನಾಟಕ ಹಾಗೂ ಚಿಂತನೆಗಳಲ್ಲಿ ನಡೆದ, ನಡೆಯುತ್ತಿರುವ ಹಾಗೂ ನಡೆಯಬೇಕಾಗಿರುವ ಸೀಮೋಲ್ಲಂಘನದ ಕುರಿತು ಉಪನ್ಯಾಸ, ಚರ್ಚೆ, ಪ್ರಾತ್ಯಕ್ಷಿಕೆ ಹಾಗೂ ಪ್ರದರ್ಶನಗಳು ನಡೆದವು. ಉಲ್ಲಂಘನೆಯ ವಿಭಿನ್ನ ಹಾದಿಗಳು, ಉಲ್ಲಂಘನೆ ಮತ್ತು ಮೀರುವಿಕೆ, ಜಾತಿಗಳು ಮತ್ತು ಉಲ್ಲಂಘನೆಗಳು, ತಾತ್ತ್ವಿಕ ಸೀಮೆಗಳು ಮತ್ತು ಉಲ್ಲಂಘನೆ, ಸಾಹಿತ್ಯ ಕೃತಿಗಳಲ್ಲಿ ಉಲ್ಲಂಘನೆ, ಠಾಕೂರರ ಕಲೆ ಮತ್ತು ಸಂಗೀತಗಳಲ್ಲಿ ಉಲ್ಲಂಘನೆ, ಕನ್ನಡ ಕಾವ್ಯದಲ್ಲಿ ಸೀಮೋಲ್ಲಂಘನೆ, ಕಥನ ಮತ್ತು ಆತ್ಮಕಥೆಗಳಲ್ಲಿ ಸೀಮೋಲ್ಲಂಘನೆ, ಚಲನಚಿತ್ರ ಮಾಧ್ಯಮದಲ್ಲಿ ಉಲ್ಲಂಘನೆ, ದೃಶ್ಯಕಲೆಗಳಲ್ಲಿ ಉಲ್ಲಂಘನೆ, ಉಲ್ಲಂಘನೆಗಳಿಗೆ ಎದುರಾಗುವ ಪ್ರತಿಬಂಧನೆಗಳು ಮುಂತಾದ ವಿಷಯಗಳ ಕುರಿತು ಉಪನ್ಯಾಸಗಳು ನಡೆದವು. ಶ್ರೀಯುತರುಗಳಾದ ಸಮೀಕ್ ಬಂದೋಪಾಧ್ಯಾಯ, ಡಾ. ಗೋಪಾಲ ಗುರು, ಜಿ. ರಾಜಶೇಖರ, ಸುಂದರ ಸಾರುಕ್ಕೈ, ಮನು ಚಕ್ರವರ್ತಿ, ಹೆಚ್.ಎಸ್. ವೆಂಕಟೇಶಮೂರ್ತಿ, ಎಸ್. ದಿವಾಕರ, ಗಿರೀಶ ಕಾಸರವಳ್ಳಿ, ವೈದೇಹಿ, ಎಂ.ಎಸ್. ಆಶಾದೇವಿ, ಸುದೇಷ್ಣಾ ಬ್ಯಾನರ್ಜಿ, ವಿವೇಕ ಶಾನಭಾಗ, ಗೋಪಾಲಕೃಷ್ಣ ಪೈ, ಸದಾನಂದ ಮೆನೋನ್, ವಿದ್ಯಾರ್ಥಿ ಚಟರ್ಜಿ, ರವಿಕುಮಾರ್ ಕಾಶಿ, ಎಂ.ಡಿ. ಪಲ್ಲವಿ ಮೊದಲಾದವರು ಉಪನ್ಯಾಸ ಗೋಷ್ಠಿಗಳನ್ನು ನಡೆಸಿಕೊಟ್ಟರು. ಗಿರೀಶ ಕಾಸರವಳ್ಳಿಯವರು ನಿರ್ದೇಶಿಸಿದ ಚಲನಚಿತ್ರ 'ಕೂರ್ಮಾವತಾರ' ಮತ್ತು ಆನಂದ ಪಟವರ್ಧನರು ನಿರ್ಮಿಸಿದ ಸಾಕ್ಷ್ಯಚಿತ್ರ 'ಜೈ ಭೀಮ್ ಕಾಮ್ರೇಡ್' ಇವುಗಳನ್ನು ಪ್ರದರ್ಶಿಸಿ ಚರ್ಚಿಸಲಾಯಿತು. ಕಮಾಲ್ ಪ್ರಥಿ ತಂಡದವರಿಂದ ಸಾದತ್ ಹಸನ್ ಮಾಂಟೋ ಕತೆಗಳನ್ನಾಧರಿಸಿದ ಮುಕ್ತರಂಗಪ್ರಯೋಗ 'ಆದಾಬ್ ಮಾಂಟೋ ಸಾಹೇಬ್', ಜನಮನದಾಟ ತಂಡದವರಿಂದ ಎ. ರೇವತಿಯವರ

ಆತ್ಮಕತೆಯನ್ನಾಧರಿಸಿದ ನಾಟಕ 'ಬದುಕು ಬಯಲು' (ನಿ: ಗಣೇಶ ಎಂ.), ನೀನಾಸಮ್‌ನವರಿಂದ ಠಾಕೂರರ ಕತೆಗಳನ್ನಾಧರಿಸಿದ 'ಬಾಬುಗಿರಿ' (ನಿ: ಅಕ್ಷರ ಕೆ.ವಿ.), ಕಿನ್ನರ ಮೇಳದ ಸುಶೀಲಾ ಕೆಳಮನೆಯವರಿಂದ ಸರಸ್ವತೀಬಾಯಿ ರಾಜವಾಡೆಯವರ ಆತ್ಮಕತೆಯನ್ನಾಧರಿಸಿದ ಏಕವ್ಯಕ್ತಿ ಪ್ರಯೋಗ 'ಗಿರಿಬಾಲೆ' (ನಿ: ಬಿ.ಆರ್. ವೆಂಕಟರಮಣ ಐತಾಳ), ಸಂಚಾರಿ ಥಿಯೇಟರ್ಸ್ ತಂಡದವರಿಂದ ವೈದೇಹಿ ಕವಿತೆಗಳನ್ನಾಧರಿಸಿದ ರಂಗಪ್ರಸ್ತುತಿ 'ವ್ಯಾನಿಟಿ ಬ್ಯಾಗ್' (ನಿ: ಮಂಗಳಾ ಎನ್.) ಮುಂತಾದ ಕಿರುನಾಟಕಗಳ ಪ್ರದರ್ಶನ ಮತ್ತು ಚರ್ಚೆಗಳನ್ನು ಏರ್ಪಡಿಸಲಾಗಿತ್ತು. ಟಿ.ಪಿ. ಅಶೋಕ ಮತ್ತು ಜಶವಂತ ಜಾಧವ್ ಇವರು ಚರ್ಚೆ–ಗೋಷ್ಠಿಗಳನ್ನು ನಿರ್ವಹಿಸಿಕೊಟ್ಟರು.

ಪ್ರತಿದಿನ ಸಂಜೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು: ದಿ.7ರಂದು ತಿರುಗಾಟದ ನಾಟಕ 'ವಿಗಡ ವಿಕ್ರಮರಾಯ' (ಸಂಸರ ನಾಟಕ, ನಿ: ಮಂಜು ಕೊಡಗು), ದಿ.8ರಂದು ತಿರುಗಾಟದ ನಾಟಕ 'ಮೊಕ್ಕಾಂ ಪೋಸ್ಟ್ ಬೊಂಬಿಲವಾಡಿ' (ಪರೇಶ ಮೊಕಾಶಿಯವರ ಮರಾಠಿ ನಾಟಕ, ಅನು., ನಿ: ಓಂಕಾರ್ ಕೆ.ಆರ್.), ದಿ.9ರಂದು ನೀನಾಸಮ್ ತಂಡದವರಿಂದ ಭವಭೂತಿಯ 'ಉತ್ತರರಾಮಚರಿತೆ' (ಕನ್ನಡಕ್ಕೆ: ಬನ್ನಂಜೆ ಗೋವಿಂದಾಚಾರ್ಯ, ನಿ: ಬಿ.ಆರ್. ವೆಂಕಟರಮಣ ಐತಾಳ), ದಿ.10ರಂದು ಬೆಂಗಳೂರು ಸಹೋದರರಿಂದ ಕರ್ಣಾಟಕಿ ಸಂಗೀತ, ದಿ.11ರಂದು ಮಲ್ಲಿಕಾರ್ಜುನ ಮುದಕವಿ ದಾದನಟ್ಟಿ ತಂಡದವರಿಂದ 'ಶ್ರೀಕೃಷ್ಣಪಾರಿಜಾತ', ದಿ.12ರಂದು ಎಂ.ಡಿ. ಪಲ್ಲವಿ ನೇತೃತ್ವದ ಹಮ್‌ಡ್ರಮ್ ತಂಡದವರಿಂದ ಕನ್ನಡ ಕಾವ್ಯಗಳನ್ನಾಧರಿಸಿದ ಸಮಕಾಲೀನ ಸಂಗೀತ ಪ್ರಯೋಗ 'ಕಾವ್ಯ–ಗೀತ' ಮತ್ತು ಬೆಂಗಳೂರಿನ ಸಂಚಾರಿ ಥಿಯೇಟರ್ಸ್ ತಂಡದವರಿಂದ 'ವ್ಯಾನಿಟಿ ಬ್ಯಾಗ್' (ವೈದೇಹಿ ಕವಿತೆಗಳ ರಂಗಪ್ರಸ್ತುತಿ, ನಿ: ಮಂಗಳಾ ಎನ್.), ದಿ.13ರಂದು ದೃಶ್ಯಾಂತರ ಬೆಂಗಳೂರು ತಂಡದ ಮಧುಲಿತಾ ಮೊಹಾಪಾತ್ರ ಮತ್ತು ತಂಡದವರಿಂದ 'ಓಡಿಸ್ಸಿ ನೃತ್ಯ' –– ಇವು ಪ್ರತಿದಿನ ಸಂಜೆ ನಡೆದ ಕಾರ್ಯಕ್ರಮಗಳು.

ಕರ್ನಾಟಕದ ವಿವಿಧ ಪ್ರದೇಶಗಳಿಂದ ಬಂದ ಸುಮಾರು 165 ಮಂದಿ ಶಿಬಿರಾರ್ಥಿಗಳು – ಅವರಲ್ಲಿ ಬಹುಮಂದಿ ಕಾಲೇಜು ವಿದ್ಯಾರ್ಥಿಗಳು – ಈ ಶಿಬಿರದಲ್ಲಿ ಭಾಗವಹಿಸಿದರು. ಊಟ–ವಸತಿ ವ್ಯವಸ್ಥೆ, ಅತಿಥಿಗಳ ಪ್ರಯಾಣವೆಚ್ಚ ಮತ್ತು ಗೌರವಧನ ಮುಂತಾಗಿ ಶಿಬಿರಕ್ಕೆ ತಗುಲಿದ ಒಟ್ಟು ಖರ್ಚು ಸುಮಾರು ರೂ. 8,00,000. ಶಿಬಿರಾರ್ಥಿಗಳಿಂದ ಸಂಗ್ರಹಿಸಿದ ಶುಲ್ಕ ರೂ. 2,19,000=00. ಕಡಿಮೆಬಿದ್ದ ಮೊತ್ತವನ್ನು ಹಿವೋಸ್ ಸಂಸ್ಥೆಯ ಅನುದಾನ ಮತ್ತು ಇತರ ದಾನಿಗಳ ಕೊಡುಗೆಗಳಿಂದ ಭರಿಸಿಕೊಳ್ಳಲಾಗಿದೆ.

ನೀನಾಸಮ್ ರಂಗಶಿಕ್ಷಣ ಕೇಂದ್ರ

**ಬೇಸಿಗೆ ರಂಗತರಬೇತಿ ಶಿಬಿರ – ಮೇ ೨೦೧೩**

ಪ್ರಕಟಣೆ – ಶಿಬಿರಾರ್ಥಿಗಳಿಗೆ ಆಹ್ವಾನ

ಕಳೆದ ಎರಡೂವರೆ ದಶಕಗಳಿಂದ ರಂಗತರಬೇತಿ ನಡೆಸುತ್ತಿರುವ ನೀನಾಸಮ್ ರಂಗಶಿಕ್ಷಣ ಕೇಂದ್ರವು ಇದೇ ೨೦೧೩ ಮೇ ೧೧ರಿಂದ ೩೧ರ ವರೆಗೆ ಮೂರು ವಾರಗಳ ರಂಗತರಬೇತಿ ಶಿಬಿರವೊಂದನ್ನು ನಡೆಸುತ್ತಿದ್ದು ಅದರ ವಿವರಗಳು ಹೀಗಿವೆ:

೧. ೧೮ ರಿಂದ ೩೫ ವರ್ಷದ ನಡುವಿನ ಎಸ್.ಎಸ್.ಎಲ್.ಸಿ. ವರೆಗೆ ಓದಿದ ಯಾರೂ ಈ ಶಿಬಿರದಲ್ಲಿ ಪಾಲ್ಗೊಳ್ಳಬಹುದು.

೨. ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಶಿಬಿರ ಶುಲ್ಕ ಇರುವುದಿಲ್ಲ. ಆದರೆ, ಶಿಬಿರದ ಅವಧಿಯ ಊಟವಸತಿ ವ್ಯವಸ್ಥೆಯ ಭಾಗಶಃ ವೆಚ್ಚವಾಗಿ ಒಟ್ಟು ರೂ. ೨೦೦೦ ಗಳನ್ನು ಪ್ರತಿಯೊಬ್ಬ ಶಿಬಿರಾರ್ಥಿಯೂ ಪಾವತಿಸಬೇಕು.

೩. ಸೀಮಿತ ಸಂಖ್ಯೆಯ ಶಿಬಿರಾರ್ಥಿಗಳಿಗೆ ಪ್ರವೇಶ; ಅರ್ಜಿಯ ವಿವರ ಗಳನ್ನಾಧರಿಸಿ ಆಯ್ಕೆ ಮಾಡಲಾಗುತ್ತದೆ.

೪. ಈ ಶಿಬಿರದಲ್ಲಿ ರಂಗಶಿಕ್ಷಣ ಕೇಂದ್ರದ ಅಧ್ಯಾಪಕರಲ್ಲದೆ ಆಹ್ವಾನಿತ ಗಣ್ಯರು ತರಬೇತಿ ನಡೆಸಿಕೊಡುತ್ತಾರೆ. ರಂಗಮಾಧ್ಯಮದ ಬಗ್ಗೆ ಮಾಹಿತಿಗಳನ್ನು ನೀಡುವ ಜತೆಗೆ ಶಿಬಿರಾರ್ಥಿಗಳಿಗೆ ನುರಿತ ನಿರ್ದೇಶಕರಿಂದ ರಂಗನಾಟಕ ಪ್ರಯೋಗಗಳನ್ನೂ ಮಾಡಿಸಲಾಗುತ್ತದೆ.

೫. ಶಿಬಿರದಲ್ಲಿ ಪೂರ್ಣಾವಧಿ ಭಾಗವಹಿಸುವುದು ಕಡ್ಡಾಯ. ಅಭಿನಯ ವ್ಯಾಯಾಮಕ್ಕೆ ಅಗತ್ಯವಾದ ದಾರ್ಢ್ಯತೆ ಇರುವುದು ಅಗತ್ಯ.

ಆಸಕ್ತ ಅಭ್ಯರ್ಥಿಗಳು ನೀನಾಸಮ್‌ನಿಂದ ಪ್ರವೇಶ ಪತ್ರವನ್ನು ತರಿಸಿಕೊಂಡು ಅದನ್ನು ತುಂಬಿ ದಿನಾಂಕ ೨೦ ಏಪ್ರಿಲ್ ೨೦೧೩ರೊಳಗೆ ತಲುಪುವಂತೆ ಅರ್ಜಿ ಸಲ್ಲಿಸಬಹುದು. ಅಥವಾ ಅಂತರ್ಜಾಲತಾಣ www.ninasam.org ದಲ್ಲಿ ಕೂಡಾ ಆನ್-ಲೈನ್ ಅರ್ಜಿ ಸಲ್ಲಿಸಬಹುದು. ಅರ್ಜಿಯ ಆಧಾರದ ಮೇಲೆ ಆಯ್ಕೆಯಾದವರಿಗೆ ದಿನಾಂಕ ೩೦ ಏಪ್ರಿಲ್ ೨೦೧೩ರೊಳಗೆ ತಿಳಿಸಲಾಗುತ್ತದೆ. ಈ ಬಗ್ಗೆ ಸಂದರ್ಶನ ಇರುವುದಿಲ್ಲ.

ಸಂಪರ್ಕ ವಿಳಾಸ

ಸಂಚಾಲಕರು, ನೀನಾಸಮ್ ರಂಗಶಿಕ್ಷಣ ಕೇಂದ್ರ, ಹೆಗ್ಗೋಡು, ಸಾಗರ,

ಶಿವಮೊಗ್ಗ ಜಿಲ್ಲೆ ೫೭೭ ೪೧೭

ದೂರವಾಣಿ ಸಂಖ್ಯೆ ೦೮೧೮೩ - ೨೬೫೬೪೬

(ಚರ: ಶ್ರೀ ಸಿ.ಆರ್. ವಿಶ್ವನಾಥ ಭಟ್ - ೭೭೬೦೮-೯೭೭೦೦)

**ಮಾತುಕತೆ ೧೦೪**

ನೀನಾಸಮ್ ಹೆಗ್ಗೋಡು (ಸಾಗರ) ಕರ್ನಾಟಕ ೫೭೭ ೪೧೭

ದೂರವಾಣಿ: ೦೮೧೮೩-೨೬೫೬೪೬

www.ninasam.org

ಖಾಸಗಿ ಪ್ರಸಾರದ ತ್ರೈಮಾಸಿಕ ಸಂಪರ್ಕಪತ್ರ

(ಫೆಬ್ರವರಿ-ಮೇ-ಆಗಸ್ಟ್-ನವೆಂಬರ್)

ಸಂಪಾದಕ: ಬಿ.ಆರ್. ವೆಂಕಟರಮಣ ಐತಾಳ

ಸಂಪಾದಕ ಮಂಡಳಿ: ಟಿ.ಪಿ.ಅಶೋಕ, ಜಶವಂತ ಜಾಧವ್

ವಾರ್ಷಿಕ ವರ್ಗಣಿ: ಎಂಬತ್ತು ರೂಪಾಯಿ

ಅಕ್ಷರ ಜೋಡಣೆ: ಅಕ್ಷರ ಗಣಕ, ಹೆಗ್ಗೋಡು,

ಮುದ್ರಣ: ಸ್ವಾಬ್ ಪ್ರಿಂಟರ್ಸ್, ಬೆಂಗಳೂರು

**ನವೆಂಬರ್ ೨೦೧೨ ವರ್ಷ ಇಪ್ಪತ್ತಾರು ಸಂಚಿಕೆ ನಾಲ್ಕು**



| | | |
|---|---|---|
| ೧. | **ನೀನಾಸಮ್ ಒಂದು ಅವಲೋಕನ** | ಪುಟ ೧ |
| ೨. | **ಇಂದಿನ ಸಮಸ್ಯೆಗಳಿಗೆ ಸ್ಪಂದಿಸಬೇಕು** | |
| | ಡಿ.ಎಸ್. ನಾಗಭೂಷಣ | ಪುಟ ೩ |
| ೩. | **ಸ್ವಾಯತ್ತತೆಯನ್ನು ಕಾಪಾಡಿಕೊಳ್ಳಬೇಕು** | |
| | ಜಿ. ರಾಜಶೇಖರ | ಪುಟ ೧೬ |
| ೪. | **ಮುಕ್ತ ಚಿಂತನೆಗೆ ಅವಕಾಶ** | |
| | ಡಾ. ಜಿ.ಎಸ್. ಸದಾನಂದ | ಪುಟ ೨೨ |
| ೫. | **ಮುದ್ದೆ ರೊಟ್ಟಿ ಕಾಯಿಪಲ್ಲೆ ಹೆಚ್ಚಾಗಲಿ** | |
| | ರಘುನಂದನ | ಪುಟ ೨೯ |
| ೬. | **ನೀನಾಸಮ್ ಸಂಸ್ಕೃತಿ ಶಿಬಿರದ ವರದಿ** | ಪುಟ ೪೬ |



**MAATHUKATHE** NOV. 2012 (YEAR 26 ISSUE 4)
NINASAM QUARTERLY NEWSLETTER
PUBLISHED EVERY FEB;MAY;AUG;NOV.
ANNUAL SUBSCRIPTION: Rs.80 (EIGHTY ONLY)
FOR PRIVATE CIRCULATION
**NINASAM HEGGODU (SAGAR) KARNATAKA 577 417**


← second cover

Third cover →


**ಅಕ್ಷರ ಪ್ರಕಾಶನ**

ಹೆಗ್ಗೋಡು (ಸಾಗರ) ಕರ್ನಾಟಕ - ೫೭೭ ೪೧೭

**ಈಚಿನ ಪ್ರಕಟಣೆಗಳು**

| | |
|---|---|
| **ಅರೆಶತಮಾನದ ಅಲೆಬರಹಗಳು** | |
| (ಕೆ.ವಿ. ಸುಬ್ಬಣ್ಣ ಸಮಗ್ರ ಬರಹಗಳು) | ರೂ. ೫೮೦ |
| **ಎತ್ತ ಹಾರಿದೆ ಹಂಸ** (ನಾಟಕ - ರಘುನಂದನ) | ರೂ. ೭೦ |
| **ಸ್ವರ್ಗಸಾಧನೆಯ ಉತ್ಕಟ ಬಯಕೆ: ಸಂದೇಹಿ ಮುಸ್ಲಿಮನ ಯಾತ್ರೆಗಳು** | |
| (ಜಿಯಾವುದ್ದೀನ್ ಸರದಾರ್ - ಕನ್ನಡಕ್ಕೆ: ಮಾಧವ ಚಿಪ್ಪಳಿ) | ರೂ. ೨೩೦ |
| **ಸಂಗೀತ ಸಂವಾದ** (ಭಾಸ್ಕರ ಚಂದಾವರ್ಕರ್ - ವೈದೇಹಿ) | ರೂ. ೧೪೦ |
| **ಶಿಶಿರ ವಸಂತ** (ಶೇಕ್ಸ್‌ಪಿಯರ್‌ನ 'ದಿ ವಿಂಟರ್ಸ್ ಟೇಲ್'ಅನುವಾದ) | |
| ಅಕ್ಷರ ಕೆ.ವಿ. | ರೂ. ೭೫ |
| **ಅಂತಃಪಠ್ಯ ಮತ್ತು ಇತರ ಪ್ರಬಂಧಗಳು** — ಅಕ್ಷರ ಕೆ.ವಿ. | ರೂ. ೧೮೦ |
| **ಸಾಹಿತ್ಯ ಸಂಚಾರ** (ವಿಮರ್ಶೆಯ ಬರಹಗಳು - ಟಿ.ಪಿ. ಅಶೋಕ) | ರೂ. ೨೬೦ |
| **ರವೀಂದ್ರನಾಥ ಠಾಕೂರ್ ಅವರ ಎರಡು ನಾಟಕಗಳು** (ಕೆಂಪು ಕಣಗಿಲೆ | |
| ಹಾಗೂ ರಾಜ ಮತ್ತು ರಾಣಿ ಅನುವಾದ) ಕೆ.ವಿ. ಸುಬ್ಬಣ್ಣ | ರೂ. ೧೦೦ |
| **ಯಃಕಶ್ಚಿತ್ ಹುಳದ ಕಥೆ** (ಎರಡು ಕಥನ ಕಾವ್ಯಗಳು) | |
| ಗ.ಸು. ಭಟ್ಟ ಬೆತ್ತಗೇರಿ | ರೂ. ೫೦ |
| **ನಾಟ್ಯಶಾಸ್ತ್ರ** (ಕನ್ನಡ ಅನುವಾದ) ಅನು: ಆದ್ಯ ರಂಗಾಚಾರ್ಯ | ರೂ. ೪೦೦ |
| **ರಂಗಪ್ರಯೋಗ** (ರಂಗ ಅಭಿನಯ, ರಂಗತಂತ್ರಗಳು ಮತ್ತು | |
| ರಂಗಸಿದ್ಧತೆಯ ಪರಿಚಯ) ಅಕ್ಷರ ಕೆ.ವಿ. | ರೂ. ೨೧೦ |
| **ಅನುಕ್ತ** (ದೃಶ್ಯಕಲೆಗಳ ರಸಗ್ರಹಣ ಕುರಿತ ಬರಹಗಳು - | |
| ರವಿಕುಮಾರ್ ಕಾಶಿ) | ರೂ. ೩೨೫ |
| **ಕಣ್ಣೆಲೆ** (ದೃಶ್ಯಕಲೆ ಕುರಿತ ಬರಹಗಳು - ರವಿಕುಮಾರ್ ಕಾಶಿ) | ರೂ. ೧೧೫ |
| **ಹರಿವ ನೀರು** (ಪ್ರಬಂಧಗಳು - ವೈದೇಹಿ) | ರೂ. ೧೫೫ |
| **ಹುಡುಕಾಟವನ್ನು ನಿಲ್ಲಿಸದಿರೋಣ** (ಎಸ್. ಎನ್. ಬಾಲಗಂಗಾಧರ - | |
| ಕನ್ನಡಕ್ಕೆ: ಜೆ.ಎಸ್. ಸದಾನಂದ) | ರೂ. ೧೧೫ |
| **ಭಾರತೀಯ ದರ್ಶನಗಳು ಮತ್ತು ಭಾಷೆ** (ಎಂ.ಎ. ಹೆಗಡೆ) | ರೂ. ೧೧೫ |
| **ಕಾಲದಲೆಯ ಮೇಲೆ** (ಕವನ ಸಂಕಲನ - ಕೆ.ಎಸ್. ಪೂರ್ಣಿಮಾ) | ರೂ. ೬೦ |
| **ಸುರಗಿ** (ಯು.ಆರ್. ಅನತಮೂರ್ತಿಯವರ ಆತ್ಮಕಥನ - | |
| ನಿರೀಪಣೆ ಮತ್ತು ಸಂಯೋಜನೆ: ಜ.ನಾ. ತೇಜಶ್ರೀ | ರೂ. ೨೫೦ |
| **ಫಾಚರ್ ಫೋಚರ್** (ಕಥಾ ಸಂಕಲನ - ವಿವೇಕ ಶಾನಭಾಗ) | ರೂ. ೯೫ |
| **ಭಾರತ ಯಾತ್ರೆ** (ನಾಟಕ - ಅಕ್ಷರ ಕೆ.ವಿ.) | ರೂ. ೭೦ |